ಸಂಪುಟ 3, ಸಂಚಿಕೆ 1

ಜುಲೈ 1-15, 2022

ಉಚಿತ ವಿತರಣೆಗಾಗಿ

ನ್ಯೂ ಇಂಡಿಯಾ ಸಮಾಚಾರ

FOLLOW US @NISPIBIndia

ಕೌಶಲ್ಯ ಭಾರತ ಬದಲಾಗುತ್ತಿರುವ ಭಾರತ

ನಮ್ಮ ದೇಶವು ಸ್ವಾವಲಂಬಿಯಾಗಲು
ಹೊಸ ಅರುಣೋದಯ, ಹೊಸ ಸಮೃದ್ಧಿ...

ಡಾ. ಶ್ಯಾಮ ಪ್ರಸಾದ್ ಮುಖರ್ಜಿ

'ಒಂದು ರಾಷ್ಟ್ರ, ಒಂದು ಕಾನೂನು, ರಾಷ್ಟ್ರದ ಒಬ್ಬ ಮುಖ್ಯಸ್ಥ ಮತ್ತು ಒಂದು ಚಿಹ್ನೆ' ಯ ಪ್ರವರ್ತಕರು

ಜುಲೈ 6 ರಂದು ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಅವರ 122 ನೇ ಜನ್ಮದಿನದಂದು ಅವರಿಗೆ ಹೃತ್ಪೂರ್ವಕ ನಮನಗಳು

ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಅವರು ಭಾರತೀಯ ಜನಸಂಘದ ಸ್ಥಾಪಕ ಸದಸ್ಯರಲ್ಲಿ ಒಬ್ಬರು ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ವಿಧಿಸಲಾದ 370 ನೇ ವಿಧಿಯನ್ನು ವಿರೋಧಿಸಿದ ಪ್ರಮುಖರು. ಅವರು ತಮ್ಮ ಇಡೀ ಜೀವನವನ್ನು ಭಾರತದ ಏಕತೆ, ಸಮಗ್ರತೆ ಮತ್ತು ಪ್ರಗತಿಗೆ ಮುಡಿಪಾಗಿಟ್ಟವರು. ಅವರು ತಮ್ಮ ಉನ್ನತ ಆದರ್ಶಗಳೊಂದಿಗೆ ದೇಶದಾದ್ಯಂತ ಲಕ್ಷಾಂತರ ಜನರನ್ನು ಪ್ರೇರೇಪಿಸಿದರು. ಅದೇ ಸಮಯದಲ್ಲಿ, ಅವರು ಮಹಾನ್ ಪಾಂಡಿತ್ಯ ಮತ್ತು ಬೌದ್ಧಿಕತೆಯ ಮೂಲಕ ಅಳಿಸಲಾಗದ ಛಾಪನ್ನು ಮೂಡಿಸಿದರು ಮತ್ತು ರಾಷ್ಟ್ರ ನಿರ್ಮಾಣಕ್ಕಾಗಿ ತಮ್ಮ ಜೀವನದುದ್ದಕ್ಕೂ ಅವಿರತವಾಗಿ ಶ್ರಮಿಸಿದರು.

> "ಭಾರತದ ಕೀರ್ತಿಯು ನಿಂತಿರುವುದು ಅದರ ರಾಜಕೀಯ ಸಂಸ್ಥೆಗಳು ಮತ್ತು ಮಿಲಿಟರಿ ಶಕ್ತಿಯ ಮೇಲಲ್ಲ, ಬದಲಿಗೆ ಅದರ ಸರ್ವೋಚ್ಚ ಶಕ್ತಿಯ ಅಗಾಧತೆಯು ಆಧ್ಯಾತ್ಮಿಕ ಶ್ರೇಷ್ಠತೆ, ಸತ್ಯ ಮತ್ತು ಸ್ವಯಂ ಸಿದ್ಧಾಂತಗಳು, ನೊಂದ ಜನರ ಸೇವೆಯ ನಂಬಿಕೆಯ ಮೇಲೆ ನಿಂತಿದೆ.
>
> - ಡಾ.ಶ್ಯಾಮ ಪ್ರಸಾದ್ ಮುಖರ್ಜಿ

"ಡಾ ಶ್ಯಾಮ ಪ್ರಸಾದ್ ಮುಖರ್ಜಿ ಅವರ ಜಯಂತಿಯಂದು ಅವರಿಗೆ ನನ್ನ ನಮನಗಳು. ನಿಷ್ಠಾವಂತ ದೇಶಭಕ್ತರಾದ ಅವರು ಭಾರತದ ಅಭಿವೃದ್ಧಿಗೆ ಆದರ್ಶಪ್ರಾಯವಾದ ಕೊಡುಗೆಗಳನ್ನು ನೀಡಿದರು. ಅವರು ಭಾರತದ ಏಕತೆಯನ್ನು ಹೆಚ್ಚಿಸಲು ಧೈರ್ಯಶಾಲಿ ಪ್ರಯತ್ನಗಳನ್ನು ಮಾಡಿದರು. ಅವರ ಸಿದ್ಧಾಂತಗಳು ಮತ್ತು ಆದರ್ಶಗಳು ರಾಷ್ಟ್ರದಾದ್ಯಂತ ಲಕ್ಷಾಂತರ ಜನರಿಗೆ ಶಕ್ತಿಯನ್ನು ನೀಡುತ್ತಿವೆ.

-ನರೇಂದ್ರ ಮೋದಿ, ಪ್ರಧಾನ ಮಂತ್ರಿ

ನ್ಯೂ ಇಂಡಿಯಾ ಸಮಾಚಾರ

ಸಂಪುಟ 3, ಸಂಚಿಕೆ 1 ಜುಲೈ 1-15, 2022

ಸಂಪಾದಕರು

ಜೈದೀಪ್ ಭಟ್ನಾಗರ್
ಪ್ರಧಾನ ಮಹಾನಿರ್ದೇಶಕರು,
ಪ್ರೆಸ್ ಇನ್‌ಫರ್ಮೇಶನ್ ಬ್ಯೂರೋ, ನವದೆಹಲಿ

ಹಿರಿಯ ಸಲಹಾ ಸಂಪಾದಕರು

ಸಂತೋಷ್ ಕುಮಾರ್

ಹಿರಿಯ ಸಹಾಯಕ ಸಲಹಾ ಸಂಪಾದಕರು

ವಿಭೋರ್ ಶರ್ಮಾ

ಸಹಾಯಕ ಸಲಹಾ ಸಂಪಾದಕರು

ಚಂದನ್ ಕುಮಾರ್ ಚೌಧರಿ
ಅಖಿಲೇಶ್ ಕುಮಾರ್

ಭಾಷಾ ಸಂಪಾದಕರು

ಸುಮಿತ್ ಕುಮಾರ್ (ಇಂಗ್ಲಿಷ್)
ಜಯ್ ಪ್ರಕಾಶ್ ಗುಪ್ತಾ (ಇಂಗ್ಲಿಷ್)
ಅನಿಲ್ ಪಟೇಲ್ (ಗುಜರಾತಿ),
ನದೀಮ್ ಅಹ್ಮದ್ (ಉರ್ದು),
ಪಾಲ್‌ಮಿ ರಕ್ಷಿತ್ (ಬಂಗಾಳಿ)
ಹರಿಹರ ಪಂಡಾ (ಒಡಿಯಾ)

ಹಿರಿಯ ವಿನ್ಯಾಸಕರು

ಶ್ಯಾಮ್ ಶಂಕರ್ ತಿವಾರಿ
ರವೀಂದ್ರ ಕುಮಾರ್ ಶರ್ಮಾ

ವಿನ್ಯಾಸಕರು

ದಿವ್ಯಾ ತಲ್ವಾರ್, ಅಭಯ್ ಗುಪ್ತಾ

13 ಭಾಷೆಗಳಲ್ಲಿ ಲಭ್ಯವಿರುವ ನವಭಾರತದ ಸುದ್ದಿಗಳನ್ನು ಓದಲು ಕ್ಲಿಕ್ ಮಾಡಿ
https://newindiasamachar.pib.gov.in/news.aspx

ನ್ಯೂ ಇಂಡಿಯಾ ಸಮಾಚಾರ್ ಹಿಂದಿನ ಸಂಚಿಕೆಗಳನ್ನು ಓದಲು ಕ್ಲಿಕ್ ಮಾಡಿ:
https://newindiasamachar.pib.gov.in/archive.aspx

Follow @NISPIBIndia on Twitter for regular updates on 'New India Samachar'

ಒಳಪುಟಗಳಲ್ಲಿ

ಭಾರತವು ಕೌಶಲ್ಯ ಅಭಿವೃದ್ಧಿಯ ಕೇಂದ್ರವಾಗಿ ಹೊರಹೊಮ್ಮುತ್ತಿದೆ

ಮುಖಪುಟ ಲೇಖನ | ಕೌಶಲ್ಯ ಅಭಿವೃದ್ಧಿಯು ಉದ್ಯೋಗದ ಹೊಸ ಮಂತ್ರವಾಗಿದೆ, ಅದರ ಮೂಲಕ ರಾಷ್ಟ್ರದ ಯುವಜನರು ಅಭಿವೃದ್ಧಿ ಮತ್ತು ಪ್ರಗತಿಯ ಬಾಗಿಲುಗಳನ್ನು ತೆರೆಯುತ್ತಿದ್ದಾರೆ. 14-25

"ನನ್ನ ತಾಯಿಯ ಬದುಕಿನ ಪಯಣದಲ್ಲಿ ನಾನು ಅವರ ದೇಹದಂಡನೆ, ತ್ಯಾಗ ಮತ್ತು ದೇಶದ ಇಡೀ ಮಾತೃಶಕ್ತಿಯ ಕೊಡುಗೆಯ ಬಗ್ಗೆ ಹೇಳುತ್ತೇನೆ " | 45-56

ವಿವಿಧತೆಯಲ್ಲಿ ಏಕತೆ ಎಂಬ ಮಂತ್ರದೊಂದಿಗೆ ಭಾರತ ಸ್ವಾತಂತ್ರ್ಯ ಸಾಧಿಸಿತು

ಆಜಾದಿ ಕಾ ಅಮೃತ ಮಹೋತ್ಸವದ ಸರಣಿಯಲ್ಲಿ, ಈ ಬಾರಿ ಸುಮಂತ್ ಮೆಹ್ತಾ, ಸುಶೀಲಾ ಚೈನ್ ಟ್ರೆಹಾನ್, ಅಮರೇಂದ್ರ ನಾಥ್ ಚಟರ್ಜಿ, ಮತ್ತು ಅಲೇಖ್ ಪಾತ್ರ ಅವರ ಕಥೆಗಳನ್ನು ಓದಿ | 41-44

ಡಿಜಿಟಲ್ ಇಂಡಿಯಾ

ಸ್ವಾವಲಂಬನೆಯ ಕಡೆಗೆ ಭಾರತದ ಸಂಕಲ್ಪದ ಸಂಕೇತ

ಡಿಜಿಟಲ್ ಇಂಡಿಯಾ ಕಳೆದ 7 ವರ್ಷಗಳಲ್ಲಿ ತಂತ್ರಜ್ಞಾನ ಮತ್ತು ನಾವೀನ್ಯತೆಯ ಮೂಲಕ ಪಾರದರ್ಶಕತೆಯನ್ನು ಉತ್ತೇಜಿಸುತ್ತಿದೆ | 34-36

ಸುದ್ದಿ ತುಣುಕುಗಳು | 4-5

ವಿಕ್ರಮ್ ಬಾತ್ರಾ: ಕಾರ್ಗಿಲ್ ಸಿಂಹ | 6

ಸಂವಿಧಾನ ಮತ್ತು ಸಂಸ್ಕಾರದ ಭೇಟಿ
ರಾಷ್ಟ್ರಪತಿಯವರು ತಮ್ಮ ಪೂರ್ವಜರ ಹಳ್ಳಿಯಲ್ಲಿ ಪ್ರಧಾನಿ ಮೋದಿಯವರನ್ನು ಅಭಿನಂದಿಸಿದರು |7-9

ಹೊಸ ನಿರ್ಣಯಗಳು, ಹೊಸ ಆಕಾಂಕ್ಷೆಗಳು
ಉತ್ತರ ಪ್ರದೇಶ ಹೂಡಿಕೆದಾರರ ಶೃಂಗಸಭೆ 3.0 | 10

ಖಾಸಗಿ ವಲಯವು ಬಾಹ್ಯಾಕಾಶ ಕ್ಷೇತ್ರದಲ್ಲಿ ದೊಡ್ಡ ಪಾತ್ರವನ್ನು ವಹಿಸಲಿದೆ
ಪ್ರಧಾನಿ ನರೇಂದ್ರ ಮೋದಿಯವರ ಗುಜರಾತ್ ಭೇಟಿ | 11-13

ಪರಿಸರ ಸಂರಕ್ಷಣೆ: ಮಾದರಿಯಾಗಿ ಮುನ್ನಡೆಸುತ್ತಿರುವ ಭಾರತ | 26-27

ಸಾಲ ಪಡೆಯಲು ಏಕ ಗವಾಕ್ಷಿ
ಜನ ಸಮರ್ಥ ಪೋರ್ಟಲ್ | 28

ವಿಶ್ವದ ಬಯೋಟೆಕ್ ಹಬ್ ಆಗುವ ಗುರಿ ಹೊಂದಿರುವ ಭಾರತ
ಬಯೋಟೆಕ್ ಸ್ಟಾರ್ಟ್‌ಅಪ್ ಎಕ್ಸ್ಪೋ-2022ರಲ್ಲಿ ಪ್ರಧಾನಮಂತ್ರಿಯವರ ಭಾಷಣ | 29

ಅಭಿವೃದ್ಧಿ ಮತ್ತು ಪರಂಪರೆ ಜೊತೆಜೊತೆಯಲ್ಲಿ ಸಾಗುತ್ತಿವೆ
ಶ್ರೀ ಸಂತ ತುಕಾರಾಂ ಮಹಾರಾಜರ ಶಿಲಾ ಮಂದಿರದ ಉದ್ಘಾಟನೆ | 30–31

'ಅಗ್ನಿಪಥ್' ರಕ್ಷಣಾ ವಲಯದಲ್ಲಿ ಹೊಸ ಉದ್ಯೋಗದ ಮಾರ್ಗಗಳನ್ನು ತೆರೆಯುತ್ತದೆ
ಸಂಪುಟ ಸಭೆಯಲ್ಲಿ ಮಹತ್ವದ ನಿರ್ಧಾರ | 32-33

ಒಂದು ರಾಷ್ಟ್ರ, ಒಂದು ತೆರಿಗೆ
5 ವರ್ಷಗಳನ್ನು ಪೂರ್ಣಗೊಳಿಸಿದ ಸರಕು ಮತ್ತು ಸೇವಾ ತೆರಿಗೆ | 37-38

ಮಾನವೀಯತೆಯ ದೇವತೆ
ವೈದ್ಯರ ದಿನದಂದು 'ಜೀವ ರಕ್ಷಕರಿಗೆ' ವಂದನೆ | 39-40

ಮುದ್ರಣ ಮತ್ತು ಪ್ರಕಟಣೆ: ಸತ್ಯೇಂದ್ರ ಪ್ರಕಾಶ್, ಪ್ರಧಾನ ಮಹಾನಿರ್ದೇಶಕರು, ಸೆಂಟ್ರಲ್ ಬ್ಯೂರೋ ಆಫ್ ಕಮ್ಯೂನಿಕೇಷನ್ ಪರವಾಗಿ.
ಮುದ್ರಣಾಲಯ : ಇನ್‌ಫಿನಿಟಿ ಅಡ್ವರ್ಟೈಸಿಂಗ್ ಸರ್ವೀಸಸ್ ಪ್ರೈ. ಲಿಮಿಟೆಡ್, ಎಫ್‌ಬಿಡಿ-ಒನ್ ಕಾರ್ಪೋರೇಟ್ ಪಾರ್ಕ್, 10ನೇ ಮಹಡಿ, ನವದೆಹಲಿ-ಫರೀದಾಬಾದ್ ಬಾರ್ಡರ್, ಎನ್‌ಹೆಚ್-1, ಫರೀದಾಬಾದ್-121003. **ಸಂಪರ್ಕ ವಿಳಾಸ :** ಕೊಠಡಿ ಸಂಖ್ಯೆ 278, ಬ್ಯೂರೋ ಆಫ್ ಔಟ್ ರೀಚ್ ಕಮ್ಯುನಿಕೇಷನ್ 2ನೇ ಮಹಡಿ, ಸೂಚನಾ ಭವನ, ನವದೆಹಲಿ -110003. **ಇ-ಮೇಲ್ :** response-nis@pib.gov.in, **ಆರ್‌ಎನ್‌ಐ ನಂ. :** DELKAN/2020/78828

ಸಂಪಾದಕೀಯ

ಶುಭಾಶಯಗಳು,

ಮಹಾಭಾರತದ ಒಂದು ಶ್ಲೋಕ ಹೀಗೆ ಹೇಳುತ್ತದೆ-

विश्वकर्मा नमस्तेस्तु, विश्वात्मा विश्व संभवः॥

ಇದರರ್ಥ ವಿಶ್ವಕರ್ಮನಿಗೆ ನಮಸ್ಕಾರಗಳು, ಅವನಿಂದ ಜಗತ್ತಿನಲ್ಲಿ ಎಲ್ಲವೂ ಸಾಧ್ಯ.. ಅವನನ್ನು ವಿಶ್ವಕರ್ಮ ಎಂದು ಕರೆಯಲಾಗುತ್ತದೆ ಏಕೆಂದರೆ ಅವನ ಕೌಶಲ್ಯವಿಲ್ಲದೆ ಸಮಾಜದ ಅಸ್ತಿತ್ವವು ಅಸಾಧ್ಯ.. ದುರದೃಷ್ಟವಶಾತ್, ನಮ್ಮ ಸಾಮಾಜಿಕ ಶಿಕ್ಷಣ ವ್ಯವಸ್ಥೆಯಲ್ಲಿ ಕೌಶಲ್ಯ ಅಭಿವೃದ್ಧಿ ವ್ಯವಸ್ಥೆಯು ಕ್ರಮೇಣ ದುರ್ಬಲಗೊಂಡಿತು. ಅದರ ಸತ್ವವನ್ನು ಅರ್ಥಮಾಡಿಕೊಂಡ ಪ್ರಧಾನಿಯವರು 2014 ರಿಂದ ಭಾರತವನ್ನು ಸ್ವಾವಲಂಬಿಯಾಗಿಸುವ ಕನಸನ್ನು ಪ್ರೋತ್ಸಾಹಿಸಿದ್ದಾರೆ, ಇದು ಇಂದು ಪ್ರತಿಯೊಬ್ಬ ಭಾರತೀಯನ ಸಂಕಲ್ಪವಾಗಿದೆ. ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ನಾಯಕತ್ವದಲ್ಲಿ ಪ್ರಾರಂಭವಾದ ಕೌಶಲ್ ಭಾರತ್ ಮಿಷನ್ ದೇಶದ ಯುವಕರನ್ನು ದಕ್ಷ ಮತ್ತು ಸಬಲರನ್ನಾಗಿಸಿದೆ. ಈ ಮಿಷನ್ ಉದ್ಯೋಗಾಕಾಂಕ್ಷಿಗಳನ್ನು ಉದ್ಯೋಗದಾತರಾಗಲು ಪ್ರೋತ್ಸಾಹಿಸುತ್ತಿದೆ.

ಇದರ ಪರಿಣಾಮವಾಗಿ, ಭಾರತವು ಕೋವಿಡ್‌ನಂತಹ ಸಾಂಕ್ರಾಮಿಕ ರೋಗವನ್ನು ವಿಶ್ವದ ಯಾವುದೇ ದೇಶಕ್ಕಿಂತ ಉತ್ತಮವಾಗಿ ನಿಭಾಯಿಸಲು ಸಮರ್ಥವಾಗಿದೆ. ತಂತ್ರಜ್ಞಾನ ಕೇಂದ್ರ ಸರ್ಕಾರವು ಉತ್ತಮ ಆಡಳಿತದ ದೃಷ್ಟಿಕೋನವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವುದಕ್ಕೆ ಒಂದು ಪೀಠವಾಗಿದೆ. ಕೌಶಲ್ಯ, ಮರು ಕೌಶಲ್ಯ ಮತ್ತು ಕೌಶಲ್ಯದ ಮಂತ್ರವು ತಂತ್ರಜ್ಞಾನದ ಯುಗದಲ್ಲಿ ಪೂರ್ವಾಪೇಕ್ಷಿತವಾಗಿದೆ ಮತ್ತು ಕೌಶಲ್ ಭಾರತ್ ಮಿಷನ್ ಕಳೆದ ಏಳು ವರ್ಷಗಳಿಂದ ಬಾಬಾಸಾಹೇಬ್ ಅಂಬೇಡ್ಕರ್ ಅವರ ಕನಸನ್ನು ನನಸು ಮಾಡುವ ಮೂಲಕ ಲಕ್ಷಾಂತರ ಯುವಕರಿಗೆ ಹೊಸ ಉದ್ಯೋಗಾವಕಾಶಗಳನ್ನು ಒದಗಿಸುತ್ತಿದೆ.

ಭಾರತವು ಬದಲಾಗುತ್ತಿದೆ ಮತ್ತು ಜಾಗತಿಕವಾಗಿ ಭಾರತದ ಸ್ಥಾನಮಾನವೂ ಹೆಚ್ಚುತ್ತಿದೆ, ಇದರ ಸತ್ವ ದೇಶದ ಅಪಾರ ಮಾನವಶಕ್ತಿ, ಇದು ಪ್ರತಿಕೂಲತೆಯನ್ನು ಅವಕಾಶವನ್ನಾಗಿ ಪರಿವರ್ತಿಸುವಲ್ಲಿ ಸಮರ್ಥವಾಗಿದೆ. ಇದರ ಫಲವಾಗಿ ಭಾರತ ಈಗ ವಿಶ್ವದಲ್ಲಿ ಕೌಶಲ ಅಭಿವೃದ್ಧಿಯ ಕೇಂದ್ರವಾಗಿ ಹೊರಹೊಮ್ಮುತ್ತಿದೆ. ಕೌಶಲ್ ಭಾರತ್ ಮಿಷನ್ ಏಳು ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ, ಅದರ ಸಂಪೂರ್ಣ ಪ್ರಯಾಣವು ಈ ಸಂಚಿಕೆಯ ಮುಖಪುಟ ಲೇಖನವಾಗಿದೆ.

ಅದೇ ರೀತಿ, ಕಳೆದ 5 ವರ್ಷಗಳಲ್ಲಿ ಜಿಎಸ್ಟಿಯ ಪ್ರಗತಿ, ಏಳು ವರ್ಷಗಳನ್ನು ಪೂರ್ಣಗೊಳಿಸಿರುವ ಡಿಜಿಟಲ್ ಇಂಡಿಯಾ ಮತ್ತು ರಾಷ್ಟ್ರಪತಿಯವರ ಪೂರ್ವಜರ ಗ್ರಾಮ ಪರೌಂಖೆಗೆ ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿ ಈ ಸಂಚಿಕೆಯ ಭಾಗವಾಗಿವೆ. ಈ ಸಂಚಿಕೆಯ ಇತರ ಮುಖ್ಯಾಂಶಗಳೆಂದರೆ- ವ್ಯಕ್ತಿತ್ವ ವಿಭಾಗದಲ್ಲಿ ವಿಕ್ರಮ್ ಬಾತ್ರಾ ಅವರ ಸ್ಫೂರ್ತಿದಾಯಕ ಕಥೆ, ರಕ್ಷಣಾ ವಲಯದಲ್ಲಿ ನೇಮಕಾತಿಗೆ ಬಾಗಿಲು ತೆರೆಯುವ ಸಂಪುಟ ಅನುಮೋದಿಸಿದ ಹೊಸ ವ್ಯವಸ್ಥೆ, ಅಮೃತ ಮಹೋತ್ಸವ, ಕೋವಿಡ್ ವಿರುದ್ಧದ ಹೋರಾಟ, ಪ್ರಧಾನ ಮಂತ್ರಿಯವರಿಂದ ವಿವಿಧ ಅಭಿವೃದ್ಧಿ ಯೋಜನೆಗಳ ಕೊಡುಗೆ ಸೇರಿದಂತೆ ಇತರ ಲೇಖನಗಳಿವೆ.

ನಿಮ್ಮ ಸಲಹೆಗಳನ್ನು ನಮಗೆ ಕಳುಹಿಸುತ್ತಿರಿ

ಹಿಂದಿ, ಇಂಗ್ಲಿಷ್ ಮತ್ತು
ಇತರ 11ಭಾಷೆಗಳಲ್ಲಿ ಲಭ್ಯವಿರುವ ಪತ್ರಿಕೆಯನ್ನು
ಇಲ್ಲಿ ಓದಿ/ಡೌನ್ಲೋಡ್ ಮಾಡಿ.
https://newindiasamachar.pib.gov.in/

(ಜೈದೀಪ್ ಭಟ್ನಾಗರ್)

ಅಂಚೆ ಪೆಟ್ಟಿಗೆ



ಜೂನ್(1-15) ಸಂಚಿಕೆಯ ಮುಖಪುಟ ಲೇಖನದಲ್ಲಿ 14 ವಲಯಗಳಲ್ಲಿನ ವಿವಿಧ ಯೋಜನೆಗಳು ಭಾರತದ ಪ್ರಗತಿಗೆ ಹೇಗೆ ಉತ್ತೇಜನ ಪ್ರಚೋದನೆಯನ್ನು ನೀಡಿವೆ ಎಂಬುದನ್ನು ವಿವರಿಸಲಾಗಿದೆ. ಸ್ವಾಮಿನಾರಾಯಣ ಪಂಥದ ಸಂಸ್ಥಾಪಕ ಸಹಜಾನಂದ ಸ್ವಾಮಿ ಅವರ ಬಗೆಗಿನ ಲೇಖನ ವಿಶೇಷ ಆಕರ್ಷಣೆಯಾಗಿದೆ.

ಚಂದ್ರಕಾಂತ ಪ್ರಧಾನ್
chandrakantapradhan2014@gmail.com

ಕಳೆದ 8 ವರ್ಷಗಳಲ್ಲಿ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರವು ರಾಷ್ಟ್ರದ ಹಿತದೃಷ್ಟಿಯಿಂದ ಅನೇಕ ಐತಿಹಾಸಿಕ ನಿರ್ಧಾರಗಳನ್ನು ತೆಗೆದುಕೊಂಡಿದೆ, ಇದರಿಂದಾಗಿ ಭಾರತವು ಈಗ ಅಭಿವೃದ್ಧಿಯ ಹೊಸ ಎತ್ತರವನ್ನು ಮುಟ್ಟುತ್ತಿದೆ ಮತ್ತು ದೇಶದ ಬಡತನವನ್ನು ದಾಖಲೆಯ ವೇಗದಲ್ಲಿ ನಿವಾರಿಸುತ್ತದೆ. ಇದನ್ನು "ನ್ಯೂ ಇಂಡಿಯಾ ಸಮಾಚಾರ" ಸಂಪಾದಕೀಯ ಮಂಡಳಿಯು ಜೂನ್ 1-15 ರ ಸಂಚಿಕೆಯ ಮುಖಪುಟ ಲೇಖನದ ರೂಪದಲ್ಲಿ ಇತರ ಲೇಖನಗಳ ಮೂಲಕ ತಮ್ಮ ಅವಿರತ ಪ್ರಯತ್ನದಿಂದ ಬಹಳ ಸುಂದರವಾಗಿ ಪ್ರಕಟಿಸಿದೆ, ಇದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ.

ಚ. ಶಕ್ತಿ ಸಿಂಗ್, ವಕೀಲರು, ಕರ್ನಾಲ್
shaktisinghadv@gmail.com

ಇತ್ತೀಚೆಗೆ ನಾನು ನಿಮ್ಮ ಪತ್ರಿಕೆಯನ್ನು ನೋಡಿದೆ. ಇದು ನಿಜವಾಗಿಯೂ ಉತ್ತಮವಾಗಿದೆ. ಇಂತಹ ಒಳ್ಳೆಯ ಪತ್ರಿಕೆಯನ್ನು ಹೊರತಂದಿದ್ದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ನಿಮ್ಮ ನಿಯತಕಾಲಿಕವು ಸಾಕಷ್ಟು ಮಾಹಿತಿಯುಕ್ತವಾಗಿದೆ ಮತ್ತು +10 (11 ಮತ್ತು 12 ನೇ ತರಗತಿ) ವಿದ್ಯಾರ್ಥಿಗಳಿಗೆ ಸೂಕ್ತವಾಗಿದೆ.

ಜಸ್ವಂತ್ ಎಸ್. ಪ್ರಸಾದ್
jaswantshepherdprasad@gmail.com

ನ್ಯೂ ಇಂಡಿಯಾ ಸಮಾಚಾರ ನಿಜವಾದ ಪತ್ರಿಕೋದ್ಯಮದ ಅಡಿಪಾಯ. ಇದು ನಮ್ಮ ಸರ್ಕಾರದ ಅತ್ಯುತ್ತಮ ಕೆಲಸಗಳ ಬಗ್ಗೆ ಹೇಳುತ್ತದೆ. ಕಳೆದ ಕೆಲವು ವರ್ಷಗಳು ಭಾರತಕ್ಕೆ ಅತ್ಯಂತ ಅಸಾಧಾರಣವಾದುದು ಎಂಬುದು ಸತ್ಯವಾಗಿದೆ.

ವಿಕ್ರಮ್ ಅರೋರಾ
theonlyvikramarora@gmail.com

ನಾನು ನಿಮ್ಮ ನ್ಯೂ ಇಂಡಿಯಾ ಸಮಾಚಾರ ಪತ್ರಿಕೆಯ ಜೂನ್ 1-15 ಸಂಚಿಕೆ ಓದಿದೆ. ಪ್ರಧಾನಿ ಮೋದಿಯವರು ದೇಶದಲ್ಲಿ ಅದ್ಭುತವಾದ ಪ್ರಗತಿಯನ್ನು ಸಾಧಿಸಿದ್ದಾರೆಂದು ನಾನು ತಿಳಿದುಕೊಂಡೆ. ಅವರು ಎಲ್ಲ ಅಭಿವೃದ್ಧಿ ಕಾರ್ಯಗಳನ್ನು ಖುದ್ದಾಗಿ ಮೇಲ್ವಿಚಾರಣೆ ಮಾಡುತ್ತಾರೆ.

ಎಂ ಪಿ ಚಂದ್ರಶೇಖರ್,
chandrasekar@mookambikainfo.com

FOLLOW US @NISPIBIndia

ಸಂಪರ್ಕ ವಿಳಾಸ: ಕೊಠಡಿ ಸಂಖ್ಯೆ–278, ಸೆಂಟ್ರಲ್ ಬ್ಯೂರೋ ಆಫ್ ಕಮ್ಯೂನಿಕೇಷನ್,
2 ನೇ ಮಹಡಿ, ಸೂಚನಾ ಭವನ, ನವದೆಹಲಿ -110003
ಇ-ಮೇಲ್: response-nis@pib.gov.in

ಗಿನ್ನೆಸ್ ವಿಶ್ವದಾಖಲೆ: 105 ಗಂಟೆಗಳಲ್ಲಿ 75 ಕಿಮೀ ಹೆದ್ದಾರಿಯನ್ನು ನಿರ್ಮಿಸಿದ ಎನ್‌ಎಚ್‌ಎಐ

ನಾವು ರಸ್ತೆಗಳು ಮತ್ತು ಸೇತುವೆಗಳನ್ನು ನಿರ್ಮಿಸಿ ಪಟ್ಟಣಗಳು ಮತ್ತು ಹಳ್ಳಿಗಳಿಗೆ ಸಂಪರ್ಕ ಮಾತ್ರ ನೀಡುವುದಿಲ್ಲ. ನಾವು ಯಶಸ್ಸನ್ನು ಆಕಾಂಕ್ಷೆಗಳೊಂದಿಗೆ, ಆಶಾವಾದದೊಂದಿಗೆ ಅವಕಾಶವನ್ನು ಮತ್ತು ಸಂತೋಷವನ್ನು ಭರವಸೆಯೊಂದಿಗೆ ಸಂಯೋಜಿಸುತ್ತೇವೆ. "ಪ್ರಧಾನಿ ನರೇಂದ್ರ ಮೋದಿಯವರ ಈ ನಂಬಿಕೆಯನ್ನು ಮುಂದುವರಿಸಿ, ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ವಿಶ್ವದಲ್ಲೇ ಮೊದಲ ಬಾರಿಗೆ ಅಂತಹ ಕೆಲಸವನ್ನು ಪೂರ್ಣಗೊಳಿಸಿದೆ, ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ನಲ್ಲಿ ಸ್ಥಾನ ಗಳಿಸಿದೆ. ಒಂದು ಪಥದ ಅಮರಾವತಿ ಮತ್ತು ಅಕೋಲಾ ನಡುವಿನ 75 ಕಿಲೋಮೀಟರ್ ಕಾಂಕ್ರೀಟ್ ರಸ್ತೆಯನ್ನು 105 ಗಂಟೆ 33 ನಿಮಿಷಗಳಲ್ಲಿ ನಿರ್ಮಿಸಲಾಗಿದೆ, ಅಮರಾವತಿ ಮತ್ತು ಅಕೋಲಾ ನಡುವಿನ ವಿಸ್ತರಣೆಯು ರಾಷ್ಟ್ರೀಯ ಹೆದ್ದಾರಿ-53 ರ ಭಾಗವಾಗಿದೆ. ಕೋಲ್ಕತ್ತಾ, ರಾಯ್ಪುರ, ನಾಗ್ಪುರ ಮತ್ತು ಸೂರತ್‌ನಂತಹ ಪ್ರಮುಖ ನಗರಗಳನ್ನು ಸಂಪರ್ಕಿಸುವ ಪೂರ್ವ ಪಶ್ಚಿಮ ಕಾರಿಡಾರ್ ನಲ್ಲಿ ಇದು ಪ್ರಮುಖವಾಗಿದೆ. ಈ 75-ಕಿಲೋಮೀಟರ್ ರಸ್ತೆಯನ್ನು ಸಲಹಾ ತಂಡವನ್ನು ಒಳಗೊಂಡಂತೆ 720 ಕಾರ್ಮಿಕರು ನಿರ್ಮಿಸಿದ್ದಾರೆ. ರಸ್ತೆಯ ನಿರ್ಮಾಣವು ಜೂನ್ 3 ರಂದು ಬೆಳಿಗ್ಗೆ 7 ಗಂಟೆಗೆ ಪ್ರಾರಂಭವಾಯಿತು ಮತ್ತು ಜೂನ್ 7 ರಂದು ಸಂಜೆ 5 ಗಂಟೆಗೆ ಪೂರ್ಣಗೊಂಡಿತು. ಈ ಹಿಂದೆ ಫೆಬ್ರವರಿ 2020 ರಂದು ಕತಾರ್‌ನ ದೋಹಾದಲ್ಲಿ ಬಿಟುಮಿನಸ್ ರಸ್ತೆ ನಿರ್ಮಾಣಕ್ಕಾಗಿ ಗಿನ್ನೆಸ್ ವಿಶ್ವ ದಾಖಲೆಯನ್ನು ಸ್ಥಾಪಿಸಲಾಗಿತ್ತು. ಇಲ್ಲಿ 25.275 ಕಿಲೋಮೀಟರ್ ರಸ್ತೆಯನ್ನು ನಿರ್ಮಿಸಲಾಗಿದೆ. ಇದು ಪೂರ್ಣಗೊಳ್ಳಲು ಹತ್ತು ದಿನಗಳನ್ನು ತೆಗೆದುಕೊಳ್ಳಲಾಗಿತ್ತು.

ರೈತರಿಗೆ ಉಡುಗೊರೆ

14 ಖಾರಿಫ್ ಬೆಳೆಗಳ ಎಂ ಎಸ್ಪಿ ಏರಿಕೆ

ರೈತರ ಆದಾಯವನ್ನು ದ್ವಿಗುಣಗೊಳಿಸುವ ಗುರಿಯೊಂದಿಗೆ ಮುನ್ನಡೆಯುತ್ತಿರುವ ಸರ್ಕಾರ ರೈತರಿಗೆ ಮತ್ತೊಂದು ಉಡುಗೊರೆ ನೀಡಿದೆ. ಜೂನ್ 8 ರಂದು ನಡೆದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯ ಸಭೆಯಲ್ಲಿ, 2022 -23 ರ ವಿವಿಧ ಖಾರಿಫ್ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂ ಎಸ್ಪಿ) ಹೆಚ್ಚಳಕ್ಕೆ ಅನುಮೋದನೆ ನೀಡಿದೆ. 14 ಖಾರಿಫ್ ಬೆಳೆಗಳ ಎಂ ಎಸ್ಪಿ ಯಲ್ಲಿ 4 ರಿಂದ 9 ಪ್ರತಿಶತ ಹೆಚ್ಚಳ ಮಾಡಲಾಗಿದೆ.

ಬೆಳೆ	2022-23 ಕ್ಕೆ ಎಂಎಸ್ಪಿ (ರೂ/ ಕ್ವಿಂಟಾಲ್ಗೆ)	ಎಂ ಎಸ್ಪಿ ಹೆಚ್ಚಳ ರೂಪಾಯಿಗಳಲ್ಲಿ
ಭತ್ತ (ಸಾಮಾನ್ಯ)	2040	100
ಭತ್ತ (ಗ್ರೇಡ್ ಎ)	2060	100
ಜೋಳ (ಹೈಬ್ರಿಡ್)	2970	232
ಜೋಳ (ಮಾಲ್ದಂಡಿ)	2970	232
ಸಿರಿಧಾನ್ಯ	2350	100
ರಾಗಿ	3578	201
ಮೆಕ್ಕಾ	1962	92
ತೊಗರಿ	6600	300
ಹೆಸರು	7755	480
ನೆಲಗಡಲೆ	5850	300
ಸೂರ್ಯಕಾಂತಿ ಬೀಜ	6400	385
ಸೋಯಾಬೀನ್(ಹಳದಿ)	4300	350
ಎಳ್ಳು	7830	523
ರಾಮತಿಲ್	7287	357
ಹತ್ತಿ (ಮಧ್ಯಮ)	6080	354
ಹತ್ತಿ(ಉದ್ದ)	6380	355

ಭಾರತ - ಬಾಂಗ್ಲಾದೇಶ ನಡುವಿನ ಮೂರನೇ ರೈಲು ಸೇವೆ ಪ್ರಾರಂಭ

1971 ರಿಂದ, ಭಾರತವು ಬಾಂಗ್ಲಾದೇಶದೊಂದಿಗಿನ ತನ್ನ ಸಂಬಂಧದಲ್ಲಿ ಕಾರ್ಯತಂತ್ರದ ಕಾಳಜಿಗಳಿಗೆ ಆದ್ಯತೆ ನೀಡಿದೆ ಮತ್ತು ಈ ಸಂಬಂಧಗಳು ಇತ್ತೀಚೆಗೆ ವಿಸ್ತರಿಸಿವೆ. ಮಿಥಾಲಿ ಎಕ್ಸ್‌ಪ್ರೆಸ್ ಉಭಯ ದೇಶಗಳ ನಡುವಿನ ಭಾವನಾತ್ಮಕ ಸಂಬಂಧವನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಲಿದೆ. ಕಳೆದ ವರ್ಷ ಪ್ರಧಾನಿ ನರೇಂದ್ರ ಮೋದಿಯವರು ಬಾಂಗ್ಲಾದೇಶಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಇದನ್ನು ಘೋಷಿಸಲಾಯಿತು. ನ್ಯೂ ಜಲ್‌ಪಾಯ್‌ಗುರಿ ಮತ್ತು ಢಾಕಾ ನಡುವೆ ಚಲಿಸುವ ಈ ರೈಲನ್ನು ಜೂನ್ 1 ರಂದು ಭಾರತದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮತ್ತು ಬಾಂಗ್ಲಾದೇಶ ರೈಲ್ವೆ ಸಚಿವ ಮೊಹಮ್ಮದ್ ನೂರುಲ್ ಇಸ್ಲಾಂ ಸುಜನ್ ಜಂಟಿಯಾಗಿ ಉದ್ಘಾಟಿಸಿದರು. ಕೋಲ್ಕತ್ತಾ-ಢಾಕಾ ಮೈತ್ರೀ ಎಕ್ಸ್‌ಪ್ರೆಸ್ ಮತ್ತು ಕೋಲ್ಕತ್ತಾ-ಖುಲ್ನಾ ಬಂಧನ್ ಎಕ್ಸ್‌ಪ್ರೆಸ್ ನಂತರ ಎರಡು ದೇಶಗಳನ್ನು ಸಂಪರ್ಕಿಸುವ ಮೂರನೇ ರೈಲು ಇದಾಗಿದೆ. ಈ ರೈಲು ವಾರಕ್ಕೆ ಎರಡು ಬಾರಿ ಸಂಚರಿಸಲಿದೆ. ಇದು ಬಾಂಗ್ಲಾದೇಶವನ್ನು ಉತ್ತರ ಬಂಗಾಳ ಮತ್ತು ಭಾರತದ ಈಶಾನ್ಯಕ್ಕೆ ಸಂಪರ್ಕಿಸುತ್ತದೆ. ಈ ರೈಲು ಮೂಲಕ ಬಾಂಗ್ಲಾದೇಶೀಯರೂ ಕೂಡ ಭಾರತದ ಮಾರ್ಗವಾಗಿ ನೇಪಾಳಕ್ಕೆ ಪ್ರಯಾಣ ಮಾಡಬಹುದಾಗಿದೆ.

ರಾಷ್ಟ್ರೀಯ ಬುಡಕಟ್ಟು ಸಂಶೋಧನಾ ಸಂಸ್ಥೆ ಆರಂಭ

ಭಾರತದ ಒಟ್ಟಾರೆ ಅಭಿವೃದ್ಧಿಗಾಗಿ, ಸಮಾಜದ ಎಲ್ಲಾ ವರ್ಗಗಳು ದೇಶದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯ ಪ್ರಯೋಜನ ಪಡೆಯುವುದನ್ನು ಖಚಿತಪಡಿಸಿಕೊಳ್ಳುವುದು ನಿರ್ಣಾಯಕವಾಗಿದೆ. ಇದರ ಹೊರತಾಗಿಯೂ, ಭಾರತದ ಜನಸಂಖ್ಯೆಯ ಸುಮಾರು ಶೇ.9 ಮತ್ತು ಅದರ ಒಟ್ಟು ಭೂಪ್ರದೇಶದ ಶೇ.15 ರಷ್ಟಿರುವ ಬುಡಕಟ್ಟು ಸಮುದಾಯಗಳು ಕಳೆದ ಆರು ದಶಕಗಳಲ್ಲಿ ಜಾರಿಗೊಳಿಸಲಾದ ಅಭಿವೃದ್ಧಿ ಯೋಜನೆಗಳ ಸಂಪೂರ್ಣ ಲಾಭವನ್ನು ಪಡೆದಿಲ್ಲ. ಮೊದಲ ಬಾರಿಗೆ, ಈ ವರ್ಗಗಳ ಸ್ಥಿತಿಯನ್ನು ಸುಧಾರಿಸಲು ಸರ್ಕಾರವು ನಿರ್ಣಾಯಕ ಕ್ರಮಗಳನ್ನು ತೆಗೆದುಕೊಂಡಿದೆ. ಬುಡಕಟ್ಟು ಹೆಮ್ಮೆಯ ದಿನದಿಂದ ಏಕಲವ್ಯ ಶಾಲೆಯವರೆಗೆ ಕಲೆ ಮತ್ತು ಕೌಶಲ್ಯ ತರಬೇತಿ ಕ್ಷೇತ್ರದಲ್ಲಿ ಹಲವು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಜೂನ್ 7 ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದೆಹಲಿಯಲ್ಲಿ ರಾಷ್ಟ್ರೀಯ ಬುಡಕಟ್ಟು ಸಂಶೋಧನಾ ಸಂಸ್ಥೆಯನ್ನು ಉದ್ಘಾಟಿಸುವ ಮೂಲಕ ಅಭಿವೃದ್ಧಿ ಕಾರ್ಯಸೂಚಿಯನ್ನು ಮತ್ತಷ್ಟು ಹೆಚ್ಚಿಸಿದರು. ಈ ರಾಷ್ಟ್ರೀಯ ಮಟ್ಟದ ಸಂಸ್ಥೆಯು ಶೈಕ್ಷಣಿಕ, ಕಾರ್ಯಾಂಗ ಮತ್ತು ಶಾಸಕಾಂಗ ಕ್ಷೇತ್ರಗಳಲ್ಲಿನ ಬುಡಕಟ್ಟು ಕಾಳಜಿಗಳು, ಸಮಸ್ಯೆಗಳು ಮತ್ತು ವ್ಯವಹಾರಗಳಿಗೆ ಪ್ರಾಥಮಿಕ ಕೇಂದ್ರಬಿಂದುವಾಗಿ ಹೊರಹೊಮ್ಮಿದೆ. ಇದು ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಶೈಕ್ಷಣಿಕ ಸಂಸ್ಥೆಗಳು ಮತ್ತು ಸಂಪನ್ಮೂಲ ಕೇಂದ್ರಗಳೊಂದಿಗೆ ಸಹಯೋಗ ಮತ್ತು ಸಂಪರ್ಕ ಹೊಂದುತ್ತದೆ. ಇದು ಬುಡಕಟ್ಟು ಸಂಶೋಧನಾ ಸಂಸ್ಥೆಗಳು, ಶ್ರೇಷ್ಠತಾ ಕೇಂದ್ರಗಳು ಮತ್ತು ಸಂಶೋಧನಾ ಯೋಜನೆಯ ಮೇಲ್ವಿಚಾರಣೆಯೊಂದಿಗೆ ಸಂಶೋಧನೆ ಮತ್ತು ತರಬೇತಿ ಗುಣಮಟ್ಟವನ್ನು ಸುಧಾರಿಸಲು ಮಾನದಂಡಗಳನ್ನು ಸ್ಥಾಪಿಸುತ್ತದೆ.

ಸೂರತ್ ವಿಮಾನ ನಿಲ್ದಾಣ ನವೀಕರಣಕ್ಕೆ 353 ಕೋಟಿ ರೂ.



ಭಾರತದ ವಜ್ರ ಮತ್ತು ಜವಳಿ ಕೇಂದ್ರವಾಗಿರುವ ಸೂರತ್, ವಿಮಾನ ಪ್ರಯಾಣಿಕರಿಗೆ ಜನಪ್ರಿಯ ತಾಣವಾಗಿದೆ. ದೇಶಾದ್ಯಂತ 16 ನಗರಗಳಿಗೆ ಸಂಪರ್ಕ ಕಲ್ಪಿಸುವ ಸೂರತ್ ವಿಮಾನ ನಿಲ್ದಾಣದಲ್ಲಿ ಹೆಚ್ಚಿದ ಪ್ರಯಾಣಿಕರ ದಟ್ಟಣೆಯಿಂದಾಗಿ, ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು 353 ಕೋಟಿ ರೂ. ವೆಚ್ಚದಲ್ಲಿ ಇಲ್ಲಿನ ಸೌಲಭ್ಯಗಳನ್ನು ವಿಸ್ತರಿಸುತ್ತಿದೆ. ಅಭಿವೃದ್ಧಿ ಯೋಜನೆಯು ಟರ್ಮಿನಲ್ ಕಟ್ಟಡವನ್ನು ವಿಸ್ತರಿಸುವುದು, ವಿಮಾನ ನಿಲುಗಡೆ ಸ್ಥಳವನ್ನು ಐದರಿಂದ 18 ಪಾರ್ಕಿಂಗ್ ತಾಣಗಳಿಗೆ ಹೆಚ್ಚಿಸುವುದು ಮತ್ತು ಸಮಾನಾಂತರ ಟ್ಯಾಕ್ಸಿ ಟ್ರ್ಯಾಕ್‌ಗಳನ್ನು ನಿರ್ಮಿಸುವುದು ಒಳಗೊಂಡಿದೆ. ಹೊಸ ಅತ್ಯಾಧುನಿಕ ವಿಸ್ತರಿತ ಟರ್ಮಿನಲ್ ಕಟ್ಟಡವು ಗರಿಷ್ಠ ದಟ್ಟಣೆಯ ಸಮಯದಲ್ಲಿ 1,200 ದೇಶೀಯ ಮತ್ತು 600 ಅಂತರರಾಷ್ಟ್ರೀಯ ಪ್ರಯಾಣಿಕರಿಗೆ ಅವಕಾಶ ಕಲ್ಪಿಸುತ್ತದೆ, ಟರ್ಮಿನಲ್‌ನ ವಾರ್ಷಿಕ ಪ್ರಯಾಣಿಕರ ಸಾಮರ್ಥ್ಯವನ್ನು 2.6 ಮಿಲಿಯನ್‌ಗೆ ಹೆಚ್ಚಿಸುತ್ತದೆ. ಟರ್ಮಿನಲ್ ಕಟ್ಟಡದಲ್ಲಿ ಎಲ್ಲಾ ಆಧುನಿಕ ಪ್ರಯಾಣಿಕ ಸೌಕರ್ಯಗಳನ್ನು ಒದಗಿಸಲಾಗುವುದು. ಇದು 20 ಚೆಕ್-ಇನ್ ಡೆಸ್ಕ್‌ಗಳು, ಐದು ಏರೋಬ್ರಿಡ್ಜ್‌ಗಳು, ಇನ್-ಲೈನ್ ಬ್ಯಾಗೇಜ್ ಹ್ಯಾಂಡ್ಲಿಂಗ್ ವ್ಯವಸ್ಥೆ ಮತ್ತು ಇತರ ಸೌಕರ್ಯಗಳನ್ನು ಹೊಂದಿರುತ್ತದೆ. ಹೊಸ ಟರ್ಮಿನಲ್ ಕಟ್ಟಡವು 475 ಕಾರುಗಳ ಸಾಮರ್ಥ್ಯದ ಪಾರ್ಕಿಂಗ್ ಸ್ಥಳವನ್ನು ಸಹ ಒಳಗೊಂಡಿರುತ್ತದೆ. ವಿಮಾನ ನಿಲ್ದಾಣದ ಹೊಸ ವಿಶ್ವ ದರ್ಜೆಯ ಟರ್ಮಿನಲ್ ಕಟ್ಟಡವು ಈ ಕೈಗಾರಿಕಾ ನಗರಕ್ಕೆ ಸಂಪರ್ಕವನ್ನು ಸುಧಾರಿಸುತ್ತದೆ, ಇದು ಈ ಪ್ರದೇಶದ ಒಟ್ಟಾರೆ ಅಭಿವೃದ್ಧಿಯನ್ನು ವೇಗಗೊಳಿಸುತ್ತದೆ.

ಈಗ ವಿಶ್ವಸಂಸ್ಥೆಯ ಮಾಹಿತಿಯನ್ನು ಹಿಂದಿಯಲ್ಲಿಯೂ ಪ್ರಕಟಿಸಲಾಗುವುದು

1977 ರಲ್ಲಿ ವಿದೇಶಾಂಗ ಸಚಿವರಾಗಿದ್ದಾಗ ಅಟಲ್ ಬಿಹಾರಿ ವಾಜಪೇಯಿ ಅವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಹಿಂದಿಯಲ್ಲಿ ಮೊದಲ ಬಾರಿಗೆ ಭಾಷಣ ಮಾಡಿದರು. ಈ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವಸಂಸ್ಥೆಯಲ್ಲಿ ಹಲವು ಬಾರಿ ಹಿಂದಿಯಲ್ಲಿ ಭಾಷಣ ಮಾಡಿದ್ದಾರೆ. ಇದೀಗ ಹಿಂದಿಯಲ್ಲಿ ಮಾಹಿತಿ ಪ್ರಸಾರದ ಮಹತ್ವವನ್ನು ಮನಗಂಡ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಅದಕ್ಕೆ ಸಂಬಂಧಿಸಿದ ಭಾರತದ ಪ್ರಸ್ತಾವನೆಗೆ ಪ್ರಥಮ ಬಾರಿಗೆ ಅನುಮೋದನೆ ನೀಡಿದೆ. ವಿಶ್ವಸಂಸ್ಥೆಯ ಎಲ್ಲಾ ಅಗತ್ಯ ಮಾಹಿತಿಯನ್ನು ಅಧಿಕೃತ ಭಾಷೆಗಳನ್ನು ಹೊರತುಪಡಿಸಿ ಹಿಂದಿಯಂತಹ ಇತರ ಭಾಷೆಗಳಲ್ಲೂ ನೀಡಬೇಕು ಎಂದು ನಿರ್ಣಯವು ಹೇಳುತ್ತದೆ. ಅದೇ ಸಮಯದಲ್ಲಿ, ವಿಶ್ವಸಂಸ್ಥೆಯ ಎಲ್ಲಾ ಅಗತ್ಯ ಸಂದೇಶಗಳನ್ನು ಈಗ ಹಿಂದಿಯಲ್ಲಿಯೂ ಕಳುಹಿಸಲಾಗುತ್ತದೆ. ಅಂಗೀಕಾರಗೊಂಡಿರುವ ನಿರ್ಣಯದಲ್ಲಿ ಬಂಗಾಳಿ ಮತ್ತು ಉರ್ದು ಭಾಷೆಗಳೂ ಸೇರಿವೆ. ■



ವಿಕ್ರಮ್ ಬಾತ್ರಾ: 'ಕಾರ್ಗಿಲ್‌ನ ಸಿಂಹ'

ಜನನ: 9 ಸೆಪ್ಟೆಂಬರ್ 1974, ನಿಧನ: 7 ಜುಲೈ 1999

ಜೂನ್ 1, 1999 ರಂದು ವಿಕ್ರಮ್ ಬಾತ್ರಾ ಅವರನ್ನು ಕಾರ್ಗಿಲ್ ಯುದ್ಧಕ್ಕೆ ಅವರ ಬೆಟಾಲಿಯನ್ನೊಂದಿಗೆ ಕಳುಹಿಸಲಾಯಿತು. ಈ ಯುದ್ಧದಲ್ಲಿ, ವಿಕ್ರಮ್ ಬಾತ್ರಾ ತಮ್ಮ ಅದಮ್ಯ ಧೈರ್ಯ ಮತ್ತು ಶೌರ್ಯವನ್ನು ತೋರಿಸಿದ್ದಲ್ಲದೆ, ಜೂನ್ 20, 1999 ರಂದು ಬೆಳಗ್ಗೆ 3:30 ಕ್ಕೆ ತನ್ನ ಒಡನಾಡಿಗಳೊಂದಿಗೆ ಅತ್ಯಂತ ದುರ್ಗಮ ಪ್ರದೇಶದಲ್ಲಿದ್ದರೂ, ಪಾಕಿಸ್ತಾನಿಗಳಿಂದ ಪಾಯಿಂಟ್ 5410 ಶಿಖರವನ್ನು ಮುಕ್ತಗೊಳಿಸಿದರು. ಈ ಶಿಖರದಿಂದ ರೇಡಿಯೊದಲ್ಲಿ ವಿಕ್ರಮ್ ಬಾತ್ರಾ ತಮ್ಮ ವಿಜಯದ ಘೋಷಣೆ 'ಯೇ ದಿಲ್ ಮಾಂಗೆ ಮೋರ್' ಎಂದು ಹೇಳಿದಾಗ, ಅವರ ಜನಪ್ರಿಯತೆಯು ಸೈನ್ಯದಲ್ಲಿ ಮಾತ್ರವಲ್ಲದೆ ಭಾರತದಾದ್ಯಂತ ಹರಡಿತು. ಕಾರ್ಗಿಲ್‌ನ ಐದು ಪ್ರಮುಖ ಶಿಖರಗಳನ್ನು ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವಿಕ್ರಮ್ ಬಾತ್ರಾ ಜುಲೈ 7 ರಂದು ಹುತಾತ್ಮರಾದರು.

ಪಾಕಿಸ್ತಾನಿ ಸೇನೆಯಿಂದ ಪಾಯಿಂಟ್ 5,140 ಅನ್ನು ವಶಪಡಿಸಿಕೊಂಡ ನಂತರ, ವಿಕ್ರಮ್ ಬಾತ್ರಾ ಅವರಿಗೆ ಜುಲೈ 7, 1999 ರಂದು ಪಾಯಿಂಟ್ 4,875 ಅನ್ನು ಗೆಲ್ಲಲು ಮುಂದಿನ ಗುರಿಯನ್ನು ನೀಡಲಾಯಿತು. ಆ ಸಮಯದಲ್ಲಿ ಅವರಿಗೆ ಹುಷಾರಿರಲಿಲ್ಲ. ಅವನಿಗೆ ಎದೆನೋವು ಕಾಣಿಸಿಕೊಂಡಿತ್ತು ಮತ್ತು ಅವರ ಕಣ್ಣುಗಳು ಕೆಂಪಾಗಿದ್ದವು. ಅವರ ಅಧಿಕಾರಿಗಳಿಗೆ ಅವರನ್ನು ಕಾರ್ಯಾಚರಣೆಗೆ ಕಳುಹಿಸಲು ಇಷ್ಟವಿರಲಿಲ್ಲ ಆದರೆ ಬಾತ್ರಾ ಅವರೇ ಕೆಲಸ ಪೂರ್ಣಗೊಳಿಸುವುದಾಗಿ ಒತ್ತಾಯಿಸಿದರು. ಈ ಶಿಖರವನ್ನು ಸ್ವತಂತ್ರಗೊಳಿಸುವಾಗ ಅವರು ತಮ್ಮ ಕೊನೆಯ ಉಸಿರು ಇರುವವರೆಗೂ ಹೋರಾಡಿ ಹುತಾತ್ಮರಾದರು. ಇದಕ್ಕೂ ಕೆಲವು ದಿನಗಳ ಹಿಂದೆ, ಜೂನ್ 16 ರಂದು, ಕ್ಯಾಪ್ಟನ್ ಬಾತ್ರಾ ಅವರು ದ್ರಾಸ್ ವಲಯದಿಂದ ತಮ್ಮ ಅವಳಿ ಸಹೋದರ ವಿಶಾಲ್‌ಗೆ ಬರೆದ ಪತ್ರದಲ್ಲಿ 'ಡಿಯರ್ ಕುಶ್, ತಾಯಿ ಮತ್ತು ತಂದೆಯನ್ನು ನೋಡಿಕೊ. ಇಲ್ಲಿ ಏನು ಬೇಕಾದರೂ ಆಗಬಹುದು.' ಎಂದು ಬರೆದಿದ್ದರು.

ವಾಸ್ತವವಾಗಿ, 1999 ರಲ್ಲಿ ಪಾಕಿಸ್ತಾನವು ಕಾರ್ಗಿಲ್ನ ಹಲವಾರು ಶಿಖರಗಳನ್ನು ಮೋಸದಿಂದ ವಶಪಡಿಸಿಕೊಂಡಾಗ, ಆ ಶಿಖರಗಳನ್ನು ವಿಮೋಚನೆಗೊಳಿಸಲು ಭಾರತೀಯ ಸೇನೆಯು ಆಪರೇಷನ್ ವಿಜಯ್ ಅನ್ನು ಪ್ರಾರಂಭಿಸಿತು. ಈ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸಿದ್ದು 24 ವರ್ಷದ ಯುವಕ ಕ್ಯಾಪ್ಟನ್ ವಿಕ್ರಮ್ ಬಾತ್ರಾ. ಕಾರ್ಗಿಲ್ ಯುದ್ಧದ ಸಮಯದಲ್ಲಿ ಹುತಾತ್ಮರಾಗುವ ಮೊದಲು, ವಿಕ್ರಮ್ ಬಾತ್ರಾ ಅನೇಕ ಪಾಕಿಸ್ತಾನಿ ಸೈನಿಕರನ್ನು ಕೊಂದು ತಮ್ಮ ಅನೇಕ ಸಹಚರರನ್ನು ರಕ್ಷಿಸಿದ್ದರು. ಅವರ ಧೈರ್ಯಕ್ಕಾಗಿ, ಭಾರತ ಸರ್ಕಾರವು ಮರಣೋತ್ತರವಾಗಿ ಅತ್ಯುನ್ನತ ಮತ್ತು ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಯಾದ ಪರಮವೀರ ಚಕ್ರವನ್ನು ಕ್ಯಾಪ್ಟನ್ ವಿಕ್ರಮ್ ಬಾತ್ರಾ ಅವರಿಗೆ ನೀಡಿತು.

ಸೆಪ್ಟೆಂಬರ್ 9, 1974 ರಂದು ಹಿಮಾಚಲ ಪ್ರದೇಶದ ಪಾಲಂಪುರದಲ್ಲಿ ಜನಿಸಿದ ವಿಕ್ರಮ್ ಬಾತ್ರಾ ಬಾಲ್ಯದಿಂದಲೂ ಸೈನಿಕನಾಗುವ ಉತ್ಸಾಹವನ್ನು ಹೊಂದಿದ್ದರು. 1985 ರಲ್ಲಿ ದೂರದರ್ಶನದಲ್ಲಿ ಪ್ರಸಾರವಾದ 'ಪರಮವೀರ ಚಕ್ರ' ಧಾರಾವಾಹಿಯನ್ನು ನೋಡಿದ ನಂತರ ಅವರು ಸೈನ್ಯಕ್ಕೆ ಸೇರಲು ಒಲವು ತೋರಿದರು. ಹಾಂಕಾಂಗ್ ಶಿಪ್ಪಿಂಗ್ ಕಂಪನಿಯೊಂದರಲ್ಲಿ ಮರ್ಚೆಂಟ್ ನೇವಿ ಕೆಲಸಕ್ಕೆ ಆಯ್ಕೆಯಾಗಿದ್ದರೂ ವಿಕ್ರಮ್ ಸೇನಾ ವೃತ್ತಿಗೆ ಆದ್ಯತೆ ನೀಡಿದರು. ವಿಕ್ರಮ್ ಸೈನ್ಯಕ್ಕೆ ಸೇರ್ಪಡೆಯಾದಾಗ, ಸ್ನೇಹಿತರೊಬ್ಬರು "ಈಗ ನೀನು ಸೈನ್ಯಕ್ಕೆ ಸೇರಿದ್ದೀಯಾ, ಹುಷಾರು..." ಎಂದು ಹೇಳಿದ್ದರು. ಅದಕ್ಕೆ ಉತ್ತರಿಸಿದ ಬಾತ್ರಾ, "ಚಿಂತಿಸಬೇಡ. ನಾನು ವಿಜಯದ ನಂತರ ತ್ರಿವರ್ಣ ಧ್ವಜವನ್ನು ಹಾರಿಸಿಕೊಂಡು ಬರುತ್ತೇನೆ ಅಥವಾ ನಾನು ಅದೇ ತ್ರಿವರ್ಣ ಧ್ವಜವನ್ನು ಸುತ್ತಿಕೊಂಡು ಬರುತ್ತೇನೆ. ಆದರೆ ನಾನು ಖಂಡಿತ ಬರುತ್ತೇನೆ.' ಎಂದಿದ್ದರು. ವಿಕ್ರಮ್ ಬಾತ್ರಾ ಅವರ ಶೌರ್ಯದ ಪ್ರಭಾವ ಎಷ್ಟಿತ್ತೆಂದರೆ, ಅವರ ಬಗ್ಗೆ ಆಗಿನ ಭಾರತೀಯ ಸೇನಾ ಮುಖ್ಯಸ್ಥರೇ ಒಮ್ಮೆ 'ಅವರು ಜೀವಂತವಾಗಿ ಹಿಂತಿರುಗಿದ್ದರೆ, ಅವರು ಸೇನಾ ಮುಖ್ಯಸ್ಥರಾಗುತ್ತಿದ್ದರು' ಎಂದು ಹೇಳಿದ್ದರು. ಭಾರತೀಯ ಸೇನೆಯು 'ವಿಕ್ರಮ್ ಬಾತ್ರಾ ಅವರ ಧೈರ್ಯ ಮತ್ತು ದೈಹಿಕ ಎತ್ತರವನ್ನು ಪರಿಗಣಿಸಿ, ಕಾರ್ಗಿಲ್ ಯುದ್ಧದ ಸಮಯದಲ್ಲಿ ಅವರಿಗೆ ಶೇರ್ ಷಾ ಎಂಬ ಕೋಡ್ ನೇಮ್ ನೀಡಲಾಯಿತು ಮತ್ತು ಪಾಕಿಸ್ತಾನದ ಜನರು ಈಗಲೂ ಅವರನ್ನು ಈ ಹೆಸರಿನಿಂದಲೇ ಕರೆಯುತ್ತಾರೆ. ವಿಕ್ರಮ್ ಬಾತ್ರಾ ಹುತಾತ್ಮರಾದ ನಂತರ, 'ಸಿಂಹ' ಎಂದೂ ಕರೆಯುತ್ತಾರೆ. ಕಾರ್ಗಿಲ್, ಪಾಯಿಂಟ್ 4875 ಶಿಖರವನ್ನು ಬಾತ್ರಾ ಟಾಪ್ ಎಂದು ಹೆಸರಿಸಲಾಗಿದೆ. ■

ವಿಕ್ರಮ್ ಬಾತ್ರಾ ಅವರಿಗೆ ಬಾಲ್ಯದಿಂದಲೂ ಸೈನಿಕನಾಗುವ ಆಸೆಯಿತ್ತು. 1985 ರಲ್ಲಿ ದೂರದರ್ಶನದಲ್ಲಿ ಪ್ರಸಾರವಾದ 'ಪರಮವೀರ ಚಕ್ರ' ಧಾರಾವಾಹಿಯನ್ನು ನೋಡಿದ ನಂತರ ಅವರು ಸೈನ್ಯಕ್ಕೆ ಸೇರಲು ಒಲವು ತೋರಿದರು.

ಸಂವಿಧಾನ ಮತ್ತು ಸಂಸ್ಕಾರದ ಸಮ್ಮಿಲನ

ದೇಶದ ಅತ್ಯುನ್ನತ ಸಾಂವಿಧಾನಿಕ ಹುದ್ದೆಯಾದ ರಾಷ್ಟ್ರಪತಿ ಚುನಾವಣೆಯ ದಿನಾಂಕ ಪ್ರಕಟವಾಗಿದೆ. ಆದರೆ ಪ್ರತಿ ಐದು ವರ್ಷಗಳಿಗೊಮ್ಮೆ ನಡೆಯುವ ರಾಷ್ಟ್ರಪತಿ ಚುನಾವಣೆಯ ಔಪಚಾರಿಕ ಪ್ರಕ್ರಿಯೆಯ ಘೋಷಣೆಗೆ ಸುಮಾರು ಒಂದು ವಾರದ ಮೊದಲು, ಉತ್ತರ ಪ್ರದೇಶದ ಪರೌಂಖ್ ಗ್ರಾಮವು ಅತ್ಯಂತ ಆಕರ್ಷಕ ದೃಶ್ಯಗಳಲ್ಲಿ ಒಂದಕ್ಕೆ ಸಾಕ್ಷಿಯಾಯಿತು, ಅದು ಎಲ್ಲರನ್ನೂ ಆಕರ್ಷಿಸಿತು. ದೇಶದ ಹಾಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಶಿಷ್ಟಾಚಾರವನ್ನು ಬದಿಗೊತ್ತಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪರೌಂಖ್ಗೆ ಆಹ್ವಾನಿಸಿದರು. ಪರೌಂಖ್ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ಪೂರ್ವಜರ ಗ್ರಾಮವಾಗಿದ್ದು, ಅಲ್ಲಿ ಅವರು ಪ್ರಧಾನಿಗೆ ಆತಿಥ್ಯ ನೀಡಿದರು. ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿಯವರು ತಮ್ಮ ಭಾಷಣಗಳಲ್ಲಿ ಉಲ್ಲೇಖಿಸಿದಂತೆ ಸಂವಿಧಾನದ ಘನತೆ ಮತ್ತು ಭಾರತೀಯ ಪದ್ಧತಿಗಳ ಅಂತಹ ವೈಶಿಷ್ಟತೆಯ ಅತ್ಯುತ್ತಮ ಉದಾಹರಣೆಗಳು ವಿರಳವಾಗಿ ಕಂಡುಬರುತ್ತವೆ.

ಸುಮಾರು 50-55 ವರ್ಷಗಳ ಹಿಂದೆ ರಾಷ್ಟ್ರಮಟ್ಟದ ನಾಯಕರೊಬ್ಬರು ಮೊದಲ ಬಾರಿಗೆ ಆಗಮಿಸಿದ ಗ್ರಾಮ. ಹಳ್ಳಿಯ ಅನೇಕ ಜನರು ತಮ್ಮ ಜೀವನದಲ್ಲಿ ಮೊದಲ ಬಾರಿಗೆ ಜೀಪ್ ಅನ್ನು ನೋಡಿದ್ದರು. ಅದು ಕಾನ್ಪುರದ ಪರೌಂಖ್ ಗ್ರಾಮ ಮತ್ತು ನಾಯಕ ಡಾ.ರಾಮ್ ಮನೋಹರ್ ಲೋಹಿಯಾ ಅವರ ತವರು. ಆದರೆ ಸಾಧಾರಣ ಹಿನ್ನೆಲೆಯಿಂದ ಬಂದ ಈ ನೆಲದ ಮಗ ದೇಶದ ಅತ್ಯುನ್ನತ ಸಾಂವಿಧಾನಿಕ ಸ್ಥಾನವನ್ನು ತಲುಪಿದಾಗ, ಅವರ ಆಹ್ವಾನದ ಮೇರೆಗೆ ಪ್ರಧಾನಿಯವರು ಅದೇ ಗ್ರಾಮವನ್ನು ತಲುಪಿದಾಗ ಅದು ನಿಜವಾಗಿಯೂ ಆ ಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಕ್ಕೆ ಐತಿಹಾಸಿಕ ಘಟನೆಯಾಗುತ್ತದೆ. ಅವರ ನಡುವಿನ ಸಂಬಂಧದಲ್ಲಿ ಈ ಸ್ನೇಹಪರತೆ ಹೇಗೆ ಅಸಾಧಾರಣ ಚಮತ್ಕಾರವನ್ನು ತೋರಿಸಿತು ಎಂಬುದನ್ನು ನೋಡೋಣ.

"ಉತ್ತರ ಪ್ರದೇಶವು ದೇಶಕ್ಕೆ 9 ಪ್ರಧಾನ ಮಂತ್ರಿಗಳನ್ನು ನೀಡಿದೆ. ಆದರೆ ಮೊದಲ ಬಾರಿಗೆ, ಇಲ್ಲಿಂದ ಒಬ್ಬ ವ್ಯಕ್ತಿ ರಾಷ್ಟ್ರಪತಿಯಾದರು, ಅದರ ಶ್ರೇಯ ಪ್ರಧಾನ ಮಂತ್ರಿಯವರಿಗೆ ಸಲ್ಲುತ್ತದೆ"

- ನನ್ನ ಆಹ್ವಾನದ ಮೇರೆಗೆ ನೀವು ನನ್ನ ಪೂರ್ವಜರ ಪುಟ್ಟ ಹಳ್ಳಿಗೆ ಭೇಟಿ ನೀಡಿದ್ದೀರಿ, ಅದು ನಿಮ್ಮ ದಯೆ ಮತ್ತು ಔದಾರ್ಯ.
- ಈ ರಾಜ್ಯದ ಬಡ ಕುಟುಂಬದಲ್ಲಿ ಜನಿಸಿದ ನನ್ನಂತಹ ವ್ಯಕ್ತಿಗೆ ರಾಷ್ಟ್ರಪತಿ ಸ್ಥಾನದ ಜವಾಬ್ದಾರಿಯನ್ನು ನೀಡಲು ನೀವು ಮುಂದಾದ ದಿನವೇ ಉತ್ತರ ಪ್ರದೇಶವು ನಿಮಗೆ ಋಣಿಯಾಗಿದೆ.
- ಈ ರಾಜ್ಯವು ದೇಶಕ್ಕೆ ಒಂಬತ್ತು ಪ್ರಧಾನಿಗಳನ್ನು ನೀಡಿದೆ, ಆದರೆ ಒಬ್ಬ ರಾಷ್ಟ್ರಪತಿಯನ್ನು ನೀಡಿರಲಿಲ್ಲ. ದೇಶದ ಅತ್ಯುನ್ನತ ಸಾಂವಿಧಾನಿಕ ಹುದ್ದೆಯ ಜವಾಬ್ದಾರಿಯನ್ನು ಮೊದಲ ಬಾರಿಗೆ ಉತ್ತರ ಪ್ರದೇಶದ ನಿವಾಸಿಯೊಬ್ಬರಿಗೆ ನೀಡಿರುವುದು ಉತ್ತರ ಪ್ರದೇಶದ ಜನತೆಗೆ ಹೆಮ್ಮೆ ತಂದಿದೆ. ಇದರ ಶ್ರೇಯ ಪ್ರಧಾನಿಯವರಿಗೆ ಸಲ್ಲುತ್ತದೆ.
- ಪ್ರತಿಯೊಬ್ಬ ನಾಗರಿಕನ ಜೀವನವನ್ನು ಸುಲಭ ಮತ್ತು ಸಂತೋಷದಾಯಕವಾಗಿಸಲು ಪ್ರಧಾನ ಮಂತ್ರಿಯವರು ನಿರಂತರವಾಗಿ ಶ್ರಮಿಸುತ್ತಿರುವುದು ದೇಶದ ಸೌಭಾಗ್ಯವೆಂದು ನಾನು ಪರಿಗಣಿಸುತ್ತೇನೆ. ಭಾರತಮಾತೆಯ ಸೇವೆಯ ಅರ್ಥಕ್ಕೆ ಹೊಸ ಆಯಾಮಗಳನ್ನು ನೀಡಿದ ಅವರು ರಾಷ್ಟ್ರೀಯ ಸೇವೆ-ಸಾರ್ವಜನಿಕ ಕಲ್ಯಾಣ ಎಂಬ ಪರಿಕಲ್ಪನೆಗೆ ಹೊಸ ಅರ್ಥವನ್ನು ನೀಡಿದ್ದಾರೆ.
- ಬಾಬಾಸಾಹೇಬರು ಭಾರತೀಯ ಸಂಸ್ಕೃತಿ ಮತ್ತು ಬಡವರು, ಹಿಂದುಳಿದವರು ಮತ್ತು ವಂಚಿತ ವರ್ಗಗಳ ಉನ್ನತಿಯ ಆಧಾರದ ಮೇಲೆ ಅಂತರ್ಗತ ಮತ್ತು ಸಾಮರಸ್ಯದ ಸಮಾಜವನ್ನು ನಿರ್ಮಿಸಲು ತಮ್ಮ ಜೀವನದುದ್ದಕ್ಕೂ ಹೋರಾಡಿದರು. ಪ್ರಧಾನಿಯವರು ತಮ್ಮ ಆದರ್ಶಗಳನ್ನು ಜಾರಿಗೆ ತಂದಿರುವ ರೀತಿ ನಮಗೆಲ್ಲರಿಗೂ ಮಾದರಿಯಾಗಿದೆ.
- ನಾನು ನನ್ನ ಹಳ್ಳಿಗೆ ಬಂದಾಗ, ನಾನು ಸಹಜವಾಗಿ ನನ್ನ ಹಣೆಗೆ ಅದರ ಮಿಟ್ಟಿ (ಮಣ್ಣನ್ನು) ಹಚ್ಚಿಕೊಳ್ಳುತ್ತೇನೆ. ಮಾತೃಶಕ್ತಿಯ ಮೇಲಿನ ವಿಶೇಷ ವಾತ್ಸಲ್ಯ ಮತ್ತು ಗೌರವವನ್ನು ನಾನು ಪ್ರಧಾನಿಯವರ ಜೀವನದಲ್ಲಿಯೂ ನೋಡಿದ್ದೇನೆ.
- ಪ್ರಧಾನ ಮಂತ್ರಿಯವರ ಬಲವಾದ ಇಚ್ಛಾಶಕ್ತಿಯನ್ನು ನಾನು ಉಲ್ಲೇಖಿಸಲು ಬಯಸುತ್ತೇನೆ. ಇತ್ತೀಚೆಗೆ ಜಪಾನ್‌ಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅಲ್ಲಿನ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ, ಬೆಣ್ಣೆಯ ಮೇಲೆ ಅಲ್ಲ, ಕಲ್ಲಿನ ಮೇಲೆ ಗುರುತು ಮೂಡಿಸಲು ಇಷ್ಟಪಡುತ್ತೇನೆ ಎಂದು ಹೇಳಿದ್ದರು.
- ಪ್ರಧಾನಮಂತ್ರಿಯವರ ಈ ಪರಿಶ್ರಮವೇ ಇಂದು ವಿಶ್ವ ವೇದಿಕೆಯಲ್ಲಿ ಭಾರತದ ಶಕ್ತಿಯನ್ನು ಮರುಸ್ಥಾಪಿಸುತ್ತಿದೆ.
- ಅವರು ತಮ್ಮ ಅಸಾಧಾರಣ ಸ್ಥೈರ್ಯ ಮತ್ತು ಶ್ರದ್ಧೆಯಿಂದ ರಾಷ್ಟ್ರದ ಗುರುತು ಮತ್ತು ಘನತೆಗೆ ಭವ್ಯತೆಯನ್ನು ನೀಡಿದ್ದಾರೆ. ಅಂತಹ ಭಾರತಮಾತೆಯ ಮಗನ ಬಗ್ಗೆ ದೇಶವಾಸಿಗಳೆಲ್ಲರೂ ಹೆಮ್ಮೆಪಡುತ್ತಾರೆ.

"ಭಾರತದ ಹಳ್ಳಿಯೊಂದರಲ್ಲಿ ಜನಿಸಿದ ಬಡವರೂ ಕೂಡ ರಾಷ್ಟ್ರಪತಿ-ಪ್ರಧಾನಿ-ರಾಜ್ಯಪಾಲ-ಮುಖ್ಯಮಂತ್ರಿ ಹುದ್ದೆಯನ್ನು ತಲುಪಬಹುದು"

- ಈ ಗ್ರಾಮವು ರಾಷ್ಟ್ರಪತಿಯವರ ಬಾಲ್ಯವನ್ನೂ ನೋಡಿದೆ ಮತ್ತು ಅವರು ಬೆಳೆದ ನಂತರ ಅವರು ಪ್ರತಿಯೊಬ್ಬ ಭಾರತೀಯನ ಹೆಮ್ಮೆಯೂ ಆಗಿದ್ದಾರೆ. ಐದನೆಯ ತರಗತಿ ನಂತರ 5-6 ಮೈಲಿ ದೂರದ ಹಳ್ಳಿಯ ಶಾಲೆಗೆ ದಾಖಲಾದಾಗ ಬರಿಗಾಲಿನಲ್ಲಿ ಶಾಲೆಗೆ ಓಡುತ್ತಿದ್ದನು ಮತ್ತು ಈ ಓಟವು ಅವನ ಆರೋಗ್ಯಕ್ಕಾಗಿ ಅಲ್ಲ ಎಂದು ನನಗೆ ಗೊತ್ತು. ಹಾಗೆ ಓಡುತ್ತಿದ್ದದ್ದು ದಾರಿಯಲ್ಲಿ ಪಾದಗಳ ಉರಿ ಕಡಿಮೆಯಾಗಲೆಂದು.
- ನಾನು ಪರೌಂಖನಲ್ಲಿ ಭಾರತೀಯ ಹಳ್ಳಿಗಳ ಅನೇಕ ಆದರ್ಶ ಚಿತ್ರಗಳನ್ನು ನೋಡಿದೆ. ಇಲ್ಲಿ ನನಗೆ ಮೊದಲು ಪಠಾರಿ ಮಾತೆಯ ಆಶೀರ್ವಾದ ಪಡೆಯುವ ಅವಕಾಶ ದೊರೆಯಿತು. ಈ ದೇವಾಲಯವು ಈ ಗ್ರಾಮದ ಸಂಕೇತವಾಗಿದೆ, ಈ ಪ್ರದೇಶದ ಆಧ್ಯಾತ್ಮಿಕ ಸೆಳವು ಮತ್ತು ಭವ್ಯ ಭಾರತವಾಗಿದೆ. ಭಕ್ತಿ, ದೇಶಭಕ್ತಿ ಇರುವ ಕಡೆ ದೇವಸ್ಥಾನವಿರುತ್ತದೆ ಎಂದು ನಾನು ಹೇಳಬಲ್ಲೆ.
- ರಾಷ್ಟ್ರಪತಿಯವರ ತಂದೆಯವರ ಚಿಂತನೆಗೆ ನನ್ನ ನಮನ. ಅವರ ಕಲ್ಪನೆಗೆ ನಾನು ವಂದಿಸುತ್ತೇನೆ. ಅವರು ತಮ್ಮ ಜೀವನದಲ್ಲಿ ಅನೇಕ ತೀರ್ಥಯಾತ್ರೆಗಳನ್ನು ಕೈಗೊಂಡರು, ವಿವಿಧ ಯಾತ್ರಾ ಸ್ಥಳಗಳಿಗೆ ಹೋದರು, ಕೆಲವೊಮ್ಮೆ ಬದರಿನಾಥಕ್ಕೂ ಹೋದರು, ಕೆಲವೊಮ್ಮೆ ಕೇದಾರನಾಥಕ್ಕೆ ಹೋದರು, ಕೆಲವೊಮ್ಮೆ ಅಯೋಧ್ಯೆಗೆ ಹೋದರು, ಕೆಲವೊಮ್ಮೆ ಕಾಶಿಗೆ ಹೋದರು, ಕೆಲವೊಮ್ಮೆ ಮಥುರಾಗೆ ಮತ್ತು ಇನ್ನೂ ಹಲವಾರು ಸ್ಥಳಗಳಿಗೆ ಹೋದರು.
- ಆಗಿನ ಅವರ ಆರ್ಥಿಕ ಸ್ಥಿತಿ ಅಷ್ಟೊಂದು ಚೆನ್ನಾಗಿರಲಿಲ್ಲ, ಆದರೂ ಅವರು ಊರವರೆಲ್ಲರಿಗೂ ಅಲ್ಲಿಂದ ಯಾವುದಾದರೂ 'ಪ್ರಸಾದ'ತರುತ್ತಿದ್ದರು. ಅಲ್ಲದೆ, ಆ ತೀರ್ಥಕ್ಷೇತ್ರದಿಂದ ಒಂದಷ್ಟು ಕಲ್ಲುಗಳನ್ನು ತರುತ್ತಿದ್ದರು. ಇಲ್ಲಿ ಮರದ ಕೆಳಗೆ ಆ ಕಲ್ಲುಗಳನ್ನು ಹಾಕಲಾಯಿತು. ಇಲ್ಲಿ ಸಂಗ್ರಹಿಸಿರುವ ಕಲ್ಲು ಹಿಂದೂಸ್ತಾನದ ಮೂಲೆ ಮೂಲೆಯಿಂದ ಬಂದಿವೆ, ಈಗ ಗ್ರಾಮಸ್ಥರು ಅದನ್ನು ದೇವಾಲಯವಾಗಿ ಪೂಜಿಸುತ್ತಿದ್ದಾರೆ.
- ರಾಷ್ಟ್ರಪತಿಯವರು ಪರೌಂಖನ ಮಣ್ಣಿನಿಂದ ಪಡೆದ ಸಂಸ್ಕಾರಕ್ಕೆ ಜಗತ್ತು ಇಂದು ಸಾಕ್ಷಿಯಾಗಿದೆ. ಸಂವಿಧಾನ ಒಂದು ಕಡೆ, ಸಂಸ್ಕೃತಿ ಮತ್ತೊಂದೆಡೆ ಮತ್ತು ರಾಷ್ಟ್ರಪತಿಯವರು ಇಂದು ಎಲ್ಲಾ ಶಿಷ್ಟಾಚಾರಗಳನ್ನು ಮುರಿಯುವ ಮೂಲಕ ಇಂದು ನನ್ನನ್ನು ಆಶ್ಚರ್ಯಗೊಳಿಸಿದ್ದಾರೆ.
- ಅವರು ನನ್ನನ್ನು ಬರಮಾಡಿಕೊಳ್ಳಲು ಹೆಲಿಪ್ಯಾಡ್‌ಗೆ ಬಂದಿದ್ದರು. ಅವರ ಮಾರ್ಗದರ್ಶನದಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ, ಅವರ ಸ್ಥಾನಕ್ಕೆ ಘನತೆ ಮತ್ತು ಹಿರಿತನವಿದೆ ನನಗೆ ತುಂಬಾ ಮುಜುಗರವಾಯಿತು. ರಾಷ್ಟ್ರಪತಿಯವರೇ, ನೀವು ಇಂದು ನನಗೆ ಅನ್ಯಾಯ ಮಾಡಿದಿರಿ ಎಂದು ನಾನು ಹೇಳಿದೆ. ಅದಕ್ಕೆ ಸಹಜವಾಗಿ ಉತ್ತರಿಸಿದ ಅವರು ನಾನು ಸಂವಿಧಾನದ ನಿಯಮಗಳನ್ನು ಅನುಸರಿಸುತ್ತೇನೆ, ಆದರೆ ಕೆಲವೊಮ್ಮೆ ಸಂಸ್ಕೃತಿಯೂ ತನ್ನದೇ ಶಕ್ತಿಯನ್ನು ಹೊಂದಿರುತ್ತದೆ ಎಂದರು. ■

ಹೊಸ ಬದ್ಧತೆಗಳು ಹೊಸ ಸಂಕಲ್ಪ

ಕೋವಿಡ್ ಅವಧಿಯಲ್ಲಿ ಜಗತ್ತು ಸ್ತಬ್ಧಗೊಂಡಾಗ, ಭಾರತ ಹಾಗೆ ಮಾಡಲಿಲ್ಲ. ಭಾರತವು ಮುಂದೆ ಸಾಗಲು ಮತ್ತು ಸ್ವಾವಲಂಬಿಯಾಗಲು ನಿರ್ಧರಿಸಿತು. ಈ ಸಂಕಲ್ಪವು ಅಭೂತಪೂರ್ವವಾದ ಯಶಸ್ಸಿಗೆ ಕಾರಣವಾಯಿತು. ಈ ಅವಧಿಯಲ್ಲಿ, ದೇಶವು ಅನೇಕ ಪ್ರಥಮಗಳನ್ನು ಸಾಧಿಸಿತು: ಮೊದಲ ಬಾರಿಗೆ, ರಫ್ತು 30 ಲಕ್ಷ ಕೋಟಿ ರೂ. ಮೀರಿದೆ ಮತ್ತು ಮೊದಲ ಬಾರಿಗೆ, 84 ಶತಕೋಟಿ ಡಾಲರ್ ವಿದೇಶಿ ನೇರ ಹೂಡಿಕೆಯನ್ನು ಮಾಡಲಾಯಿತು. 70 ಸಾವಿರಕ್ಕೂ ಹೆಚ್ಚು ನೋಂದಾಯಿತ ಸ್ಟಾರ್ಟ್‌ಅಪ್‌ಗಳು ಮತ್ತು 100 ಯುನಿಕಾರ್ನ್‌ಗಳೊಂದಿಗೆ, ದೇಶವು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಮತ್ತು ವಿಶ್ವದ ಮೂರನೇ ಅತಿದೊಡ್ಡ ಇಂಧನ ಗ್ರಾಹಕ ದೇಶವಾಗಿ ಹೊರಹೊಮ್ಮಿದೆ. ಆದರೆ ಈಗ ವಿರಾಮ ತೆಗೆದುಕೊಳ್ಳುವ ಸಮಯವಲ್ಲ; ಬದಲಿಗೆ, ತ್ವರಿತವಾಗಿ ಮುನ್ನುಗ್ಗಬೇಕಿದೆ. ಜೂನ್ 3 ರಂದು ಲಕ್ನೋದಲ್ಲಿ ನಡೆದ ಉತ್ತರ ಪ್ರದೇಶ ಹೂಡಿಕೆದಾರರ ಶೃಂಗಸಭೆಯ ಮೊದಲ ಹಂತದಲ್ಲಿ 80,000 ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ 1406 ಹೊಸ ಯೋಜನೆಗಳಿಗೆ ಅಡಿಪಾಯ ಹಾಕುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ನವಭಾರತದ ಸಂಕಲ್ಪವನ್ನು ಪುನರುಚ್ಚರಿಸಿದರು.

ದೇಶದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯವಾದ ಉತ್ತರ ಪ್ರದೇಶವು ತನ್ನದೇ ಆದ ಸುದೀರ್ಘ ಮತ್ತು ಅದ್ಭುತವಾದ ಸಾಂಸ್ಕೃತಿಕ ಇತಿಹಾಸವನ್ನು ಹೊಂದಿದೆ. ರಾಜ್ಯವು ಈಗಾಗಲೇ ಯಮುನಾ ಎಕ್ಸ್‌ಪ್ರೆಸ್‌ವೇ, ಪೂರ್ವಾಂಚಲ ಎಕ್ಸ್‌ಪ್ರೆಸ್‌ವೇ ಮತ್ತು ಲಕ್ನೋ-ಆಗ್ರಾ ಎಕ್ಸ್‌ಪ್ರೆಸ್‌ವೇಗಳನ್ನು ಹೊಂದಿದೆ. ಬುಂದೇಲ್‌ಖಂಡ್ ಎಕ್ಸ್‌ಪ್ರೆಸ್‌ವೇ ಬಹುತೇಕ ಪೂರ್ಣಗೊಂಡಿದೆ. ಗಂಗಾ ಎಕ್ಸ್‌ಪ್ರೆಸ್‌ವೇಗೆ ಶಂಕುಸ್ಥಾಪನೆ ಮಾಡಲಾಗಿದೆ. ಈಗ, ಒಂಬತ್ತು ವಿಮಾನ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿವೆ, ಇನ್ನೂ ಐದು ನಿರ್ಮಾಣ ಹಂತದಲ್ಲಿವೆ. ಅದರ ಹೊರತಾಗಿ, ಏಳು ಹೆಚ್ಚುವರಿ ವಿಮಾನ ನಿಲ್ದಾಣಗಳನ್ನು ಪ್ರಸ್ತಾಪಿಸಲಾಗಿದೆ. ಉತ್ತರ ಪ್ರದೇಶವು ದೇಶದ ಎರಡು ರಕ್ಷಣಾ ಕಾರಿಡಾರ್‌ಗಳಲ್ಲಿ ಒಂದಾಗಿದೆ. ಈ ರಾಜ್ಯವು ದೀರ್ಘಕಾಲದಿಂದ ಶ್ರಮಿಸುತ್ತಿರುವ ಹೊಸ ಅಭಿವೃದ್ಧಿ ಮಾಪಕಗಳಾಗಿವೆ. ಜೂನ್ 3 ರಂದು ನಡೆದ ಉತ್ತರ ಪ್ರದೇಶ ಹೂಡಿಕೆದಾರರ ಶೃಂಗಸಭೆಯಲ್ಲಿ 80 ಸಾವಿರ ಕೋಟಿ ರೂ.ಗೂ ಹೆಚ್ಚು ಮೌಲ್ಯದ 1406 ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದ ಪ್ರಧಾನಿ ನರೇಂದ್ರ ಮೋದಿ, "ಉತ್ತರ ಪ್ರದೇಶವು ಭಾರತದ ಜನಸಂಖ್ಯೆಯ ಐದನೇ ಒಂದು ಭಾಗವನ್ನು ಹೊಂದಿದೆ. ಅಂದರೆ, ಉತ್ತರ ಪ್ರದೇಶದ ಒಬ್ಬ ವ್ಯಕ್ತಿಯ ಪ್ರಗತಿಯು ಭಾರತದ ಪ್ರತಿ ಆರನೇ ವ್ಯಕ್ತಿಗೆ ಪ್ರಯೋಜನವನ್ನು ನೀಡುತ್ತದೆ. 21 ನೇ ಶತಮಾನದಲ್ಲಿ ಉತ್ತರ ಪ್ರದೇಶವು ಭಾರತದ ಬೆಳವಣಿಗೆಯ ಕಥೆಯನ್ನು ವೇಗಗೊಳಿಸುತ್ತದೆ ಎಂದು ನಾನು ನಂಬುತ್ತೇನೆ." ಎಂದು ಹೇಳಿದರು.

ಪ್ರಧಾನಿ ಮೋದಿಯವರ ಭಾಷಣದ ಹತ್ತು ಪ್ರಮುಖ ಅಂಶಗಳು

- ಇಂದು ವಿಶ್ವದ ನಿರೀಕ್ಷೆಗೆ ತಕ್ಕಂತೆ ವಿಶ್ವಸನೀಯ ಪಾಲುದಾರನಾಗುವ ಸಾಮರ್ಥ್ಯ ನಮ್ಮ ಪ್ರಜಾಸತ್ತಾತ್ಮಕ ಭಾರತಕ್ಕೆ ಮಾತ್ರ ಇದೆ. ಇಂದು ವಿಶ್ವದ ಇತರ ದೇಶಗಳು ಭಾರತದ ಸಾಮರ್ಥ್ಯವನ್ನು ಗುರುತಿಸುತ್ತಿವೆ.
- ಭಾರತವು ಬಲವಾದ ಉತ್ಪಾದನಾ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಮತ್ತು ಬಲವಾದ ಮತ್ತು ವೈವಿಧ್ಯಮಯ ಮೌಲ್ಯ ಮತ್ತು ಪೂರೈಕೆ ಸರಪಳಿಯನ್ನು ಅಭಿವೃದ್ಧಿಪಡಿಸಲು ಪ್ರತಿಯೊಬ್ಬರ ಕೊಡುಗೆ ಅಗತ್ಯವಿದೆ. ಅದರ ಭಾಗವಾಗಿ, ಸರ್ಕಾರವು ಹೊಸ ನೀತಿಗಳನ್ನು ಜಾರಿಗೆ ತರುತ್ತಿದೆ ಮತ್ತು ಹಳೆಯದನ್ನು ಸುಧಾರಿಸುತ್ತಿದೆ.
- ನಾವು ಸ್ಥಿರವಾದ ನೀತಿ, ಸಮನ್ವಯ ಮತ್ತು ಸುಲಭ ವ್ಯವಹಾರಕ್ಕೆ ಒತ್ತು ನೀಡಿದ್ದೇವೆ. ಈ ಹಿಂದಿನ ಹಳೆಯ ಕಾನೂನುಗಳನ್ನು ರದ್ದುಗೊಳಿಸಲಾಗಿದೆ. ಈ ಎಲ್ಲಾ ಪ್ರಯತ್ನಗಳು ನಮ್ಮ ನಿರ್ದಿಷ್ಟ ಮತ್ತು ಉತ್ತಮವಾಗಿ ವ್ಯಾಖ್ಯಾನಿಸಲಾದ ನೀತಿಗಳ ಫಲಿತಾಂಶವಾಗಿದೆ. ಒಂದು ರಾಷ್ಟ್ರ-ಒಂದು ತೆರಿಗೆ, ಜಿಎಸ್‌ಟಿ, ಒಂದು ರಾಷ್ಟ್ರ-ಒಂದು ಗ್ರಿಡ್, ಒಂದು ರಾಷ್ಟ್ರ-ಒಂದು ಮೊಬಿಲಿಟಿ ಕಾರ್ಡ್ ಮತ್ತು ಒಂದು ರಾಷ್ಟ್ರ –ಒಂದು ಪಡಿತರ ಚೀಟಿ.
- 2014ರಲ್ಲಿ ನಮ್ಮ ದೇಶ ಕೇವಲ 6 ಕೋಟಿ ಬ್ರಾಡ್‌ಬಾಂಡ್ ಚಂದಾದಾರರನ್ನು ಹೊಂದಿತ್ತು. ಅವರ ಸಂಖ್ಯೆ ಈಗ 78 ಕೋಟಿ ದಾಟಿದೆ. 2014 ರಲ್ಲಿ 1 ಜಿಬಿ ಡೇಟಾಗೆ ಸುಮಾರು 200 ರೂ. ವೆಚ್ಚವಾಗುತ್ತಿತ್ತು. ಅದರ ಬೆಲೆ ಈಗ 11-12 ರೂ.ಗೆ ಇಳಿದಿದೆ.
- ಇಂತಹ ಕಡಿಮೆ ಡೇಟಾ ವೆಚ್ಚವನ್ನು ಹೊಂದಿರುವ ವಿಶ್ವದ ಕೆಲವೇ ದೇಶಗಳಲ್ಲಿ ಭಾರತವೂ ಒಂದಾಗಿದೆ. 2014 ರಲ್ಲಿ ದೇಶವು 11 ಲಕ್ಷ ಕಿಲೋಮೀಟರ್ ಆಪ್ಟಿಕಲ್ ಫೈಬರ್ ಅನ್ನು ಹೊಂದಿತ್ತು. ಈಗ ದೇಶದಲ್ಲಿ ಹಾಕಲಾದ ಆಪ್ಟಿಕಲ್ ಫೈಬರ್ ನ ಒಟ್ಟು ಉದ್ದವು 28 ಲಕ್ಷ ಕಿಲೋಮೀಟರ್‌ಗಳನ್ನು ಮೀರಿದೆ. ■

ಬಾಹ್ಯಾಕಾಶ ಕ್ಷೇತ್ರದಲ್ಲಿ ಖಾಸಗಿ ವಲಯವು ಪ್ರಮುಖ ಶಕ್ತಿಯಾಗಿ ಹೊರಹೊಮ್ಮಲಿದೆ

ಬಾಹ್ಯಾಕಾಶ ಮತ್ತು ನೀರು ಮನುಕುಲದ ಭವಿಷ್ಯ ಮತ್ತು ಬೃಹತ್ ಪ್ರಗತಿಯ ಮೇಲೆ ದೊಡ್ಡ ಪ್ರಭಾವವನ್ನು ಬೀರುವ ಎರಡು ಕ್ಷೇತ್ರಗಳಾಗಿವೆ. ಭಾರತ ಆದಷ್ಟು ಬೇಗ ಈ ಆಕರ್ಷಕ ಅವಕಾಶಗಳನ್ನು ಬಳಸಿಕೊಳ್ಳಬೇಕು. ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಗೆ ಅನುಗುಣವಾಗಿ ಬಾಹ್ಯಾಕಾಶ ಕ್ಷೇತ್ರವನ್ನು ಖಾಸಗಿ ಉದ್ಯಮಗಳಿಗೆ ಮುಕ್ತಗೊಳಿಸಲಾಗಿದೆ. ಅಹಮದಾಬಾದ್‌ನ ಭೋಪಾಲ್‌ನಲ್ಲಿರುವ ಇನ್-ಸ್ಪೇಸ್ ಪ್ರಧಾನ ಕಛೇರಿಯ ಇಸ್ರೋದ ಸೌಲಭ್ಯಗಳು ಮತ್ತು ತಂತ್ರಜ್ಞಾನಗಳಿಗೆ ಖಾಸಗಿ ವಲಯಕ್ಕೆ ಪ್ರವೇಶ ಕಲ್ಪಿಸಲು ಜೂನ್ 10 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದರು. ಗುಜರಾತ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ, ಪ್ರಧಾನಿಯವರು ನವಸಾರಿಯಲ್ಲಿ ಎಎಮ್ ನಾಯಕ್ ಹೆಲ್ತ್‌ಕೇರ್ ಕಾಂಪ್ಲೆಕ್ಸ್ ಮತ್ತು ನಿರಾಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸೇರಿದಂತೆ ಒಟ್ಟು 3050 ಕೋಟಿ ರೂ.ಗಳ ಅನೇಕ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದರು.

ಭಾರತದೊಳಗಡೆ ಮಿತಿಯಿಲ್ಲದ ಸಾಧ್ಯತೆಗಳಿವೆ, ಆದರೆ ಸೀಮಿತ ಪ್ರಯತ್ನಗಳಿಂದ ಅನಂತ ಸಾಧ್ಯತೆಗಳನ್ನು ಎಂದಿಗೂ ವಾಸ್ತವಗೊಳಿಸಲಾಗುವುದಿಲ್ಲ. 21ನೇ ಶತಮಾನದಲ್ಲಿ ಅಭಿವೃದ್ಧಿ ಕ್ರಾಂತಿಯ ದೊಡ್ಡ ಆಧಾರಸ್ತಂಭವಾಗಲಿರುವ ಬಾಹ್ಯಾಕಾಶ ಕ್ಷೇತ್ರಕ್ಕೂ ಇದು ಅನ್ವಯಿಸುತ್ತದೆ. ಭಾರತದ ಬಾಹ್ಯಾಕಾಶ ಕ್ಷೇತ್ರದಲ್ಲಿ ಇರುವ ಈ ಮಿತಿಯಿಲ್ಲದ ಸಾಧ್ಯತೆಗಳನ್ನು ಬಳಸಿಕೊಳ್ಳಲು ಹೊಸ ಆರಂಭವನ್ನು ಮಾಡಲಾಗಿದೆ. ಅಹಮದಾಬಾದ್‌ನ ಭೋಪಾಲ್‌ನಲ್ಲಿ ಇನ್-ಸ್ಪೇಸ್‌ಗೆ ಚಾಲನೆ ನೀಡಿರುವುದು ಈ ದಿಕ್ಕಿನಲ್ಲಿ ಪ್ರಮುಖ ಹೆಜ್ಜೆಯಾಗಿದೆ. ಜೂನ್ 10 ರಂದು ಇದನ್ನು ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, "ಇಂದು, 21 ನೇ ಶತಮಾನದ ಆಧುನಿಕ ಭಾರತದ ಅಭಿವೃದ್ಧಿ ಪಯಣದಲ್ಲಿ ಅದ್ಭುತ ಅಧ್ಯಾಯವೊಂದನ್ನು ಸೇರಿಸಲಾಗಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ವ್ಯವಹಾರವನ್ನು ಸುಲಭಗೊಳಿಸಲು ನಾವು ಶೀಘ್ರದಲ್ಲೇ ನೀತಿಯನ್ನು ಹೊರತರಲಿದ್ದೇವೆ ಎಂದರು.

ಈ ಯೋಜನೆಯನ್ನು ಜೂನ್ 2020 ರಲ್ಲಿ ಕೇಂದ್ರ ಸಂಪುಟವು ಅನುಮೋದಿಸಿತ್ತು. ಇದು ಭಾರತ ಸರ್ಕಾರದ ಬಾಹ್ಯಾಕಾಶ ಇಲಾಖೆಯ ಸ್ವತಂತ್ರ ನೋಡಲ್ ಏಜೆನ್ಸಿಯಾಗಿದೆ. ಬೋಪಾಲ್‌ನಲ್ಲಿ ಅದರ ಉದ್ಘಾಟನಾ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, "ಬಹಳಷ್ಟು ಸಮಯದಿಂದ ಖಾಸಗಿ ವಲಯವನ್ನು ಬಾಹ್ಯಾಕಾಶ ಉದ್ಯಮದಲ್ಲಿ ಕೇವಲ ಮಾರಾಟಗಾರರಂತೆ ನೋಡಲಾಗುತ್ತಿದೆ. ಆದರೆ ಈಗ ಖಾಸಗಿ ವಲಯವು ಇನ್ನು ಮುಂದೆ ಕೇವಲ ಮಾರಾಟಗಾರರಾಗಿರುವುದಿಲ್ಲ, ಬದಲಿಗೆ ಬಾಹ್ಯಾಕಾಶ ಕ್ಷೇತ್ರದಲ್ಲಿ ದೊಡ್ಡ ಆಟಗಾರನ ಪಾತ್ರವನ್ನು ವಹಿಸುತ್ತದೆ ಎಂದರು. ಸಾರ್ವಜನಿಕ ಬಾಹ್ಯಾಕಾಶ ಸಂಸ್ಥೆಗಳ ಶಕ್ತಿ ಮತ್ತು ಭಾರತದ

ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಬೆಳವಣಿಗೆಯ ಸಾಮರ್ಥ್ಯಗಳು

ವಿಶ್ವ ದಾಖಲೆ

ಒಂದೇ ಉಡ್ಡಯನದಲ್ಲಿ ದಾಖಲೆಯ 104 ಉಪಗ್ರಹಗಳನ್ನು ಉಡಾವಣೆ ಮಾಡಲಾಯಿತು.

ಒಂದೇ ಉಡ್ಡಯನದಲ್ಲಿ 3 ಕಕ್ಷೆಯ ಕಾರ್ಯಾಚರಣೆಗಳನ್ನು ಪ್ರಾರಂಭಿಸಲಾಯಿತು.

ಉಪಗ್ರಹಗಳು

ಸಂವಹನದ ವೇಗ ಹೆಚ್ಚಿಸಲು ಮತ್ತಷ್ಟು ಭಾರತದ ಅತ್ಯಾಧುನಿಕ ಉಪಗ್ರಹಗಳಾದ ಜಿಸ್ಯಾಟ್-11ಮತ್ತು ಜಿಸ್ಯಾಟ್-29 ಅನ್ನು ಉಡಾವಣೆ ಮಾಡಲಾಯಿತು.

ಕಳೆದ 8 ವರ್ಷಗಳಲ್ಲಿ ದಾಖಲೆಯ ಬಾಹ್ಯಾಕಾಶ ಕಾರ್ಯಾಚರಣೆಗಳು. 2014 ಕ್ಕೂ ಮೊದಲು, ವಾರ್ಷಿಕವಾಗಿ ಸರಾಸರಿ 1.7 ಮಿಷನ್ಗಳನ್ನು ಪ್ರಾರಂಭಿಸಲಾಯಿತು, ಇದು 2014 ರಿಂದ ವರ್ಷಕ್ಕೆ 5.4 ಕ್ಕೆ ಹೆಚ್ಚಾಗಿದೆ.

ಐಆರ್‌ಎನ್‌ಎಸ್‌ಎಸ್-1ಜಿ

ಭಾರತಕ್ಕೆ ತನ್ನದೇ ಆದ ಉಪಗ್ರಹ ನ್ಯಾವಿಗೇಷನ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಸಾಮರ್ಥ್ಯವನ್ನು ನೀಡಿದೆ.

ಅದೇ ರೀತಿ, ನಾವು ಬಾಹ್ಯಾಕಾಶ ವ್ಯೋಮ ನೌಕೆಯ ಕಾರ್ಯಾಚರಣೆ ಕುರಿತು ನಾವು ಹೇಳಿದರೆ, 2014 ಕ್ಕೂ ಮೊದಲು, ಇದು ವರ್ಷಕ್ಕೆ 2.15 ಆಗಿತ್ತು, ಇದು 2014 ರಿಂದ 5.9 ಕ್ಕೆ ಏರಿದೆ.

2014 ಕ್ಕೂ ಮೊದಲು 35 ವಿದೇಶಿ ಉಪಗ್ರಹಗಳನ್ನು ಉಡಾವಣೆ ಮಾಡಲಾಗಿತ್ತು, ಇದು 2014 ರ ನಂತರ 307 ಕ್ಕೆ ಏರಿದೆ.

ಐಎಸ್‌ಪಿಎ

ಭಾರತೀಯ ಬಾಹ್ಯಾಕಾಶ ಸಂಘಟನೆ (ಐಎಸ್‌ಪಿಎ) ಯ ಆರಂಭವು ವಾಣಿಜ್ಯ ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತವನ್ನು ಜಾಗತಿಕ ನಾಯಕನನ್ನಾಗಿ ಮಾಡುವ ಉಪಕ್ರಮವಾಗಿದೆ. ಪ್ರಗತಿಶೀಲ ಬಾಹ್ಯಾಕಾಶ ಸುಧಾರಣೆಗಳು, ಕಾರ್ಯಕ್ರಮಗಳು ಮತ್ತು ಕಾರ್ಯಾಚರಣೆಗಳ ಮೂಲಕ ಭಾರತವು ಪ್ರಮುಖ ಬಾಹ್ಯಾಕಾಶ ಸೂಪರ್ ಪವರ್ ಆಗಿ ಹೊರಹೊಮ್ಮುತ್ತಿದೆ.

ಮಂಗಳಯಾನ ಮಿಷನ್ ಮೂಲಕ ಭಾರತವು ಮೊದಲ ಪ್ರಯತ್ನದಲ್ಲಿ ಮಂಗಳ ಗ್ರಹದ ಕಕ್ಷೆಯನ್ನು ತಲುಪಿತು

ಇದುವರೆಗೆ 34 ವಿವಿಧ ದೇಶಗಳ

342

ಉಪಗ್ರಹಗಳನ್ನು ಉಡಾವಣೆ ಮಾಡಲಾಗಿದೆ.

ಇನ್-ಸ್ಪೇಸ್ ಒದಗಿಸುವ ಸೌಲಭ್ಯಗಳು

ನಮ್ಮ ಉದ್ಯಮಕ್ಕೆ ಬೇಕಾಗಿರುವ ನೆರವನ್ನು ಇನ್-ಸ್ಪೇಸ್ಒದಗಿಸುತ್ತದೆ. ಇದು ಪ್ರವರ್ತಕ, ಸಕ್ರಿಯ, ಅಧಿಕೃತ ಮತ್ತು ಮೇಲ್ವಿಚಾರಕನಾಗಿ ಕಾರ್ಯನಿರ್ವಹಿಸುತ್ತದೆ. ಉಪಗ್ರಹಗಳ ವಿನ್ಯಾಸ, ತಯಾರಿಕೆ, ಜೋಡಣೆ, ಸಂಯೋಜನೆ ಮತ್ತು ಪರೀಕ್ಷೆಯ ಉಪಕರಣಗಳು ಭಾರತೀಯ ಕಂಪನಿಗಳಿಗೆ ಇನ್‌ಸ್ಪೇಸ್ ತಾಂತ್ರಿಕ ಪ್ರಯೋಗಾಲಯ ಮತ್ತು ಕ್ಲೀನ್ ರೂಮ್ನಲ್ಲಿ ಲಭ್ಯವಿರುತ್ತವೆ. ಬಾಹ್ಯಾಕಾಶ ಉದ್ಯಮದ ಸಾಮರ್ಥ್ಯವನ್ನು ಹೆಚ್ಚಿಸಲು ಸಹಾಯ ಮಾಡುವ ಇನ್ನೂ ಅನೇಕ ಆಧುನಿಕ ಸೌಲಭ್ಯಗಳು ಮತ್ತು ಮೂಲಸೌಕರ್ಯಗಳನ್ನು ಇಲ್ಲಿ ನಿರ್ಮಿಸಲಾಗುವುದು.

"ಬಾಹ್ಯಾಕಾಶ ಕ್ಷೇತ್ರದಲ್ಲಿ ಸುಧಾರಣೆಗಳು ನಿರಂತರವಾಗಿ ಮುಂದುವರಿಯುತ್ತವೆ ಎಂದು ನಾನು ಖಾಸಗಿ ವಲಯಕ್ಕೆ ಭರವಸೆ ನೀಡುತ್ತೇನೆ. ಉನ್ನತ ಚಿಂತನೆಗಳು ಮಾತ್ರ ಮಹತ್ತರವಾದುದನ್ನು ಸೃಷ್ಟಿಸುತ್ತವೆ. 'ಇನ್-ಸ್ಪೇಸ್' ಬಾಹ್ಯಾಕಾಶ ಉದ್ಯಮವನ್ನು ಕ್ರಾಂತಿಕಾರಿಗೊಳಿಸುವ ಸಾಮರ್ಥ್ಯವನ್ನು ಹೊಂದಿದೆ. ಭಾರತದ ಬಾಹ್ಯಾಕಾಶ ಕಾರ್ಯಕ್ರಮವು ಒಂದು ರೀತಿಯಲ್ಲಿ 'ಆತ್ಮನಿರ್ಭರ ಭಾರತ' ದ ದೊಡ್ಡ ಲಕ್ಷಣವಾಗಿದೆ. ಈ ಕಾರ್ಯಕ್ರಮವು ಭಾರತದ ಖಾಸಗಿ ವಲಯದಿಂದ ಉತ್ತೇಜನವನ್ನು ಪಡೆದಾಗ, ಅದರ ಶಕ್ತಿ ಎಷ್ಟು ಹೆಚ್ಚಾಗುತ್ತದೆ ಎಂಬುದನ್ನು ನೀವು ಊಹಿಸಬಹುದು.

- ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಖಾಸಗಿ ವಲಯದ ಉತ್ಸಾಹವು ಒಗ್ಗೂಡಿದಾಗ, ಅದರ ಮಿತಿಯಿಲ್ಲದ ಅವಕಾಶಗಳು ತೆರೆದುಕೊಳ್ಳುತ್ತವೆ. ಸರ್ಕಾರವು ಯುವಕರ ಎಲ್ಲ ಅಡೆತಡೆಗಳನ್ನು ನಿವಾರಿಸುತ್ತಿದೆ. ಸರ್ಕಾರ ಹಲವಾರು ಸುಧಾರಣೆಗಳನ್ನು ಕೈಗೊಳ್ಳುತ್ತಿದೆ. ಭಾರತದ ಖಾಸಗಿ ವಲಯದಲ್ಲಿ ಗರಿಷ್ಠ ಸುಲಭ ವ್ಯವಹಾರ ವ್ಯವಸ್ಥೆ ಕಲ್ಪಿಸುವುದು ಸರ್ಕಾರದ ಪ್ರಯತ್ನವಾಗಿದೆ, ಇದರಿಂದಾಗಿ ದೇಶದ ಜನರಿಗೆ ಸುಲಭವಾಗಿ ಜೀವನ ಸಾಗಿಸಲು ಖಾಸಗಿ ವಲಯ ನೆರವಾಗುತ್ತದೆ. ಸರ್ಕಾರವು ಬಾಹ್ಯಾಕಾಶ ಕ್ಷೇತ್ರದ ಸಾಮರ್ಥ್ಯವನ್ನು ಅರ್ಥಮಾಡಿಕೊಂಡಿದೆ, ಆದ್ದರಿಂದ ಸರ್ಕಾರವು ಈಗ ತಂತ್ರಜ್ಞಾನ ಮತ್ತು ಪರಿಣತಿಯನ್ನು ಹಂಚಿಕೊಳ್ಳುತ್ತಿದೆ."

ಹೆಲ್ತ್‌ಕೇರ್ ಕಾಂಪ್ಲೆಕ್ಸ್ ಮತ್ತು ಆಸ್ಪತ್ರೆ ಉದ್ಘಾಟನೆ

ಆಯುಷ್ಮಾನ್ ಭಾರತ್‌ನಿಂದಾಗಿ ಗುಜರಾತ್‌ನಲ್ಲಿ 7 ಸಾವಿರ ಕೋಟಿ ರೂ.ಉಳಿತಾಯ

ಬಡವರ ಸಬಲೀಕರಣಕ್ಕೆ ಆಧುನೀಕರಣ ಮತ್ತು ಆರೋಗ್ಯ ಸೌಲಭ್ಯಗಳನ್ನು ಕಲ್ಪಿಸುವುದು ಮುಖ್ಯವಾಗಿದೆ. ಇದನ್ನೇ ಗಮನದಲ್ಲಿಟ್ಟುಕೊಂಡು, ದೇಶದ ಆರೋಗ್ಯ ಕ್ಷೇತ್ರದಲ್ಲಿ ಸೌಲಭ್ಯಗಳನ್ನು ಸುಧಾರಿಸಲು ಕಳೆದ 8 ವರ್ಷಗಳಲ್ಲಿ ಸರ್ಕಾರವು ಸಮಗ್ರ ವಿಧಾನದತ್ತ ಗಮನಹರಿಸಿದೆ. ಬಡವರು ಮತ್ತು ಮಧ್ಯಮ ವರ್ಗದವರನ್ನು ರೋಗದಿಂದ ಪಾರು ಮಾಡುವುದು ಸರ್ಕಾರದ ಗುರಿಯಾಗಿದ್ದು, ಅನಾರೋಗ್ಯದ ಸಂದರ್ಭದಲ್ಲಿ ವೆಚ್ಚವನ್ನು ಕಡಿಮೆ ಮಾಡುವುದು ನಮ್ಮ ಉದ್ದೇಶವಾಗಿದೆ. ನವಸಾರಿಯಲ್ಲಿ ಎ ಎಂ ನಾಯಕ್ ಹೆಲ್ತ್‌ಕೇರ್ ಕಾಂಪ್ಲೆಕ್ಸ್ ಮತ್ತು ನಿರಾಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಉದ್ಘಾಟಿಸಿದ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ಈ ಮಾತುಗಳನ್ನು ಹೇಳಿದರು. ಆಯುಷ್ಮಾನ್ ಭಾರತ್ ಅಡಿಯಲ್ಲಿ, ಗುಜರಾತ್‌ನಲ್ಲಿ 41 ಲಕ್ಷ ರೋಗಿಗಳು ಉಚಿತ ಚಿಕಿತ್ಸೆಯನ್ನು ಪಡೆದುಕೊಂಡಿದ್ದಾರೆ, ಇದರಿಂದ ರೋಗಿಗಳಿಗೆ 7 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಉಳಿತಾಯವಾಗಿದೆ. 'ಗುಜರಾತ್ ಜನರ ಜೀವನದ ಗುರಿ ಆರೋಗ್ಯ ಮತ್ತು ಸೇವೆಯಾಗಿದೆ. ಸೇವೆಯನ್ನು ದೇಶದ ಶಕ್ತಿಯನ್ನಾಗಿ ಮಾಡಿದ ಬಾಪು ಅವರಂತಹ ಮಹಾನ್ ಪುರುಷರ ಸ್ಫೂರ್ತಿ ನಮ್ಮಲ್ಲಿದೆ. ಗುಜರಾತಿನ ಈ ಉತ್ಸಾಹ ಇನ್ನೂ ಬತ್ತಿಲ್ಲ ಎಂದು ಪ್ರಧಾನಿ ಹೇಳಿದರು.

ಎರಡು ದಶಕಗಳ ಅಭಿವೃದ್ಧಿಯ ವೈಭವದ ಪರಂಪರೆ

33 ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ ಮತ್ತು ಭೂಮಿಪೂಜೆ

ಗುಜರಾತ್‌ನ ನವಸಾರಿಯ ಬುಡಕಟ್ಟು ಪ್ರದೇಶವಾದ ಖುದ್ವೇಲ್ನಲ್ಲಿ ಜೂನ್ 10 ರಂದು ನಡೆದ 'ಗುಜರಾತ್ ಗೌರವ ಅಭಿಯಾನ'ದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದರು, ಇದರಲ್ಲಿ 3050 ಕೋಟಿ ರೂ.ವೆಚ್ಚದ 7 ಯೋಜನೆಗಳ ಉದ್ಘಾಟನೆ, 12 ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು 14 ಯೋಜನೆಗಳಿಗೆ ಭೂಮಿ ಪೂಜೆ ನೆರವೇರಿಸಿದರು. ಈ ಯೋಜನೆಗಳು ಈ ಪ್ರದೇಶದಲ್ಲಿ ನೀರಿನ ಪೂರೈಕೆಯನ್ನು ಸುಧಾರಿಸಲು ಮತ್ತು ಸಂಪರ್ಕವನ್ನು ಉತ್ತೇಜಿಸಲು ಮತ್ತು ಜೀವನ ಸೌಕರ್ಯವನ್ನು ಸುಧಾರಿಸಲು ಸಹಾಯ ಮಾಡುತ್ತವೆ. ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, "ಕಳೆದ ಎರಡು ದಶಕಗಳಲ್ಲಿ ಕ್ಷಿಪ್ರ ಅಂತರ್ಗತ ಬೆಳವಣಿಗೆ ಮತ್ತು ಈ ಬೆಳವಣಿಗೆಯಿಂದ ಹುಟ್ಟಿದ ಹೊಸ ಆಕಾಂಕ್ಷೆಯು ಗುಜರಾತ್‌ನ ಹೆಮ್ಮೆಯಾಗಿದೆ. ಇಂದಿನ ಯೋಜನೆಗಳು ದಕ್ಷಿಣ ಗುಜರಾತ್‌ನ ಸೂರತ್, ನವಸಾರಿ, ವಲ್ಸಾಡ್ ಮತ್ತು ತಾಪಿ ಜಿಲ್ಲೆಗಳಲ್ಲಿ ಜೀವನವನ್ನು ಸುಲಭಗೊಳಿಸುತ್ತವೆ ಎಂದರು.

ಅಹಮದಾಬಾದ್‌ನಲ್ಲಿ ಇನ್-ಸ್ಪೇಸ್ ಆರಂಭದೊಂದಿಗೆ, ಈ ಉದ್ಘಾಟನಾ ಕಾರ್ಯಕ್ರಮದಲ್ಲಿ ಇಸ್ರೋ ಖಾಸಗಿ ವಲಯ ಮತ್ತು ಹಲವಾರು ಇತರ ಏಜೆನ್ಸಿಗಳೊಂದಿಗೆ 10 ಒಪ್ಪಂದಗಳನ್ನು ಮಾಡಿಕೊಂಡಿತು. ಜಾಗತಿಕ ಬಾಹ್ಯಾಕಾಶ ಉದ್ಯಮವು 400 ಶತಕೋಟಿ ಡಾಲರ್ ಮೌಲ್ಯದ್ದಾಗಿದೆ ಮತ್ತು 2040 ರ ವೇಳೆಗೆ ಒಂದು ಟ್ರಿಲಿಯನ್ ಡಾಲರ್ ಉದ್ಯಮವಾಗುವ ಸಾಮರ್ಥ್ಯವನ್ನು ಹೊಂದಿದೆ. ಈ ಜಾಗತಿಕ ಸಹಭಾಗಿತ್ವಕ್ಕೆ ಭಾರತವು ತನ್ನ ಕೊಡುಗೆಯನ್ನು ಹೆಚ್ಚಿಸಲು ಬಯಸುತ್ತದೆ. ಇನ್-ಸ್ಪೇಸ್ ಈ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಿದೆ.

ಅಕ್ಟೋಬರ್ 2021 ರಲ್ಲಿ ಭಾರತೀಯ ಬಾಹ್ಯಾಕಾಶ ಸಂಘಟನೆಯ ಉದ್ಘಾಟನಾ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಬಾಹ್ಯಾಕಾಶ ಕ್ಷೇತ್ರದಲ್ಲಿ ಖಾಸಗಿ ವಲಯವನ್ನು ಉತ್ತೇಜಿಸಲು ಮತ್ತು ಬಾಹ್ಯಾಕಾಶ ಸಂಬಂಧಿತ ಎಲ್ಲಾ ಕಾರ್ಯಕ್ರಮಗಳಿಗೆ ಇನ್-ಸ್ಪೇಸ್ ಏಕ ಗವಾಕ್ಷಿ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ಹೇಳಿದರು. ಇದು ಭಾರತೀಯ ಬಾಹ್ಯಾಕಾಶ ಮೂಲಸೌಕರ್ಯವನ್ನು ಬಳಸಿಕೊಳ್ಳಲು ಖಾಸಗಿ ಕಂಪನಿಗಳಿಗೆ ಸಮಾನ ಅವಕಾಶವನ್ನು ನೀಡುತ್ತದೆ. ಇದರಿಂದಾಗಿ ಖಾಸಗಿ ವಲಯವು ಈಗ ಇಸ್ರೋ ಮೂಲಸೌಕರ್ಯವನ್ನು ಬಳಸಲು ಸಾಧ್ಯವಾಗುತ್ತದೆ. ■



ನವ ಭಾರತ: ಕೌಶಲ್ಯ ಅಭಿವೃದ್ಧಿಯ ಕೇಂದ್ರವಾಗಿ ಹೊರಹೊಮ್ಮುತ್ತಿದೆ

ರಾಷ್ಟ್ರ ಮತ್ತು ಸಮಾಜಕ್ಕೆ ಸಂಬಂಧಿಸಿದ ಪ್ರತಿಯೊಂದು ಕ್ಷೇತ್ರದಲ್ಲೂ ಅದು ಶಿಕ್ಷಣ ಅಥವಾ ಆರೋಗ್ಯ, ಕಾರ್ಮಿಕ ಅಥವಾ ಉದ್ಯಮ, ಹಳ್ಳಿ ಅಥವಾ ನಗರ, ಸರ್ಕಾರ ಅಥವಾ ಕಾರ್ಪೊರೇಟ್ ಸಂಸ್ಥೆ ಆಗಿರಲಿ ತಂತ್ರಜ್ಞಾನ ಮತ್ತು ಹೊಸ ಕೌಶಲ್ಯಗಳ ಅಭಿವೃದ್ಧಿ ಅತ್ಯಗತ್ಯವಾಗಿದೆ. ಈ ಅಂಶಗಳ ಮಹತ್ವವು ಕೋವಿಡ್ ನಂತರದ ಜಗತ್ತಿನಲ್ಲಿ ಇನ್ನಷ್ಟು ಹೆಚ್ಚಾಗಿದೆ. ಪರಿಣಾಮವಾಗಿ, ಭಾರತವು ಕೌಶಲ್ಯ ಅಭಿವೃದ್ಧಿಗೆ ಹೊಸ ದಿಕ್ಕನ್ನು ನೀಡಿದೆ, ರಾಷ್ಟ್ರದ ಯುವಜನರು ಕೌಶಲ್ಯಭರಿತರಾಗುವ ಮೂಲಕ ತಮ್ಮ ಜೀವನದ ಅಭಿವೃದ್ಧಿ ಮತ್ತು ಪ್ರಗತಿಯ ಬಾಗಿಲುಗಳನ್ನು ತೆರೆಯುತ್ತಿದ್ದಾರೆ. ಇದಲ್ಲದೆ, ಕೌಶಲ್ಯಗಳು, ಮರು ಕೌಶಲ್ಯ ಮತ್ತು ಉನ್ನತ ಕೌಶಲ್ಯವು ಲಕ್ಷಾಂತರ ಯುವಕರು ಮತ್ತು ಕೌಶಲ್ಯದೊಂದಿಗೆ ಉದ್ಯೋಗವನ್ನು ಹುಡುಕುತ್ತಿರುವ ಹಿಂದುಳಿದ ವರ್ಗಗಳಿಗೆ ಮಂತ್ರವಾಗಿದೆ. "ಕೌಶಲ್ಯ ಭಾರತ ಮಿಷನ್" ಯುವಕರನ್ನು ಅತ್ಯುತ್ತಮ ಮಾನವ ಸಂಪನ್ಮೂಲವಾಗಿ ಪರಿವರ್ತಿಸುತ್ತಿದೆ ಮತ್ತು ಕೌಶಲ್ಯಗಳಿಗೆ ಹೊಸ ಗುರುತನ್ನು ನೀಡುತ್ತಿದೆ, ಸ್ವಾವಲಂಬಿ ಭಾರತ ಎಂಬ ರಾಷ್ಟ್ರದ ಸಂಕಲ್ಪವನ್ನು ಸಾಕಾರಗೊಳಿಸಲು ಅನುವು ಮಾಡಿಕೊಡುತ್ತಿದೆ, ಇದಕ್ಕೆ ಅಡಿಪಾಯವನ್ನು 7 ವರ್ಷಗಳ ಹಿಂದೆ ದೂರದೃಷ್ಟಿಯ ಚಿಂತನೆಯೊಂದಿಗೆ ಹಾಕಲಾಯಿತು.

ತಂದೆಯ ಅಕಾಲಿಕ ಮರಣದಿಂದ ನನ್ನ ಕುಟುಂಬದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತು. ಮನೆಯಲ್ಲಿ ಇಬ್ಬರು ಕಿವುಡ ಮತ್ತು ಮೂಗ ಸಹೋದರಿಯರೂ ಇದ್ದಾರೆ. ನಮಗೆ ಸಂಕಷ್ಟ ಎದುರಾಯಿತು. ನಂತರ ಜಿಲ್ಲಾ ಮಟ್ಟದ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಜನ ಶಿಕ್ಷಣ ಸಂಸ್ಥಾನದ ಬಗ್ಗೆ ತಿಳಿದುಕೊಂಡೆ. ನಾನು ಅಲ್ಲಿ ಫ್ಯಾಶನ್ ಡಿಸೈನ್ ಓದಿದೆ. ಈಗ, ನಾನು ಅದೇ ಕೌಶಲ್ಯ ಅಭಿವೃದ್ಧಿ ಕೇಂದ್ರದಲ್ಲಿ ಕಿವುಡ ಮತ್ತು ಮೂಕರಿಗೆ ಕೌಶಲ್ಯ ತರಬೇತಿ ನೀಡುವ ಕೆಲಸ ಮಾಡುತ್ತೇನೆ. ನನ್ನ ಇಡೀ ಕುಟುಂಬ ಮತ್ತು ನಾನು ಇದೀಗ ತುಂಬಾ ಸಂತೋಷವಾಗಿದ್ದೇವೆ ಏಕೆಂದರೆ ನಾನು ಉತ್ತಮ ಸಂಬಳ ಮತ್ತು ಜನರಿಗೆ ತರಬೇತಿ ನೀಡುವ ಅವಕಾಶವನ್ನು ಪಡೆದಿದ್ದೇನೆ. ಹೀಗೆ ನೆಮ್ಮದಿ ಮತ್ತು ಆತ್ಮವಿಶ್ವಾಸದಲ್ಲಿ ಮಾತನಾಡಿದ್ದು ಜಮ್ಮು ಮತ್ತು ಕಾಶ್ಮೀರದ ಕುಪ್ವಾರದ ಯುವತಿ ನಿಲೋಫರ್. ಕೌಶಲ್ಯ ಅಭಿವೃದ್ಧಿ ಅಭಿಯಾನದಿಂದ ಅವರ ಕುಟುಂಬಕ್ಕೆ ಹೊಸ ದಿಕ್ಕು ಸಿಕ್ಕಿದೆ.

ಅದೇ ರೀತಿ, ಹರಿಯಾಣದ ಪೂಜಾ ರಾಣಿ ಆಸ್ಪತ್ರೆಗಳಲ್ಲಿ ರೋಗಿಗಳನ್ನು ನೋಡಿಕೊಳ್ಳುವ ತರಬೇತಿ ನೀಡುವ ಮೂಲಕ ತನ್ನ ಜೀವನ ನಡೆಸುತ್ತಿದ್ದಾರೆ, ಹಾಗೆಯೇ 12 ನೇ ತರಗತಿಯನ್ನು ಮುಗಿಸಿದ ನಂತರ ತನ್ನ ಭವಿಷ್ಯದ ಬಗ್ಗೆ ಸ್ಪಷ್ಟತೆ ಇರದ ಇಮ್ರಾನ್, ಪ್ರಧಾನ ಮಂತ್ರಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮದಲ್ಲಿ ತರಬೇತಿ ಪಡೆದ ನಂತರ ಜೀವನದಲ್ಲಿ ಏನನ್ನಾದರೂ ಮಾಡಬಹುದು ಎಂಬ ಭರವಸೆ ಹೊಂದಿದ್ದಾರೆ.

"ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕೆ ಬರುವ ಮೊದಲು ನಾನು ಕಂಪ್ಯೂಟರ್ ಬಳಸಿರಲಿಲ್ಲ ಮತ್ತು ನನ್ನ ಕೌಶಲ್ಯದ ಬಗ್ಗೆ ತಿಳಿದಿರಲಿಲ್ಲ" ಎಂದು ರಾಜಸ್ಥಾನದ ಶ್ರೀ ಗಂಗಾನಗರದ ರವೀಂದ್ರ

ಕೌಶಲ್ಯ, ಮರು ಕೌಶಲ್ಯ ಮತ್ತು ಉನ್ನತ ಕೌಶಲ್ಯದ 'ಮೋದಿ ಮಂತ್ರ'ವನ್ನು ಈ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು

ಪ್ರಸ್ತುತ ದಿನಗಳಲ್ಲಿ ವ್ಯವಹಾರಗಳು ಮತ್ತು ಮಾರುಕಟ್ಟೆಗಳು ಎಷ್ಟು ಬೇಗನೆ ಬದಲಾಗುತ್ತವೆ ಎಂದರೆ ಅವುಗಳೊಂದಿಗೆ ಪ್ರಸ್ತುತವಾಗಿರುವುದು ಕಷ್ಟವಾಗುತ್ತದೆ. ಕೋವಿಡ್ನಿಂದ ಇದರ ಪ್ರಾಮುಖ್ಯತೆ ಇನ್ನೂ ಹೆಚ್ಚಾಗಿದೆ. ಆದರೆ, ಪ್ರಧಾನಿ ಮೋದಿಯವರ ಮಾತುಗಳಲ್ಲಿ ಹೇಳುವುದಾದರೆ, "ಪ್ರಸ್ತುತವಾಗಿ ಉಳಿಯುವ ಮಂತ್ರವೆಂದರೆ ಕೌಶಲ್ಯ, ಮರು ಕೌಶಲ್ಯ ಮತ್ತು ಉನ್ನತ ಕೌಶಲ್ಯ." ಕೌಶಲ್ಯವು ಹೊಸ ಕೌಶಲ್ಯವನ್ನು ಪಡೆದುಕೊಳುವಂತೆ ಮಾಡುತ್ತದೆ. ಇದು ನಿಮ್ಮ ಕೌಶಲ್ಯ, ನೀವು ಒಂದೇ ಮರದ ತುಂಡಿನಿಂದ ಕುರ್ಚಿ ಮಾಡಲು ಕಲಿತಂತೆ. ಆ ಮರದ ತುಂಡಿನ ಬೆಲೆಯನ್ನೂ ನೀವು ಹೆಚ್ಚಿಸಿದಂತೆ. ಆದರೆ, ಈ ಬೆಲೆ ಉಳಿಯಲು, ಈ ಹೊಸ ವಿನ್ಯಾಸ ಮತ್ತು ಹೊಸ ಶೈಲಿಗೆ ಪ್ರತಿದಿನ ಹೊಸದನ್ನು ಸೇರಿಸಬೇಕು. ನೀವು ಹೊಸ ವಿಷಯಗಳನ್ನು ಕಲಿಯುವುದನ್ನು ಮುಂದುವರಿಸಬೇಕು. ಮತ್ತು ಹೊಸದನ್ನು ಕಲಿಯುವುದನ್ನು ಮುಂದುವರಿಸುವುದು ಮರು ಕೌಶಲ್ಯವನ್ನು ಬಯಸುತ್ತದೆ. ಸಣ್ಣ ಪೀಠೋಪಕರಣಗಳನ್ನು ತಯಾರಿಸುವಾಗ ಮತ್ತು ಅಂತಿಮವಾಗಿ ಇಡೀ ಕಛೇರಿಯನ್ನು ವಿನ್ಯಾಸಗೊಳಿಸುವಾಗ ನೀವು ಹೊಸ ವಿಷಯಗಳನ್ನು ಕಲಿಯುವುದನ್ನು ಮುಂದುವರಿಸುವುದರಿಂದ ಉನ್ನತ ಕೌಶಲ್ಯವು ಸಂಭವಿಸುತ್ತದೆ. "ಕೌಶಲ್ಯ, ಮರು ಕೌಶಲ್ಯ ಮತ್ತು ಉನ್ನತ ಕೌಶಲ್ಯದ ಈ ಮಂತ್ರವನ್ನು ತಿಳಿದುಕೊಳ್ಳುವುದು, ಅರ್ಥಮಾಡಿಕೊಳ್ಳುವುದು ಮತ್ತು ಪಾಲಿಸುವುದು ನಮ್ಮೆಲ್ಲರ ಜೀವನದಲ್ಲಿ ನಿರ್ಣಾಯಕವಾಗಿದೆ."

> 21ನೇ ಶತಮಾನದಲ್ಲಿ ಜನಿಸಿದ ಇಂದಿನ ಯುವಕರು ಭಾರತಕ್ಕೆ ಸ್ವಾತಂತ್ರ್ಯದ 100ನೇ ವರ್ಷದವರೆಗೆ ಭಾರತದ ಅಭಿವೃದ್ಧಿ ಪಯಣವನ್ನು ಮುನ್ನಡೆಸಲಿದ್ದಾರೆ. ಆದ್ದರಿಂದ, ಈ ಹೊಸ ಯುವ ಪೀಳಿಗೆಯ ಯುವಕರ ಕೌಶಲ್ಯ ಅಭಿವೃದ್ಧಿ ರಾಷ್ಟ್ರೀಯ ಅಗತ್ಯವಾಗಿದೆ. ಇದು ಸ್ವಾವಲಂಬಿ ಭಾರತದ ಅಡಿಗಲ್ಲು.
>
> **-ನರೇಂದ್ರ ಮೋದಿ,** ಪ್ರಧಾನ ಮಂತ್ರಿ

ಶರ್ಮಾ ಹೇಳುತ್ತಾರೆ. ಆದರೆ ಈಗ ನನ್ನ ಪ್ರತಿಭೆಗೆ ಮನ್ನಣೆ ಸಿಕ್ಕಿದೆ. ಕೋವಿಡ್ ಅವಧಿಯಲ್ಲೂ ಕೌಶಲ ಅಭಿವೃದ್ಧಿಯ ವೇಗ ಕುಂಠಿತವಾಗಲಿಲ್ಲ. ಕೋವಿಡ್ ಅವಧಿಯಲ್ಲಿ ಎಲ್ಲವೂ ಸ್ಥಗಿತಗೊಂಡಾಗ ಕೌಶಲ್ಯ ಅಭಿವೃದ್ಧಿ ಕೇಂದ್ರಗಳಲ್ಲಿ ತರಬೇತಿ ನೀಡುವುದು ಸವಾಲಾಗಿ ಪರಿಣಮಿಸಿತು. ಸರ್ಕಾರದ ಆನ್ಲೈನ್ ತರಬೇತಿ ವ್ಯವಸ್ಥೆಯು ನಮ್ಮ ಜೀವನವನ್ನು ಸುಲಭಗೊಳಿಸಿತು.

ನೋಯ್ಡಾದ ಐಟಿಐ ವಿದ್ಯಾರ್ಥಿನಿ ಕೃತ್ತಿಕಾ ಶರ್ಮಾ, ತನ್ನ ತರಬೇತಿಯು ಸರಾಗವಾಗಿ ನಡೆದ ಬಗ್ಗೆ ಮತ್ತು ಪ್ರತಿ ಸವಾಲನ್ನು ಎದುರಿಸಿದ ಬಗ್ಗೆ ತುಂಬಾ ಸಂತಸಗೊಂಡಿದ್ದಾರೆ. ತರಬೇತಿ ನಿರ್ದೇಶನಾಲಯದ ಸೂಚನೆಗಳ ಮೇರೆಗೆ ಕೋವಿಡ್ ಅವಧಿಯಲ್ಲಿ ಅಭಿವೃದ್ಧಿಪಡಿಸಿದ ಆನ್ಲೈನ್ ಕಲಿಕೆಯ ಮಾಡ್ಯೂಲ್ನಿಂದ ಇದು ಸಾಧ್ಯವಾಯಿತು. ಇದು ಸರಿಸುಮಾರು 17-18 ಲಕ್ಷ ಐಟಿಐ ವಿದ್ಯಾರ್ಥಿಗಳಿಗೆ ಪ್ರಯೋಜನವನ್ನು ನೀಡಿದೆ.

ಕೌಶಲ ತರಬೇತಿಯ ಮೂಲಕ ಉದ್ಯೋಗ ಮತ್ತು ಸ್ವಯಂ ಉದ್ಯೋಗವನ್ನು ಮಾಡುತ್ತಿರುವ ಲಕ್ಷಾಂತರ ಯುವಕರ ಮುಖದಲ್ಲಿ ಈಗ ಇದೇ ರೀತಿಯ ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಅಭಿವ್ಯಕ್ತಿಗಳನ್ನು ಕಾಣಬಹುದು. ಏಕೆಂದರೆ, ಭಾರತದ ಕೈಗಾರಿಕಾ ಪ್ರಗತಿ ಮತ್ತು ನಿರಂತರವಾಗಿ ಬದಲಾಗುತ್ತಿರುವ ಪರಿಸರವು ವಿವಿಧ ಕ್ಷೇತ್ರಗಳಲ್ಲಿ ಕೌಶಲ್ಯ ಅಭಿವೃದ್ಧಿಯ ವೇಗ ಮತ್ತು ಗುಣಮಟ್ಟವನ್ನು ಹೆಚ್ಚಿಸಿದೆ. ಏಳು ವರ್ಷಗಳ ಹಿಂದೆ, ದೇಶವನ್ನು ಕೌಶಲ್ಯ ರಾಜಧಾನಿ ಮಾಡುವ ಗುರಿಯೊಂದಿಗೆ ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡುವ ಅಡಿಪಾಯವನ್ನು ಹಾಕಲಾಯಿತು. ಭಾರತವನ್ನು ಕೌಶಲ ಕೇಂದ್ರವನ್ನಾಗಿ ಮಾಡುವ ಪ್ರಧಾನಿ ನರೇಂದ್ರ ಮೋದಿಯವರ ದೃಷ್ಟಿಕೋನವನ್ನು ಸಾಧಿಸಲು ಕೌಶಲ್ಯಗಳಿಗೆ ಹೊಸ ಗುರುತನ್ನು ನೀಡಲು ಹಲವು ವಿಶಿಷ್ಟ ಪ್ರಯತ್ನಗಳನ್ನು ಮಾಡಲಾಗಿದೆ.

ಇಂದು ದೇಶದಲ್ಲಿ, ಸರಿಸುಮಾರು 2.5 ಸಾವಿರ ಕೌಶಲ್ಯ ಭಾರತ ಕೇಂದ್ರಗಳು ಮತ್ತು ಸುಮಾರು 15 ಸಾವಿರ ತರಬೇತಿ ಕೇಂದ್ರಗಳಿವೆ, ಅಲ್ಲಿ 37 ವಲಯಗಳ 300 ಕ್ಕೂ ಹೆಚ್ಚು ಕೋರ್ಸ್‌ಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಪ್ರತಿ ವರ್ಷ ಒಂದು ಕೋಟಿಗೂ ಹೆಚ್ಚು ಯುವಕರು ಸ್ಕಿಲ್ ಇಂಡಿಯಾ ಮಿಷನ್ಗೆ ಸೇರುತ್ತಾರೆ, ಅವರ ಜೀವನ ಮತ್ತು ರಾಷ್ಟ್ರಕ್ಕೆ ಹೊಸ ಗುರುತನ್ನು ನೀಡುವುದು ಮಿಷನ್‌ನ ಯಶಸ್ಸನ್ನು ತೋರಿಸುತ್ತಿದೆ. ಭಾರತದಲ್ಲಿ, ಕೌಶಲ್ಯ ಅಭಿವೃದ್ಧಿ ಹೊಸ ವಿಷಯವಲ್ಲ, ಆದರೆ ಉದ್ದೇಶದಲ್ಲಿ ವ್ಯತ್ಯಾಸವಿತ್ತು. ಹಿಂದೆ, ಕೌಶಲ ಅಭಿವೃದ್ಧಿಯ ಸಂಗತಿಯು ಯಾವುದೇ ಸಾಮಾನ್ಯ ಸಂಪರ್ಕ ಬಿಂದುವಿಲ್ಲದೆ ಅನೇಕ ಇಲಾಖೆಗಳಲ್ಲಿ ಹರಡಿಕೊಂಡಿತ್ತು. ಆದರೆ, ಕೌಶಲಾಭಿವೃದ್ಧಿಯ ಮಹತ್ವವನ್ನು ಗುರುತಿಸಿದ ಪ್ರಧಾನಿ ಮೋದಿಯವರು,



ಸ್ಕಿಲ್ ಇಂಡಿಯಾ ಮಿಷನ್ ಅನ್ನು ರಾಷ್ಟ್ರೀಯ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಮಾಡಲು, 20 ಸಚಿವಾಲಯಗಳು/ಇಲಾಖೆಗಳಲ್ಲಿ 40 ಕ್ಕೂ ಹೆಚ್ಚು ಕೌಶಲ್ಯ ಅಭಿವೃದ್ಧಿ ಯೋಜನೆಗಳು/ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ.

ಎಲ್ಲವನ್ನೂ ಒಗ್ಗೂಡಿಸಿ ಪ್ರತ್ಯೇಕ ಕೌಶಲ್ಯಾಭಿವೃದ್ಧಿ ಸಚಿವಾಲಯ ಸ್ಥಾಪಿಸಿದರು. ಅಂದರೆ ಕೌಶಲ್ಯಾಭಿವೃದ್ಧಿಗೆ ಒತ್ತು ನೀಡುವ ಮೂಲಕ ದೇಶದ ಯುವಕರು ಎಂದಿಗೂ ಯಾರ ಮೇಲೂ ಅವಲಂಬಿತರಾಗದ ರೀತಿಯಲ್ಲಿ ತಯಾರಾಗಬೇಕು ಎಂಬುದು ಅವರ ಚಿಂತನೆಯಾಗಿತ್ತು.

ಯುವಕರನ್ನು ಉದ್ಯೋಗಾಕಾಂಕ್ಷಿಗಳನ್ನಾಗಿ ಮಾಡುವ ಬದಲು, ಅವರೇ ಉದ್ಯೋಗ ಒದಗಿಸಲು ಸಾಧ್ಯವಾಗುವ ಕೌಶಲ್ಯದಿಂದ ಸಜ್ಜುಗೊಳಿಸುವುದು ಇದರ ಉದ್ದೇಶವಾಗಿತ್ತು. "ನಾವೀನ್ಯತೆ ಮತ್ತು ಕಲ್ಪನೆಯು ಸಾಧ್ಯತೆಗಳ ಕೀಲಿಗಳು" ಎಂದು ಶ್ರೇಷ್ಠ ಭೌತಶಾಸ್ತ್ರಜ್ಞ ರಾಬರ್ಟ್ ನೋಯ್ಸ್ ಹೇಳಿದ್ದಾರೆ. "ಸಮಾಜದ ಜೀವನವು ನಿರಂತರವಾಗಿ ಹೊಸತಾಗಿದ್ದಾಗ ಮಾತ್ರ ಪ್ರಗತಿ ಹೊಂದಲು ಸಾಧ್ಯ" ಎಂದು ಪ್ರಧಾನಿ ಮೋದಿ ನಂಬುತ್ತಾರೆ. ಜೀವನವು ನಿರಂತರವಾಗಿ ಕಲಿಯುವುದೇ ಆಗಿದೆ. ಆಗ ಮಾತ್ರ ನಾವು ಯಶಸ್ವಿಯಾಗುತ್ತೇವೆ, ಅದಕ್ಕಾಗಿಯೇ ನಮ್ಮ ದೇಶದ ಯುವ ಪೀಳಿಗೆಗೆ ಆ ಧೈರ್ಯ ಮತ್ತು ಮನೋಭಾವದ ಅಗತ್ಯವಿದೆ. ವಿಫಲಗೊಳ್ಳುವ ಭಯದಿಂದ ಅನೇಕ ಜನರು ಹಿಂಜರಿಯುತ್ತಾರೆ. ದಡದಲ್ಲಿ ನಿಂತವರು ಮುಳುಗದೇ ಉಳಿದರೆ, ನೀರಿಗೆ ಹಾರಿದವರು ಮುಳುಗಿ ಈಜು ಕಲಿಯುತ್ತಾರೆ. ಯುವಕರಿಗೆ ಕೌಶಲ್ಯ ಮತ್ತು ಹೊಸ ಅವಕಾಶಗಳನ್ನು ಒದಗಿಸಲು ಸರ್ಕಾರವು ಸ್ಟಾರ್ಟಪ್ ಇಂಡಿಯಾ, ಸ್ಟ್ಯಾಂಡ್ ಅಪ್ ಇಂಡಿಯಾ ಮತ್ತು ಮುದ್ರಾ ಯೋಜನೆ ಮೂಲಕ ಸಾಲವನ್ನು ಸಹ ನೀಡುತ್ತಿದೆ. ಜ್ಞಾನ ಮತ್ತು ಕೌಶಲ್ಯಗಳನ್ನು ವಿಭಿನ್ನವಾಗಿ ನೋಡುವುದು ಮತ್ತು ಸ್ವಾಮಿ ವಿವೇಕಾನಂದರ ಮಾರ್ಗವನ್ನು ಅನುಸರಿಸುವುದು ಇದರ ಗುರಿಯಾಗಿದೆ.

ಇಂದು, ಕೌಶಲ್ಯಗಳ ಮೌಲ್ಯವನ್ನು ಒತ್ತಿಹೇಳುವುದು ನಿರ್ಣಾಯಕವಾಗಿದೆ. ರಾತ್ರೋರಾತ್ರಿ ಯಾವ ಕೆಲಸವೂ ಆಗುವುದಿಲ್ಲ; ಸಂಘಟಿತ ಪ್ರಯತ್ನ ಮಾತ್ರ ಯಶಸ್ಸಿಗೆ ಕಾರಣವಾಗುತ್ತದೆ. ಅಟಲ್ ಇನ್ನೋವೇಶನ್ ಮಿಷನ್‌ನ ಟಿಂಕರಿಂಗ್ ಲ್ಯಾಬ್ನಿಂದ ಹೊಸ ಅಪ್ಲಿಕೇಶನ್ಗಳನ್ನು ರಚಿಸುವ ಮೂಲಕ ಮಕ್ಕಳು ಈ ದಿಕ್ಕಿನಲ್ಲಿ ಹೊಸತನವನ್ನು ಕಂಡುಕೊಳ್ಳುತ್ತಿದ್ದಾರೆ. ಅಟಲ್ ಇನ್ನೋವೇಶನ್ ಮಿಷನ್ ಮಕ್ಕಳನ್ನು ನಾವೀನ್ಯತೆಗೆ ಪ್ರೋತ್ಸಾಹಿಸುವ ಒಂದು ಆಂದೋಲನವಾಗಿ ವಿಕಸನಗೊಂಡಿದೆ. ಭಾರತದಲ್ಲಿ ಪ್ರಸ್ತುತ ಜ್ಞಾನ-ಕೌಶಲ್ಯಗಳ ನಡುವಿನ ಅಂತರವನ್ನು ಗುರುತಿಸಿ, ಕೌಶಲ್ಯ ಅಭಿವೃದ್ಧಿ ಮಿಷನ್ ಅನ್ನು ಜುಲೈ 15, 2015 ರಂದು ಪ್ರಾರಂಭಿಸಲಾಯಿತು. ಯುವಕರು ಜ್ಞಾನದ ಜೊತೆಗೆ ಕೌಶಲ್ಯಗಳನ್ನು ಪಡೆಯುವುದು ಇದರ ಗುರಿಯಾಗಿದೆ. ಇದಕ್ಕೆ ಅನುಕೂಲವಾಗುವಂತೆ ದೇಶದಾದ್ಯಂತ ಸಾವಿರಾರು ಪ್ರಧಾನಮಂತ್ರಿ ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಐಟಿಐಗಳ ಸಂಖ್ಯೆ ಹೆಚ್ಚಿದೆ. ಇದು ಈಗ ಹತ್ತು ಸಾವಿರ ಹೊಸ

ಪ್ರಧಾನ ಮಂತ್ರಿ ಮೋದಿ ತಮ್ಮ ಯೌವನದಲ್ಲಿಯೇ ಕೌಶಲ್ಯದ ಮಹತ್ವವನ್ನು ತಿಳಿದುಕೊಂಡಿದ್ದ

20 ವರ್ಷಗಳ ಕೌಶಲ್ಯದ ಮೌಲ್ಯ 20 ರೂ.!

ಯುವಕರ ಕನಸುಗಳು ನನಸಾಗುತ್ತಿವೆ, 2014 ರಲ್ಲಿ ಪ್ರಧಾನಿಯಾಗಿ ಆಯ್ಕೆಯಾದಾಗಿನಿಂದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯವನ್ನು ಸ್ಥಾಪಿಸುವವರೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ಚಿಂತನೆಗೆ ಧನ್ಯವಾದಗಳು. ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆಯ ಐದು ವರ್ಷಗಳನ್ನು ಪೂರ್ಣಗೊಳಿಸಿದ ಸಂಭ್ರಮಾಚರಣೆಯ ವರ್ಚುವಲ್ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿಯವರ ಹಂಚಿಕೊಂಡ ಅವರ ಅನುಭವವು ಕೌಶಲ್ಯ ಅಭಿವೃದ್ಧಿ ಎಲ್ಲರಿಗೂ ಎಷ್ಟು ಮುಖ್ಯ ಎಂಬ ಉದಾಹರಣೆಯನ್ನು ಕಾಣಬಹುದು. ಅವರ ಮಾತಿನಲ್ಲಿಯೇ ಹೇಳುವುದಾದರೆ, "ಕೌಶಲ್ಯದ ಶಕ್ತಿ ಏನು? ಪ್ರತಿಯೊಬ್ಬರೂ ಅದಕ್ಕೆ ಸಂಬಂಧಿಸಿದ ಕೆಲವು ರೀತಿಯ ಅನುಭವವನ್ನು ಹೊಂದಿರುತ್ತಾರೆ." ನನಗೂ ಒಂದು ಹಳೆಯ ಘಟನೆ ನೆನಪಾಯಿತು. ನಾನು ಚಿಕ್ಕವನಿದ್ದಾಗ ಕೆಲವು ಬುಡಕಟ್ಟು ಸಂಘಟನೆಗಳಲ್ಲಿ ಸ್ವಯಂಸೇವಕನಾಗಿ ಕೆಲಸ ಮಾಡುತ್ತಿದ್ದೆ. ಒಮ್ಮೆ ನಾವು ಸಂಸ್ಥೆಯೊಂದರ ಜನರೊಂದಿಗೆ ಜೀಪಿನಲ್ಲಿ ಎಲ್ಲೋ ಪ್ರಯಾಣಿಸಬೇಕಾಗಿತ್ತು. ಆದರೆ, ಬೆಳಗ್ಗೆ ಹೊರಡುವ ಸಮಯ ಬಂದಾಗ ಜೀಪು ಸ್ಟಾರ್ಟ್ ಆಗಲಿಲ್ಲ. ಎಲ್ಲರೂ ಎಲ್ಲ ರೀತಿಯಲ್ಲೂ ಪ್ರಯತ್ನಿಸಿದರು, ತಳ್ಳಿದರು, ನೂಕಿದರು ಆದರೆ ಕಾರು ಮಾತ್ರ ಚಲಿಸಲಿಲ್ಲ. ರಾತ್ರಿ 8 ಅಥವಾ 9 ಗಂಟೆಯ ಸುಮಾರಿಗೆ ಮೆಕ್ಯಾನಿಕ್ ಒಬ್ಬರನ್ನು ಕರೆಸಲಾಯಿತು. ಆತ ಅಲ್ಲಿ ಇಲ್ಲಿ ಸಣ್ಣಪುಟ್ಟ ದುರಸ್ತಿ ಮಾಡಿ 2 ನಿಮಿಷದಲ್ಲಿ ಸರಿಪಡಿಸಿದರು. ಆಗ ನಾನು ಅವರಿಗೆ ಎಷ್ಟು ಹಣ ಕೊಡಬೇಕು ಎಂದು ಕೇಳಿದೆ. ಇಪ್ಪತ್ತು ರೂಪಾಯಿ ಎಂದರು. ಆಗ ಇಪ್ಪತ್ತು ರೂಪಾಯಿ ಹಚ್ಚೇ ಆಗಿತ್ತು "ಅಲ್ಲಯ್ಯಾ, 2 ನಿಮಿಷಗಳ ಕೆಲಸ ಮಾಡಿದ್ದೀಯಾ, ನೀವು 20 ರೂಪಾಯಿ ಕೇಳುತ್ತಿದ್ದೀಯಲ್ಲಾ" ಎಂದು ನಮ್ಮ ಸ್ನೇಹಿತರೊಬ್ಬರು ಹೇಳಿದರು. ಅದಕ್ಕೆ ಮೆಕ್ಯಾನಿಕ್ ನೀಡಿದ ಪ್ರತಿಕ್ರಿಯೆಯು ನನಗೆ ಈಗಲೂ ಸ್ಫೂರ್ತಿಯಾಗಿದೆ ಮತ್ತು ನನ್ನ ಮನಸ್ಸಿನ ಮೇಲೆ ಪ್ರಭಾವ ಬೀರಿದೆ. "ಸರ್, ನಾನು 2 ನಿಮಿಷಕ್ಕೆ 20 ರೂಪಾಯಿ ತೆಗೆದುಕೊಳ್ಳುತ್ತಿಲ್ಲ. ಈ 20 ರೂಪಾಯಿಗಳು 20 ವರ್ಷ ದುಡಿತದಿಂದ ನನಗೆ ಬಂದ ಕೌಶಲ್ಯ ಮತ್ತು ನಾನು ಗಳಿಸಿದ ಅನುಭವಕ್ಕೆ; ಎಂದು ಆ ಅವಿದ್ಯಾವಂತ ಮೆಕ್ಯಾನಿಕ್ ಹೇಳಿದರು. ಇದು ಕೌಶಲ್ಯದ ಶಕ್ತಿ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ನಿಮ್ಮ ಪ್ರತಿಭೆ ಮತ್ತು ಪ್ರಭಾವವು ನಿಮ್ಮ ಕೆಲಸವನ್ನು ಪ್ರೋತ್ಸಾಹಿಸುವುದು ಮಾತ್ರವಲ್ಲ, ಪ್ರೇರೇಪಿಸುತ್ತದೆ.

ಸೀಟುಗಳನ್ನು ಹೊಂದಿದೆ. ಇದರ ಫಲವಾಗಿ, ಸರಿಸುಮಾರು 6 ಕೋಟಿ ಜನರು ತಮ್ಮ ಕೌಶಲ್ಯವನ್ನು ಅಭಿವೃದ್ಧಿಪಡಿಸಿಕೊಂಡಿದ್ದಾರೆ ಮತ್ತು ಅಭಿಯಾನವು ಇನ್ನೂ ಹೊಸ ಪ್ರಯೋಗಗಳೊಂದಿಗೆ ನಡೆಯುತ್ತಿದೆ.

ಕೌಶಲ್ಯ ಅಭಿವೃದ್ಧಿಯು ದೇಶದ ಅಗತ್ಯವಾಗಿದೆ

ಈ ಜಾಗತಿಕ ಸಾಂಕ್ರಾಮಿಕವು ಒಡ್ಡಿದ ಸವಾಲುಗಳು ಕೌಶಲ್ಯಗಳ ಮೌಲ್ಯವನ್ನು ಹೆಚ್ಚಿಸಿವೆ. ಇದೀಗ ಭಾರತವು ತನ್ನ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಅಮೃತ ಯಾತ್ರೆಯೊಂದಿಗೆ ಆಚರಿಸುತ್ತಿದ್ದು, ದೇಶಕ್ಕೆ 100 ವರ್ಷ ತುಂಬಿದ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ನಾವು ಸುವರ್ಣ ಭಾರತವನ್ನು ಹೊಂದಲು ಸಂಕಲ್ಪ ಮಾಡಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ, ಸ್ವಾವಲಂಬಿ ಭಾರತಕ್ಕೆ ಅಡಿಪಾಯ ಹಾಕಲು ಮುಂದಿನ ಪೀಳಿಗೆಯ ಯುವಕರ ಕೌಶಲ್ಯ ಅಭಿವೃದ್ಧಿ ರಾಷ್ಟ್ರೀಯ ಅಗತ್ಯವಾಗಿದೆ. ದೇಶದಲ್ಲಿ ಸ್ಥಾಪಿತವಾಗಿರುವ ಹೊಸ ಶೈಕ್ಷಣಿಕ, ಆರೋಗ್ಯ ಮತ್ತು ಉದ್ಯಮ ಸಂಬಂಧಿತ ಸಂಸ್ಥೆಗಳ ಹಿನ್ನೆಲೆಯಲ್ಲಿ ಸ್ಕಿಲ್ ಇಂಡಿಯಾ ಮಿಷನ್ ಅನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಬದ್ಧವಾಗಿದೆ.

ಭಾರತೀಯ ಪರಂಪರೆಯಲ್ಲಿ ಕೌಶಲ್ಯದ ಪಾತ್ರವೂ ಮಹತ್ವದ್ದಾಗಿದೆ. ಏಕೆಂದರೆ ಸಮಾಜ ಮತ್ತು ರಾಷ್ಟ್ರವು ಕೌಶಲ್ಯದ ಮೇಲೆ ಒತ್ತು ನೀಡಿದಾಗ, ರಾಷ್ಟ್ರ-ಸಮಾಜವು ಕೌಶಲ್ಯವನ್ನು ಹೆಚ್ಚಿಸುತ್ತದೆ ಮತ್ತು ಪ್ರಗತಿಯನ್ನು ಸಾಧಿಸುತ್ತದೆ. ಇದರ ಪರಿಣಾಮವಾಗಿ, ವಿಜಯದಶಮಿಯಂದು ಆಯುಧಗಳ ಪೂಜೆ, ಅಕ್ಷಯ ತೃತೀಯದಲ್ಲಿ ಸುಗ್ಗಿ, ಕೃಷಿ ಯಂತ್ರಗಳ ಪೂಜೆ ಮತ್ತು ವಿಶ್ವಕರ್ಮ ದೇವರ ಆರಾಧನೆಯು ಪ್ರತಿಯೊಂದು ಕೌಶಲ್ಯ-ಕೌಶಲದೊಂದಿಗೆ ಸಂಬಂಧಿಸಿದ ಜನರಿಗೆ ಪ್ರಮುಖ ಹಬ್ಬಗಳಾಗಿವೆ. ಆದಾಗ್ಯೂ, ಗುಲಾಮಗಿರಿಯ ಸುದೀರ್ಘ ಅವಧಿಯಲ್ಲಿ, ಸಾಮಾಜಿಕ ಮತ್ತು ಶೈಕ್ಷಣಿಕ ವ್ಯವಸ್ಥೆಯು ಕೌಶಲ್ಯ ಅಭಿವೃದ್ಧಿ ವ್ಯವಸ್ಥೆಯನ್ನು ಕ್ರಮೇಣ ದುರ್ಬಲಗೊಳಿಸಿತು.

ಶಿಕ್ಷಣ-ಜ್ಞಾನವು ನಾವು ಏನು ಮಾಡಬೇಕೆಂಬುದರ ಬಗ್ಗೆ ವಿಶ್ವಾಸ ಮೂಡಿಸಿದರೆ, ಕೌಶಲ್ಯವು ನಿಜ ಜೀವನದಲ್ಲಿ ಆ ಕೆಲಸವನ್ನು ಹೇಗೆ ಮಾಡಬೇಕೆಂದು ನಮಗೆ ಕಲಿಸುತ್ತದೆ. ದೇಶದ "ಸ್ಕಿಲ್ ಇಂಡಿಯಾ ಮಿಷನ್" ಈ ಸತ್ಯವನ್ನು ಸಾಕಾರಗೊಳಿಸುವ ಹಂತ-ಹಂತದ ಅಭಿಯಾನವಾಗಿದೆ. ಇಂದು, ಕೌಶಲ್ಯಗಳಿಗೆ ಜಾಗತಿಕ ಬೇಡಿಕೆಯಿದೆ ಮತ್ತು ಆ ಕೌಶಲ್ಯಗಳನ್ನು ಹೊಂದಿರುವವರು ಮುನ್ನಡೆಯುತ್ತಾರೆ. ಇದು ವ್ಯಕ್ತಿಗಳು ಮತ್ತು ರಾಷ್ಟ್ರಗಳೆರಡಕ್ಕೂ ಅನ್ವಯಿಸುತ್ತದೆ. ಇದು ಭಾರತದ ಕೌಶಲ್ಯ ಕಾರ್ಯತಂತ್ರದ ಅಡಿಪಾಯವಾಗಿದೆ, ಇದು ಕೌಶಲ್ಯ ಕ್ಷೇತ್ರದಲ್ಲಿ

ಜ್ಞಾನ ಮತ್ತು ಕೌಶಲ್ಯದ ನಡುವಿನ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳುವುದು

ದಾದಾ ಧರ್ಮಾಧಿಕಾರಿಯವರು ಒಂದು ಪುಸ್ತಕ ಬರೆದಿದ್ದಾರೆ. ಒಬ್ಬ ಯುವಕ ಪರಸ್ಪರ ಪರಿಚಯದ ಮೂಲಕ ಧರ್ಮಾಧಿಕಾರಿಯವರನ್ನು ಕೆಲಸಕ್ಕಾಗಿ ಸಂಪರ್ಕಿಸಿದನು. ಅವರು ಯಾವುದಾದರೂ ಕೆಲಸದ ಬಗ್ಗೆ ಶಿಫಾರಸು ಮಾಡಿದರೆ ಕೆಲಸವನ್ನು ಹುಡುಕುವುದಾಗಿ ಆತ ಹೇಳಿದ. ದಾದಾ ಧರ್ಮಾಧಿಕಾರಿ ಆತನ ವಿದ್ಯಾರ್ಹತೆಯ ಬಗ್ಗೆ ವಿಚಾರಿಸಿದರು, ನಾನು ಪದವೀಧರರು ಎಂದು ಆತ ಹೇಳಿದ. "ನಿನಗೇನು ಮಾಡುವುದು ಗೊತ್ತು?" ಎಂದು ಅವರು ಮತ್ತೊಮ್ಮೆ ವಿಚಾರಿಸಿದರು. "ನಾನು ಪದವೀಧರ," ಆತ ಮತ್ತೆ ಹೇಳಿದ. ದಾದಾ ಧರ್ಮಾಧಿಕಾರಿ ಏನು ಕೇಳುತ್ತಿದ್ದಾರೆಂದು ಆತನಿಗೆ ತಿಳಿದಿರಲಿಲ್ಲ. ನಾನು ಮತ್ತೆ ನಿನ್ನನ್ನು ಕೇಳುತ್ತಿದ್ದೇನೆ, ಸಹೋದರ ಎಂದರು. ಈತ "ನಾನು ಪದವೀಧರ," ಎಂದು ಮತ್ತೆ ಹೇಳಿದ. "ನಿನಗೆ ಟೈಪ್ ಮಾಡುವುದು ಹೇಗೆಂದು ತಿಳಿದಿದೆಯೇ?" ಧರ್ಮಾಧಿಕಾರಿ ಕೇಳಿದರು. ನಿನಗೆ ಯಾವುದಾರೂ ಅಡುಗೆಯ ಕೌಶಲ್ಯ ಗೊತ್ತಾ? "ನಿನಗೆ ಪೀಠೋಪಕರಣಗಳನ್ನು ತಯಾರಿಸುವ ಅನುಭವವಿದೆಯೇ?" "ನಿನಗೆ ಚಹಾ ಮತ್ತು ತಿಂಡಿಗಳನ್ನು ಮಾಡಲು ಬರುತ್ತದೆಯೇ?" ಈ ಎಲ್ಲಾ ಪ್ರಶ್ನೆಗಳಿಗೆ, ಯುವಕ "ಇಲ್ಲ, ನಾನು ಇತ್ತೀಚೆಗೆ ಪದವಿ ಪಡೆದಿದ್ದೇನೆ." ಎಂದು ಉತ್ತರಿಸಿದನು. ಅಂದರೆ, ಶಿಕ್ಷಣವು ಪ್ರಾಯೋಗಿಕ ಜೀವನದೊಂದಿಗೆ ಸಂಯೋಜಿಸದ ಜ್ಞಾನವನ್ನು ಮಾತ್ರ ನೀಡುತ್ತದೆ. ಪ್ರಧಾನಿ ನರೇಂದ್ರ ಮೋದಿ, ಸ್ವಾಮಿ ವಿವೇಕಾನಂದರನ್ನು ಉಲ್ಲೇಖಿಸಿ, ಜ್ಞಾನ ಮತ್ತು ಕೌಶಲ್ಯದ ನಡುವಿನ ವ್ಯತ್ಯಾಸವನ್ನು ವಿವರಿಸುತ್ತಾರೆ. ಇಂದಿನ ಜಗತ್ತಿನಲ್ಲಿ ಯಾವುದು ಹೆಚ್ಚು ಮೌಲ್ಯಯುತವಾದುದು ಎಂದು ಅವರು ವಿವರಿಸುತ್ತಾರೆ: ಕೈಯಲ್ಲಿರುವ ಪ್ರಮಾಣಪತ್ರ ಅಥವಾ ಕೌಶಲ್ಯ? ಸರ್ಕಾರವು ಅದೇ ಪರಿಕಲ್ಪನೆಯನ್ನು "ಕೌಶಲ್ಯ ಅಭಿವೃದ್ಧಿ" ಎಂದು ಜಾರಿಗೆ ತರಲು ಪ್ರಯತ್ನಿಸಿದೆ.

ದೇಶವನ್ನು ಜಾಗತಿಕ ನಾಯಕನಾಗಿಸುವ ಗುರಿಯನ್ನು ಹೊಂದಿದೆ. ಇದನ್ನು ಗಮನದಲ್ಲಿಟ್ಟುಕೊಂಡು, ಜಾಗತಿಕ ಅಗತ್ಯವನ್ನು ಆಧರಿಸಿ ನುರಿತ ಜನರನ್ನು ಪತ್ತೆ ಮಾಡಲು ಸರ್ಕಾರವು ಹೊಸ ಉಪಕ್ರಮವನ್ನು ಪ್ರಾರಂಭಿಸಿದೆ. ಅಷ್ಟೇ ಅಲ್ಲ, ಭಾರತವು ಕೋವಿಡ್ ಸಾಂಕ್ರಾಮಿಕ ರೋಗದ ವಿರುದ್ಧ ಅಷ್ಟು ಪರಿಣಾಮಕಾರಿಯಾಗಿ ಹೋರಾಡಲು ಸಮರ್ಥವಾಗಿದ್ದರೆ, ಇತ್ತೀಚಿನ ವರ್ಷಗಳಲ್ಲಿ ದೇಶದ ನುರಿತ ಉದ್ಯೋಗಿಗಳ ಲಭ್ಯತೆಯೂ ಕಾರಣವಾಗಿದೆ. 34 ವರ್ಷಗಳ ನಂತರ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರಾಯೋಗಿಕ ಜ್ಞಾನ-ಕೌಶಲ್ಯಗಳನ್ನು ಸಂಪೂರ್ಣವಾಗಿ ಸಂಯೋಜಿಸುವ ಮೂಲಕ ಭಾರತವನ್ನು ಜಾಗತಿಕ ಜ್ಞಾನ-ಕೌಶಲ್ಯ ಕೇಂದ್ರವಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಸರ್ಕಾರವು ನಿರ್ಣಾಯಕ ಹೆಜ್ಜೆ ಇಟ್ಟಿದೆ.

ಸ್ಕಿಲ್ ಇಂಡಿಯಾ ಕಾರ್ಯಕ್ರಮವು ಸಾಂಪ್ರದಾಯಿಕ ವೃತ್ತಿಪರ ಶಿಕ್ಷಣವನ್ನು ಎಂದಿಗೂ ಪಡೆಯದ ಅಥವಾ ವಿವಿಧ ಕಾರಣಗಳಿಗಾಗಿ ಶಾಲೆ ಅಥವಾ ಕಾಲೇಜಿನಿಂದ ಹೊರಗುಳಿದ ಮಹಿಳೆಯರಿಗೆ ವರದಾನವಾಗಿದೆ. ಸ್ಕಿಲ್ ಇಂಡಿಯಾ ಶಾಲೆಯಿಂದ ಹೊರಗುಳಿದ ಲಕ್ಷಾಂತರ ಮಹಿಳೆಯರಿಗೆ ಸಾಂಪ್ರದಾಯಿಕ ಶಿಕ್ಷಣ ಮತ್ತು ಔದ್ಯೋಗಿಕ ಅರ್ಹತೆ

> **ಗಳಿಕೆಯ ಜೊತೆಗೆ ಸದಾ ಕಲಿಯುತ್ತಲೇ ಇರಬೇಕು. ಕೌಶಲ್ಯ ಹೊಂದಿದ ಜನರು ಮಾತ್ರ ಇಂದಿನ ಜಗತ್ತಿನಲ್ಲಿ ಪ್ರಗತಿ ಹೊಂದಲು ಸಾಧ್ಯ. ಇದು ಜನರು ಮತ್ತು ದೇಶಗಳೆರಡಕ್ಕೂ ಅನ್ವಯಿಸುತ್ತದೆ. ಇದು ನಮ್ಮ ಯುವಜನರ ಕೌಶಲ್ಯ ತಂತ್ರದ ಮುಖ್ಯ ಭಾಗವಾಗಿರಬೇಕು, ಇದರಿಂದ ಭಾರತವು ವಿಶ್ವಕ್ಕೆ ಕೌಶಲ್ಯ ಮತ್ತು ಕೌಶಲ್ಯಪೂರ್ಣ ಕಾರ್ಮಿಕ ಬಲವನ್ನು ಒದಗಿಸಬಹುದು. ಭಾಗೀದಾರರು ನಿರಂತರವಾಗಿ "ಕೌಶಲ್ಯ," "ಮರು-ಕೌಶಲ್ಯ," ಮತ್ತು "ಉನ್ನತ ಕೌಶಲ್ಯ" ಗೊಳ್ಳುತ್ತಿರಬೇಕು.**
>
> **ನರೇಂದ್ರ ಮೋದಿ, ಪ್ರಧಾನ ಮಂತ್ರಿ**

7 ದಶಕಗಳು ಹಾಗೂ 8 ವರ್ಷಗಳು

ಐಐಟಿಗಳು, ಐಐಎಂಗಳು ಮತ್ತು ವೈದ್ಯಕೀಯ ಕಾಲೇಜುಗಳ ಸಂಖ್ಯೆಯಲ್ಲಿ ಭಾರೀ ಏರಿಕೆ

7 ದಶಕಗಳು (1947-2014)	8 ವರ್ಷಗಳು (2014 ರಿಂದ)	ಒಟ್ಟು 2022 ರವರೆಗೆ
7 ಏಮ್ಸ್	15 ಏಮ್ಸ್ ಅನುಮೋದನೆ/ಕಾರ್ಯಾರಂಭ	22 ಏಮ್ಸ್
387 ವೈದ್ಯಕೀಯ ಕಾಲೇಜುಗಳು	219 ವೈದ್ಯಕೀಯ ಕಾಲೇಜುಗಳು	606 ವೈದ್ಯಕೀಯ ಕಾಲೇಜುಗಳು
82,000 ವೈದ್ಯಕೀಯ ಸೀಟುಗಳು	66,000 ವೈದ್ಯಕೀಯ ಸೀಟುಗಳು	1.48 ಲಕ್ಷ ವೈದ್ಯಕೀಯ ಸೀಟುಗಳು
16 ಐಐಟಿಗಳು	7 ಐಐಟಿಗಳು	23 ಐಐಟಿಗಳು
13 ಐಐಎಂಗಳು	7 ಐಐಎಂಗಳು	20 ಐಐಎಂಗಳು
723 ವಿಶ್ವವಿದ್ಯಾಲಯಗಳು	320 ವಿಶ್ವವಿದ್ಯಾಲಯಗಳು	1043 ವಿಶ್ವವಿದ್ಯಾಲಯಗಳು

ಐಟಿಐಗಳ ಸಂಖ್ಯೆಯಲ್ಲಿ ಹೆಚ್ಚಳ

ಕಳೆದ 8 ವರ್ಷಗಳಲ್ಲಿ ಕೌಶಲ್ಯಕ್ಕಾಗಿ ಪರಿಸರ ವ್ಯವಸ್ಥೆಯು ಭಾರೀ ಪ್ರಮಾಣದಲ್ಲಿ ಬೆಳೆದಿದೆ.

- ಕಳೆದ 8 ವರ್ಷಗಳಲ್ಲಿ 14,747 ಐಟಿಐಗಳನ್ನು ತೆರೆಯಲಾಗಿದೆ.
- 2014ರ ನಂತರ 4626 ಸಂಸ್ಥೆಗಳನ್ನು ಸೇರಿಸಲಾಗಿದೆ.
- 2014 ರಿಂದ, 4 ಲಕ್ಷಕ್ಕೂ ಹೆಚ್ಚು ಸೀಟುಗಳನ್ನು ಸೇರಿಸಲಾಗಿದೆ.
- ತರಬೇತಿ ಮತ್ತು ಉದ್ಯಮದ ಅಗತ್ಯಗಳಿಗಾಗಿ 3397 ತಿಳಿವಳಿಕೆ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

ಹಾಗು ದೊರೆಯದವರಿಗೆ ಕೌಶಲ್ಯ ಮತ್ತು ತರಬೇತಿಯನ್ನು ಪಡೆಯಲು ಅವಕಾಶವನ್ನು ನೀಡುತ್ತದೆ, ಅದು ಅವರು ಸಬಲರಾಗಲು ಮತ್ತು ಸ್ವಾವಲಂಬಿಯಾಗಲು ಅನುವು ಮಾಡಿಕೊಡುತ್ತದೆ.

ಬಾಬಾಸಾಹೇಬ್ ಅಂಬೇಡ್ಕರ್ ಅವರು ಯುವಕರು ಮತ್ತು ಹಿಂದುಳಿದವರಿಗೆ ಕೌಶಲ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದರು ಮತ್ತು ಬಾಬಾಸಾಹೇಬ್ ಅವರ ದೂರದೃಷ್ಟಿಯ ಕನಸನ್ನು ನನಸಾಗಿಸಲು ದೇಶವು ಕೌಶಲ್ಯ ಮಿಷನ್ ಮೂಲಕ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ಬುಡಕಟ್ಟು ಸಮಾಜಕ್ಕಾಗಿ ಭಾರತವು "ಗೋಯಿಂಗ್ ಆನ್‌ಲೈನ್ ಆಸ್ ಲೀಡರ್ಸ್" (ಗೋಲ್) ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಈ ಕಾರ್ಯಕ್ರಮವು ಸಾಂಪ್ರದಾಯಿಕ ಕೌಶಲ್ಯಗಳೊಂದಿಗೆ ಬುಡಕಟ್ಟು ಸಮುದಾಯಕ್ಕೆ ಸಹಾಯ ಮಾಡುವ ಮೂಲಕ ಉದ್ಯಮಶೀಲತೆಯನ್ನು ಉತ್ತೇಜಿಸುತ್ತದೆ.

ಕೌಶಲ ಅಭಿವೃದ್ಧಿ ಮಿಷನ್ ಈಗ ಒಂದು ಬೃಹತ್ ಸಾಮೂಹಿಕ ಆಂದೋಲನವಾಗಿದೆ

ಒಂದು ದೇಶದ ಬಹುದೊಡ್ಡ ಶಕ್ತಿ ಅದರ ಯುವಶಕ್ತಿ. ದೇಶದ ಆರ್ಥಿಕ ಪ್ರಗತಿಗೆ ಈ ತಲೆಮಾರಿನ ಕೊಡುಗೆಯೂ ಅತ್ಯಂತ ಮಹತ್ವದ್ದು. ಭಾರತದ ಜನಸಂಖ್ಯೆಯ ಶೇಕಡಾ 65 ರಷ್ಟು ಯುವಕರು ಇರುವ ಈ ಸಮಯದಲ್ಲಿ, ಈ ಯುವಕರನ್ನು ಸಾಧ್ಯವಾದಷ್ಟು ಉತ್ತಮ ಮಾನವ ಸಂಪನ್ಮೂಲವಾಗಿ ರೂಪಿಸಲು ಸಾಮೂಹಿಕ ಚಳವಳಿ ನಡೆಯುತ್ತಿದೆ. ಪ್ರಧಾನಿ ಮೋದಿಯವರ ದೂರದೃಷ್ಟಿಯ ಪ್ರಕಾರ ಕೌಶಲ್ಯಾಭಿವೃದ್ಧಿಯ ವಿವಿಧ ಅಂಶಗಳಿಗೆ ಈ ದಿಸೆಯಲ್ಲಿ ಆದ್ಯತೆ ನೀಡಲಾಗಿದೆ. ಅಲ್ಪಾವಧಿಯ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ, 300 ಕ್ಕೂ ಹೆಚ್ಚು ವಿಷಯಗಳಲ್ಲಿ ತರಬೇತಿಯನ್ನು ಯೋಜಿಸಲಾಗಿದೆ.

ವಿಶ್ವ ಪ್ರಮಾಣೀಕೃತ ಕಾರ್ಯಕ್ರಮಗಳಿಗೆ ಅನುಗುಣವಾಗಿ 1.25 ಕೋಟಿಗೂ ಹೆಚ್ಚು ಜನರು ಇದುವರೆಗೆ ಕೌಶಲ್ಯ ತರಬೇತಿ ಪಡೆದಿದ್ದಾರೆ. ದೇಶದ ಅಸಂಘಟಿತ ವಲಯದ ಕೆಲಸದ ಪರಿಸ್ಥಿತಿಯನ್ನು ವಿದ್ಯುಕ್ತಗೊಳಿಸಲು, ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆ ಅಡಿಯಲ್ಲಿ ಅಸಂಘಟಿತ ವಲಯವನ್ನು ಸಂಘಟಿತ ವಲಯವಾಗಿ ಬದಲಾಯಿಸುವ ಸಲುವಾಗಿ ಸಾಂಪ್ರದಾಯಿಕ ಕೌಶಲ್ಯಗಳ (ಬಡಗಿಗಳು, ನಲ್ಲಿ ನೀರಿನ ಸಂಪರ್ಕ ದುರಸ್ತಿದಾರರು, ಕಲ್ಲು ಕೆತ್ತನೆ ಮತ್ತು ಮುಂತಾದವುಗಳನ್ನು ಒಳಗೊಂಡಂತೆ) ಹಿಂದಿನ ಅನುಭವವನ್ನು ಗುರುತಿಸಲು ಉಪಕ್ರಮವನ್ನು ತೆಗೆದುಕೊಳ್ಳಲಾಗಿದೆ. ಪೂರ್ವ ಕಲಿಕೆಯ ಗುರುತಿಸುವಿಕೆಯ ಪರಿಣಾಮವಾಗಿ 50 ಮಿಲಿಯನ್ಗಿಂತಲೂ ಹೆಚ್ಚು ಜನರನ್ನು ಮೌಲ್ಯಮಾಪನ ಮಾಡಲಾಗಿದೆ ಮತ್ತು

ಕೌಶಲ್ಯಕ್ಕೆ ಸಂಬಂಧಿಸಿದ ಕ್ರಮಗಳು...

ಅಭಿಯಾನದ ಪ್ರಗತಿ

- ಇದುವರೆಗೆ, ಉದ್ಯಮ 4.0 ಗೆ ಅನುಗುಣವಾಗಿ ಮಾರುಕಟ್ಟೆ ಆಧಾರಿತ ಭವಿಷ್ಯದ ಕೌಶಲ್ಯಗಳಿಗಾಗಿ 146 ನಿರೀಕ್ಷಿತ ಕೌಶಲ್ಯ ಅರ್ಹತೆಗಳನ್ನು ಅನುಮೋದಿಸಲಾಗಿದೆ. ಪ್ರಧಾನಮಂತ್ರಿ ಕೌಶಲ್ ವಿಕಾಸ್ ಯೋಜನೆ 3.0 ಅಡಿಯಲ್ಲಿ ಪ್ರಮಾಣೀಕರಿಸಿದ ಎಲ್ಲಾ ಅಭ್ಯರ್ಥಿಗಳು ಉದ್ಯೋಗ ಅವಕಾಶಗಳನ್ನು ಹುಡುಕಲು ಅಸೀಮ್ ಪೋರ್ಟಲ್‌ಗೆ ಲಿಂಕ್ ಮಾಡಲಾಗುತ್ತಿದೆ.
- ಪಿಎಂ ಕೌಶಲ್ ವಿಕಾಸ್ ಯೋಜನೆ 3.0 ಅಡಿಯಲ್ಲಿ ಕೋವಿಡ್ ಯೋಧರಿಗಾಗಿ ತ್ವರಿತ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ ಮತ್ತು 1.24 ಲಕ್ಷ ಜನರಿಗೆ ಆರೋಗ್ಯ ಕ್ಷೇತ್ರದಲ್ಲಿ ಉದ್ಯೋಗಗಳಿಗಾಗಿ ತರಬೇತಿ ನೀಡಲಾಗಿದೆ.
- ತರಬೇತಿಯನ್ನು ಉತ್ತೇಜಿಸಲಾಗಿದೆ. 22 ಲಕ್ಷಕ್ಕೂ ಹೆಚ್ಚು ಸಕ್ರಿಯ ಅಪ್ರೆಂಟಿಸ್ಗಳು ಇದರಲ್ಲಿ ತೊಡಗಿಸಿಕೊಂಡಿದ್ದಾರೆ. ಡಿಸೆಂಬರ್ 2021 ರ ಹೊತ್ತಿಗೆ, ಸುಮಾರು 4.9 ಲಕ್ಷ ಅಪ್ರೆಂಟಿಸ್‌ಗಳು ತರಬೇತಿಯನ್ನು ಪೂರ್ಣಗೊಳಿಸಿದ್ದಾರೆ.
- ಉದ್ಯಮಶೀಲತೆಯನ್ನು ಉತ್ತೇಜಿಸಲು 39,251 ಕಾರ್ಯಕ್ರಮಗಳ ಮೂಲಕ 9.93 ಲಕ್ಷ ಮಂದಿಗೆ ತರಬೇತಿ ನೀಡಲಾಗಿದೆ. ಇದು 145 ದೇಶಗಳ 5000 ಕ್ಕೂ ಹೆಚ್ಚು ಅಭ್ಯರ್ಥಿಗಳನ್ನು ಒಳಗೊಂಡಿದೆ.
- ಪ್ರಧಾನ ಮಂತ್ರಿ ಯುವ ಯೋಜನೆಯ ಮೂಲಕ 991 ಹೊಸ ಉದ್ಯಮಗಳನ್ನು ಸೃಷ್ಟಿಸಲಾಗಿದೆ ಮತ್ತು ಅಸ್ತಿತ್ವದಲ್ಲಿರುವ 1071 ಉದ್ಯಮಗಳನ್ನು ವಿಸ್ತರಿಸಲಾಗಿದೆ.

ಪ್ರಮಾಣೀಕರಿಸಲಾಗಿದೆ. ಇದಲ್ಲದೆ, ಪೊಲೀಸರು ಮತ್ತು ಜೈಲುಗಳು ಸಹ ಈ ಯೋಜನೆಯಿಂದ ಪ್ರಯೋಜನ ಪಡೆದಿವೆ. ಕಳೆದ ವರ್ಷ ಜೂನ್ 18 ರಂದು, ಒಂದು ಲಕ್ಷ ಆರೋಗ್ಯ ಕಾರ್ಯಕರ್ತರಿಗೆ ತರಬೇತಿ ನೀಡುವ ಗುರಿಯೊಂದಿಗೆ ಕೋವಿಡ್ ಯೋಧರ ತರಬೇತಿಗಾಗಿ ಆರು ಹೊಸ ತ್ವರಿತ ತರಬೇತಿ ಕೋರ್ಸ್‌ಗಳನ್ನು ಪ್ರಾರಂಭಿಸಲಾಯಿತು.

ಜನ ಶಿಕ್ಷಣ ಸಂಸ್ಥಾನ (ಜೆಎಸ್‌ಎಸ್) ದೂರದ ಗ್ರಾಮೀಣ ಪ್ರದೇಶಗಳಲ್ಲಿ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವ ಪ್ರಮುಖ ಉಪಕ್ರಮವಾಗಿದೆ.

ಕಳೆದ ಕೆಲವು ವರ್ಷಗಳಲ್ಲಿ ಇದರ ಪರಿಣಾಮವಾಗಿ 9 ಲಕ್ಷಕ್ಕೂ ಹೆಚ್ಚು ಜನರು ತರಬೇತಿ ಪಡೆದಿದ್ದಾರೆ. ದೇಶಾದ್ಯಂತ 304 ಜನ ಶಿಕ್ಷಣ ಸಂಸ್ಥಾನಗಳು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಇಂದು ಭಾರತ ಜಾಗತಿಕ ಆರ್ಥಿಕತೆಯಾಗಿ ಬೆಳೆಯುತ್ತಿದೆ. ಇದನ್ನು ಗಮನದಲ್ಲಿಟ್ಟುಕೊಂಡು, ಯುವಜನರಿಗೆ ಕೆಲಸದ ಬಗ್ಗೆ ತರಬೇತಿ ನೀಡಲಾಗುತ್ತಿದೆ ಮತ್ತು ಕೆಲಸಕ್ಕಾಗಿ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತಿದೆ. 2016 ರಲ್ಲಿ ಪ್ರಾರಂಭವಾದ ರಾಷ್ಟ್ರೀಯ ಅಪ್ರೆಂಟಿಷಿಪ್ ಪ್ರೋತ್ಸಾಹ ಯೋಜನೆಗಾಗಿ, ಅಪ್ರೆಂಟಿಷಿಪ್ ಕಾಯಿದೆಗೆ ಗಮನಾರ್ಹ ಬದಲಾವಣೆಗಳನ್ನು

ಅಮೃತ ಕಾಲಕ್ಕಾಗಿ ಕೌಶಲ್ಯ ಭಾರತದ ದೃಷ್ಟಿಕೋನ

ಭಾರತ @ 2047 ರ ಕೌಶಲ್ಯ ಅಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಸಚಿವಾಲಯವು ನೀತಿ ಆಯೋಗ್ದ ತಜ್ಞರೊಂದಿಗೆ ರೂಪುರೇಷೆಯನ್ನು ರೂಪಿಸಿದೆ ಮತ್ತು ಭಾಗೀದಾರರೊಂದಿಗೆ ಸಂವಹನ ನಡೆಸುತ್ತಿದೆ:

ಅಗಾಧ ಸಾಮರ್ಥ್ಯ

- ಗಿಗ್ ಅಥವಾ ಜ್ಞಾನದ ಆರ್ಥಿಕತೆಯು ಗಿಗ್ಸ್ ಮತ್ತು ಕೆಲಸಗಾರರ ವಿಷಯದಲ್ಲಿ ಬೆಳೆಯಲು ಸಾಕಷ್ಟು ಸಾಮರ್ಥ್ಯವಿದೆ. ಪ್ರಕ್ರಿಯೆಗಳು, ವ್ಯವಸ್ಥೆಗಳು ಮತ್ತು ಮಾದರಿಗಳಲ್ಲಿನ ಪ್ರಾವೀಣ್ಯತೆದಲ್ಲಿ ಕೌಶಲ್ಯಗಳನ್ನು ಅಂತರ್ಗತಗೊಳಿಸಬೇಕು.
- ವಿಶ್ವದ ಅತ್ಯುತ್ತಮ ಕೆಲಸವನ್ನು ಪುನರಾವರ್ತಿಸಲು ಮತ್ತು ಸ್ಥಳೀಯ ಉತ್ತಮ ಕೆಲಸದ ಮೇಲೆ ಕೇಂದ್ರೀಕರಿಸಲು ವಿದೇಶಿ ಸಂಸ್ಥೆಗಳ ಸ್ಥಾಪನೆಯನ್ನು ಸುಲಭಗೊಳಿಸಲಾಗಿದೆ. 2047 ರ ಭವಿಷ್ಯದ ಉದ್ಯೋಗ ಮುನ್ಸೂಚನೆಗಳನ್ನು ಅಧ್ಯಯನ ಮತ್ತು ವಿಶ್ಲೇಷಣೆ ನಡೆಸಲಾಗುತ್ತಿದೆ.
- ಭಾರತವು ಆರೋಗ್ಯ ರಕ್ಷಣೆ, ಆರೈಕೆ-ವಲಯ, ಹೈಟೆಕ್ ಉತ್ಪಾದನೆ, ಐಟಿ-ಐಟಿಇಎಸ್, ನಿರ್ಮಾಣ, ಆತಿಥ್ಯ, ತಂತ್ರಜ್ಞಾನ ಮತ್ತು ನಾವೀನ್ಯತೆಗಳಂತಹ ಕ್ಷೇತ್ರಗಳಲ್ಲಿ ಬದಲಾವಣೆಯನ್ನು ಮಾಡಬಹುದು.
- 2047ಕ್ಕೆ ಅಸಂಘಟಿತ ವಲಯವನ್ನು ಸಂಘಟಿಸುವ ಅಗತ್ಯಕ್ಕೆ ಹೆಚ್ಚಿನ ಒತ್ತು.
- ಭಾರತ, ಕೆನಡಾ, ಸಿಂಗಾಪುರ್, ಬ್ರಿಟನ್, ಆಸ್ಟ್ರೇಲಿಯಾ, ಜರ್ಮನಿ, ಜಪಾನ್, ಗಲ್ಫ್ ಪ್ರದೇಶ ಮತ್ತು ಸ್ಕ್ಯಾಂಡಿನೇವಿಯಾದಂತಹ ಪ್ರಮುಖ ದೇಶಗಳನ್ನು ಒಳಗೊಂಡಿರುವ ಜಾಗತಿಕ ಮಾನ್ಯತೆ ಮಂಡಳಿಯು ಕೌಶಲ್ಯ ಅಗತ್ಯಗಳು ಮತ್ತು ಪ್ರಮುಖ ಸಂಸ್ಥೆಗಳಲ್ಲಿ ಉತ್ತಮವಾಗಿದೆ.

ಕೌಶಲ್ಯ ಮಿಷನ್‌ಗೆ ಬಜೆಟ್ ಅನುದಾನ ಹೆಚ್ಚಳ

- ಕೌಶಲ್ಯ ಅಭಿವೃದ್ಧಿ ಪ್ರಗತಿಯನ್ನು ವೇಗಗೊಳಿಸಲು ಬಜೆಟ್‌ನ ಕೊರತೆಯು ಅಡ್ಡಿಯಾಗುವುದಿಲ್ಲ. ಅದರ ಬಜೆಟ್ ಬೆಳೆಯುತ್ತಲೇ ಇದೆ ಮತ್ತು 2022-23 ರ ಸಾಮಾನ್ಯ ಬಜೆಟ್ ಉದ್ಯಮ ಪಾಲುದಾರಿಕೆಯೊಂದಿಗೆ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳ ನಿರಂತರ ವರ್ಧನೆಗೆ ಒತ್ತು ನೀಡುತ್ತದೆ, ಅವುಗಳಲ್ಲಿ ಮುಖ್ಯವಾದವುಗಳು:
- ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟನ್ನು ಉದ್ಯಮದ ಅಗತ್ಯಗಳೊಂದಿಗೆ ಜೋಡಿಸಲಾಗುತ್ತದೆ. ಇದಕ್ಕಾಗಿ ದೇಶದಲ್ಲಿ 750 ವರ್ಚುವಲ್ ಮತ್ತು 75 ಕೌಶಲ್ಯ ಆಧಾರಿತ ಇ-ಲ್ಯಾಬ್‌ಗಳನ್ನು ಸ್ಥಾಪಿಸಲಾಗುವುದು.
- ಕೌಶಲ್ಯ ಮತ್ತು ಜೀವನೋಪಾಯಕ್ಕಾಗಿ 'ದೇಶ್ ಸ್ಟಾಕ್ ಪೋರ್ಟಲ್ (ದೇಶ್-ಸ್ಟಾಕ್ ಇ-ಪೋರ್ಟಲ್)' ಅನ್ನು ಸ್ಥಾಪಿಸುವ ಮೂಲಕ ಆನ್ಲೈನ್ ತರಬೇತಿಯ ಮೂಲಕ ಯುವಕರನ್ನು ಕೌಶಲ್ಯಪೂರ್ಣರನ್ನಾಗಿ ಮಾಡಲಾಗುತ್ತದೆ. ಎಪಿಐ ಆಧಾರಿತ ವಿಶ್ವಾಸಾರ್ಹ ಕೌಶಲ್ಯ ಪ್ರಮಾಣಪತ್ರವನ್ನು ನೀಡಲಾಗುತ್ತದೆ.
- ಡ್ರೋನ್-ಆಸ್-ಎ-ಸರ್ವೀಸ್ ಸ್ಟಾರ್ಟ್‌ಅಪ್‌ಗಳನ್ನು ಉತ್ತೇಜಿಸಲಾಗುವುದು. ಉದ್ಯೋಗವನ್ನು ಹೆಚ್ಚಿಸಲು ಡ್ರೋನ್ ಮತ್ತು ಡ್ರೋನ್ ಬಿಡಿಭಾಗಗಳ ಉತ್ಪಾದನೆಗೆ 120 ಕೋಟಿ ರೂ. ಪಿಎಲ್‌ಐ ಯೋಜನೆಗೆ ಅನುಮೋದನೆ ನೀಡಲಾಗಿದೆ. ಮುಂದಿನ ಮೂರು ವರ್ಷಗಳಲ್ಲಿ ಈ ವಲಯದಲ್ಲಿ 10,000 ಉದ್ಯೋಗಗಳು ಸೃಷ್ಟಿಯಾಗಲಿವೆ.
- ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ನಿಗಮ ದೇಶ ಮತ್ತು ಪ್ರಪಂಚದ ಕೆಲವು ಸಂಸ್ಥೆಗಳ ಸಹಯೋಗದೊಂದಿಗೆ ಸ್ಕಿಲ್ ಇಂಪ್ಯಾಕ್ಟ್ ಬಾಂಡ್ ಅನ್ನು ಸಹ ಪ್ರಾರಂಭಿಸಿದೆ, ಇದು ಕೌಶಲ್ಯದ ಮೇಲಿನ ಈ ರೀತಿಯ ಬಾಂಡ್ಗಳಲ್ಲಿ ಮೊದಲನೆಯದು. ಈ ಸಹಯೋಗವು ನಾಲ್ಕು ವರ್ಷಗಳಲ್ಲಿ 50,000 ಯುವಕರಿಗೆ ಪ್ರಯೋಜನ ಕಲ್ಪಿಸಲು 14.4 ಮಿಲಿಯನ್ ಡಾಲರ್ ನಿಧಿಯನ್ನು ಸಂಗ್ರಹಿಸಿದೆ.
- ಈ ನಿಧಿ ಸಂಯೋಜಿತ ಯೋಜನೆಯ ಮುಖ್ಯ ಗಮನವು ಉದ್ಯೋಗವನ್ನು ಪಡೆಯಲು ಮಹಿಳೆಯರು ಮತ್ತು ಹೆಣ್ಣುಮಕ್ಕಳಿಗೆ ಕೌಶಲ್ಯ ಮತ್ತು ವೃತ್ತಿಪರ ತರಬೇತಿಯನ್ನು ಒದಗಿಸುವುದಾಗಿದೆ.

ಮಾಡಲಾಗಿದೆ. ಅಪ್ರೆಂಟಿಸ್ಶಿಪ್ ಅನ್ನು ಪ್ರೋತ್ಸಾಹಿಸಲು, ಸಂಸ್ಥೆಗಳಿಗೆ ಶೇ.25 ರಷ್ಟು ಸ್ಟೈಫಂಡ್ ಮರುಪಾವತಿಯನ್ನು ಪಡೆಯಲು ಅನುಮತಿಸುವ ನಿಬಂಧನೆಯನ್ನು ಸೇರಿಸಲು ಅಪ್ರೆಂಟಿಸಷಿಪ್ ಕಾಯಿದೆಯನ್ನು ತಿದ್ದುಪಡಿ ಮಾಡಲಾಗಿದೆ.

ಪದವಿ-ಅಪ್ರೆಂಟಿಸಷಿಪ್ ಉದ್ಯೋಗ ತರಬೇತಿ ಸೇರಿದಂತೆ ಶಿಕ್ಷಣ ಸಚಿವಾಲಯದ ಸಹಯೋಗದೊಂದಿಗೆ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯವು ಪ್ರಾರಂಭಿಸಿದ ಮೊದಲ ರೀತಿಯ ಉಭಯ ವೃತ್ತಿಪರ ಶಿಕ್ಷಣ ಕಾರ್ಯಕ್ರಮವಾಗಿದೆ. ಕೌಶಲ್ಯ ಮಿಷನ್ ತರಬೇತಿ ಪಡೆದ ಯುವಕರಿಗೆ ಪ್ರಪಂಚದಾದ್ಯಂತ ಅವಕಾಶಗಳನ್ನು ಒದಗಿಸಿದೆ. ವಿದೇಶಿ ಚಲನಶೀಲತೆಯನ್ನು ಹೆಚ್ಚಿಸಲು ಸುಮಾರು 20 ದೇಶಗಳೊಂದಿಗೆ ಹಲವಾರು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ಇವುಗಳಲ್ಲಿ ಕೌಶಲ್ಯ ಮ್ಯಾಪಿಂಗ್, ಯುಎಇಯೊಂದಿಗೆ ಚಾಲನಾ ತರಬೇತಿ ಮತ್ತು ಜಪಾನ್ನೊಂದಿಗೆ ಟಿಐಪಿಪಿ ಸೇರಿವೆ. ಕಳೆದ ಕೆಲವು ವರ್ಷಗಳಲ್ಲಿ ಅಂತಾರಾಷ್ಟ್ರೀಯ ಕೌಶಲ್ಯ ಶ್ರೇಯಾಂಕದಲ್ಲಿ ಭಾರತ 29ನೇ ಸ್ಥಾನದಿಂದ 13ನೇ ಸ್ಥಾನಕ್ಕೆ ಏರಿದೆ. ಇಂದಿನ ಬದಲಾಗುತ್ತಿರುವ ಕಾಲಘಟ್ಟದಲ್ಲಿ ಯುವಕರಿಗೆ ಹೊಸ ಅವಕಾಶಗಳು ತೆರೆದುಕೊಳ್ಳುತ್ತಿವೆ. ಅವರ ಕನಸುಗಳನ್ನು ನನಸಾಗಿಸಲು ಅನುವು ಮಾಡಿಕೊಡುವ ಕೌಶಲ್ಯ ಮತ್ತು ಜ್ಞಾನದಿಂದ ಅವರನ್ನು ಸಜ್ಜುಗೊಳಿಸುವುದು ಬಹಳ ಮುಖ್ಯವಾಗಿದೆ. ಮಾರುಕಟ್ಟೆಗೆ ಅಗತ್ಯವಿರುವಂತೆ ಕೌಶಲ್ಯ, ಮರುಕೌಶಲ್ಯ ಮತ್ತು ಉನ್ನತೀಕರಣದ ಮೂಲಕ ಭಾರತದ ಯುವಕರು ಯಾವುದೇ ಸವಾಲಿಗೆ ಸಿದ್ಧರಾಗಿದ್ದಾರೆ. ಕೌಶಲ್ಯ ಭಾರತ ಅಭಿಯಾನವು ಈಗ ನವ ಭಾರತಕ್ಕೆ ಸಮಾನಾರ್ಥಕವಾಗಿದೆ.

ತಂತ್ರಜ್ಞಾನ, ನಿರ್ವಹಣೆ ಕೌಶಲ್ಯವನ್ನು ರೂಪಿಸುತ್ತವೆ

ತಂತ್ರಜ್ಞಾನದ ವಿಶ್ವದ ಅತಿದೊಡ್ಡ ಗ್ರಾಹಕರು ಎಂಬುದಕ್ಕೆ ಮಾತ್ರ ಯುವ ಆಕಾಂಕ್ಷೆಗಳನ್ನು ಸೀಮಿತಗೊಳಿಸುವ ಬದಲು ಹೊಸ ಜೀವನವನ್ನು ನೀಡುವ ನೀತಿಯ ಪರಿಣಾಮವಾಗಿ ಪ್ರಧಾನಿಯವರ ನವಭಾರತದ ದೃಷ್ಟಿಕೋನವು ಸಾಕಾರಗೊಳ್ಳುತ್ತಿದೆ. ಭಾರತವು ತಾಂತ್ರಿಕ ನಾಯಕನಾಗುವ ಗುರಿಯನ್ನು ಹೊಂದಿದೆ ಮತ್ತು ಪ್ರಧಾನಿಯವರು ಈ ದಶಕವನ್ನು "TECHADE" ಎಂದು ಹಲವಾರು ಸಂದರ್ಭಗಳಲ್ಲಿ ಉಲ್ಲೇಖಿಸಿದ್ದಾರೆ.

ಹೊಸ ಭಾರತದಲ್ಲಿ ಹೊಸ ತಂತ್ರಜ್ಞಾನ ಸಂಸ್ಕೃತಿಯನ್ನು ರಚಿಸುವ ಅವಶ್ಯಕತೆಯಿದೆ, ಅಲ್ಲಿ ಜನರು ಹೊಸ ತಂತ್ರಜ್ಞಾನವನ್ನು ಪ್ರಯೋಗಿಸಲು ಸಿದ್ಧರಿದ್ದಾರೆ ಮತ್ತು ದೊಡ್ಡ ಸವಾಲುಗಳನ್ನು ತೆಗೆದುಕೊಳ್ಳಲು ಹೆದರುವುದಿಲ್ಲ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕೌಶಲ್ಯ ಅಭಿವೃದ್ಧಿ

- ರಾಷ್ಟ್ರೀಯ ಶಿಕ್ಷಣ ನೀತಿ 2020 ಪಠ್ಯಕ್ರಮದ ಹೊರೆಯನ್ನು ಕಡಿಮೆ ಮಾಡುವ ಮೂಲಕ ಭವಿಷ್ಯದ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ವಿದ್ಯಾರ್ಥಿಗಳಿಗೆ ನೆರವಾಗುತ್ತದೆ. ಇದು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಕೌಶಲ್ಯಗಳನ್ನು ಸುಧಾರಿಸುವ ಗುರಿಯನ್ನು ಹೊಂದಿದೆ. 2025 ರ ವೇಳೆಗೆ, ದೇಶದ ಕನಿಷ್ಠ ಅರ್ಧದಷ್ಟು ವಿದ್ಯಾರ್ಥಿಗಳು ಶಾಲೆಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸಂಪರ್ಕ ಹೊಂದಿರುತ್ತಾರೆ.
- "ಸಮಗ್ರ ಶಿಕ್ಷಣ-ಶಾಲಾ ಶಿಕ್ಷಣಕ್ಕಾಗಿ ಸಮಗ್ರ ಯೋಜನೆ" ಎಂಬ ಸಮೂಹ ಯೋಜನೆಯಡಿಯಲ್ಲಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಶಾಲಾ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣ ಯೋಜನೆಯನ್ನು ಜಾರಿಗೊಳಿಸುತ್ತಿದೆ, ಇದರಿಂದಾಗಿ ವಿದ್ಯಾರ್ಥಿಗಳು ತಮ್ಮ ಅಭಿರುಚಿ, ಸಾಮರ್ಥ್ಯ, ಮತ್ತು ಆಕಾಂಕ್ಷೆಗಳ ಆಧಾರದ ಮೇಲೆ ವೃತ್ತಿಯನ್ನು ಆಯ್ಕೆ ಮಾಡಬಹುದು. ಈ ಯೋಜನೆಯು ದೇಶಾದ್ಯಂತ 14,435 ಶಾಲೆಗಳಿಗೆ 9 ರಿಂದ 12ನೇ ತರಗತಿಯವರೆಗೆ ಸಾಮಾನ್ಯ ಶಿಕ್ಷಣದೊಂದಿಗೆ ವೃತ್ತಿಪರ ಶಿಕ್ಷಣವನ್ನು ಸಂಯೋಜಿಸಲು ಅಧಿಕಾರ ನೀಡಿದೆ.
- ಕೌಶಲ ಕೇಂದ್ರ ಉಪಕ್ರಮ (ಎಸ್ ಹೆಚ್ ಐ) ವನ್ನು ಶಿಕ್ಷಣ ಸಚಿವಾಲಯದ ಸಹಯೋಗದೊಂದಿಗೆ ಪ್ರಧಾನ ಮಂತ್ರಿ ಕೌಶಲ ವಿಕಾಸ್ ಯೋಜನೆ 3.0 ರಲ್ಲಿ ಪ್ರಾಯೋಗಿಕ ಯೋಜನೆಯಾಗಿ ಪ್ರಾರಂಭಿಸಲಾಗಿದೆ. ಇದು ಮೂಲಸೌಕರ್ಯವನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ ಮತ್ತು ಸ್ಥಳೀಯ ಆರ್ಥಿಕತೆಯ ಅಗತ್ಯತೆಗಳೊಂದಿಗೆ ವೃತ್ತಿಪರ ತರಬೇತಿ ಅಗತ್ಯಗಳನ್ನು ಪೂರೈಸುತ್ತದೆ. 6ನೇ ತರಗತಿಯಿಂದ 8 ನೇ ತರಗತಿಯವರೆಗೆ ಉದ್ಯಮಗಳಿಗೆ ಪ್ರಯಾಣ ಮತ್ತು ಬ್ಯಾಗುರಹಿತ ದಿನಗಳ ಮೂಲಕ ಕೆಲಸದ ಜಗತ್ತನ್ನು ಪರಿಚಯಿಸಲು ಗುರುತಿಸಲಾದ ಸ್ಕಿಲ್ ಹಬ್‌ಗಳು ನೋಡಲ್ ಕೌಶಲ್ಯ ಕೇಂದ್ರಗಳಾಗಿವೆ.
- 9ನೇ ತರಗತಿಯಿಂದ 12ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಹಾಗೂ ಮಧ್ಯಮ ಶಾಲೆ ಬಿಟ್ಟ ಮಕ್ಕಳಿಗೆ ಶಿಕ್ಷಣ ಸಾಲ ಮತ್ತು ಉದ್ಯೋಗದ ಮೂಲಕ ಕೌಶಲ್ಯ ಅಭಿವೃದ್ಧಿ ಮತ್ತು ವೃತ್ತಿಪರ ತರಬೇತಿಗೆ ಅವಕಾಶಗಳನ್ನು ನೀಡಲಾಗುತ್ತದೆ. ಇದಕ್ಕಾಗಿ ಸುಮಾರು 700 ಕೋಟಿ ರೂ. ವೆಚ್ಚದ ನಿರೀಕ್ಷೆಯಿದೆ. ಇದರ ವ್ಯಾಪ್ತಿಗೆ, 9.3 ಲಕ್ಷ ವಿದ್ಯಾರ್ಥಿಗಳು ಒಳಪಡುತ್ತಾರೆ, ಇದರಲ್ಲಿ 1.56 ಲಕ್ಷ ವಿದ್ಯಾರ್ಥಿಗಳು ಮಾರ್ಚ್ 2022 ರವರೆಗೆ ದಾಖಲಾಗಿದ್ದಾರೆ.

ಅದೇ ಸಮಯದಲ್ಲಿ, ಜನರಲ್ಲಿ ತಂತ್ರಜ್ಞಾನದ ವಿಷಯದಲ್ಲಿ ಅದನ್ನು ಅನುಸರಿಸುವವರಿಗಿಂತ ಅದರಲ್ಲಿ ನಾಯಕರಾಗುವ ಬಯಕೆ ಇರಬೇಕು, ಏಕೆಂದರೆ 21 ನೇ ಶತಮಾನದಲ್ಲಿ ಇಂಟರ್ನೆಟ್ ಮತ್ತು ಆನ್ಲೈನ್ ಕಲಿಕೆ ಅಗತ್ಯ. ಇದರ ಪರಿಣಾಮವಾಗಿ, ಭಾರತ್ ಸ್ಕಿಲ್ಸ್ ಮತ್ತು ಇ-ಸ್ಕಿಲ್ ಇಂಡಿಯಾ ಪ್ಲಾಟ್‌ಫಾರ್ಮ್‌ನಂತಹ ಕೌಶಲ್ಯ ತರಬೇತಿಗಾಗಿ ಇತರ ಹಲವು ಪೋರ್ಟಲ್ಗಳನ್ನು ಸ್ಥಾಪಿಸಲಾಗಿದೆ. ಇದಲ್ಲದೆ, ಐಐಟಿಗಳು ಮತ್ತು ಐಐಎಂಗಳ ಜೊತೆಗೆ, ಭಾರತೀಯ ಕೌಶಲ್ಯ ಸಂಸ್ಥೆಗಳು (ಐಐಎಸ್) ಎಂದು ಕರೆಯಲಾಗುವ ಅತ್ಯಾಧುನಿಕ ತರಬೇತಿ ಸಂಸ್ಥೆಗಳನ್ನು ಭಾರತೀಯ ಕೌಶಲ್ಯಗಳನ್ನು ವಿಶ್ವದರ್ಜೆಯ ಮಟ್ಟಕ್ಕೇರಿಸಲು ಯೋಜಿಸಲಾಗುತ್ತಿದೆ. ಮುಂಬೈ ಮತ್ತು ಗಾಂಧಿನಗರದಲ್ಲಿ ಪಿಪಿಪಿ ಮಾದರಿಯಲ್ಲಿ ಇದಕ್ಕೆ ಅಡಿಪಾಯವನ್ನು ಹಾಕಲಾಗಿದೆ.

ಫಿನ್‌ಟೆಕ್, ಅಗ್ರಿಟೆಕ್, ಮೆಡಿಟೆಕ್ ಮತ್ತು ಕೌಶಲ್ಯ ಅಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ ದೇಶವು ಪ್ರಗತಿ ಸಾಧಿಸದ ಹೊರತು ಉದ್ಯಮ 4.0 ಅನ್ನು ಸಾಕಾರಗೊಳಿಸಲು ಸಾಧ್ಯವಿಲ್ಲ ಎಂದು ಪ್ರಧಾನಿ ಇತ್ತೀಚೆಗೆ ಹೇಳಿದ್ದಾರೆ. ಆದುದರಿಂದಲೇ "ತಂತ್ರಜ್ಞಾನ ಮೊದಲು" ಎಂಬುದು ತಮ್ಮ ಸರ್ಕಾರದ ಉತ್ತಮ ಆಡಳಿತದ ಮಾದರಿ ಎಂದು ಅವರು ನಿಸ್ಸಂದಿಗ್ಧವಾಗಿ ಹೇಳುತ್ತಾರೆ. ಸಾಮಾನ್ಯ ಬಜೆಟ್ನಲ್ಲಿ ಯುವ ಕೌಶಲ್ಯ ಅಭಿವೃದ್ಧಿಗಾಗಿ ಹೊಸ

ರೈತರಿಗೂ ತರಬೇತಿ

- 'ಕೃಷಿ ವಿಸ್ತರಣಾ ಉಪ ಮಿಷನ್' ಮೂಲಕ ಗ್ರಾಮೀಣ ಯುವಕರಿಗೆ 7 ದಿನಗಳ ಅಲ್ಪಾವಧಿ ಕೌಶಲ್ಯ ತರಬೇತಿ ನೀಡಲಾಗುತ್ತದೆ.
- ಕೃಷಿ ವಿಸ್ತರಣಾ ಉಪ-ಮಿಷನ್ ಅಡಿಯಲ್ಲಿ ಸ್ವಯಂ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಲು ಕೃಷಿ ಕ್ಲಿನಿಕ್ಗಳು ಮತ್ತು ಕೃಷಿ ವಾಪಾರ ಕೇಂದ್ರಗಳನ್ನು (ಎಸಿ & ಎಬಿಸಿ) ಸ್ಥಾಪಿಸಲಾಗಿದೆ.
- ಇದರಲ್ಲಿ ನೋಡಲ್ ತರಬೇತಿ ಸಂಸ್ಥೆಗಳ ಸಹಾಯದಿಂದ 45 ದಿನಗಳ ವಸತಿ ತರಬೇತಿ ನೀಡಲಾಗುತ್ತದೆ.
- ತರಬೇತಿ ಪಡೆದ ಅಭ್ಯರ್ಥಿಗಳಿಗೆ ಕೃಷಿ ಉದ್ಯಮಗಳನ್ನು ಪ್ರಾರಂಭಿಸಲು ಸಾಲದ ನೆರವು. ಇತ್ತೀಚೆಗೆ, ಈ ಯೋಜನೆಯನ್ನು ಮುದ್ರಾ ಸಾಲ ಯೋಜನೆಗೆ ಸೇರಿಸಲಾಗಿದೆ.

ಅಲ್ಪಸಂಖ್ಯಾತರಿಗೆ ಕೌಶಲ್ಯ ಅಭಿವೃದ್ಧಿ

- ಸೀಖೋ ಔರ್ ಕಮಾವೊ, ನಯಿ ಮಂಜಿಲ್, ಉಸ್ತಾದ್, ನಯಿ ರೋಶ್ನಿ ಮತ್ತು ಗರೀಬ್ ನವಾಜ್ ಸ್ವರೋಜ್‌ಗಾರ್‌ನಂತಹ ಯೋಜನೆಗಳ ಮೂಲಕ 10 ಲಕ್ಷಕ್ಕೂ ಹೆಚ್ಚು ಯುವಕರು ಕೌಶಲ್ಯ ಅಭಿವೃದ್ಧಿ ತರಬೇತಿ ಮತ್ತು ಉದ್ಯೋಗಾವಕಾಶಗಳನ್ನು ಪಡೆದಿದ್ದಾರೆ.
- ಸೌಲಭ್ಯ ಪಡೆದವರಲ್ಲಿ ಅರ್ಧಕ್ಕಿಂತ ಹೆಚ್ಚು ಮಹಿಳೆಯರು ಇದ್ದಾರೆ.
- ನುರಿತ ಕುಶಲಕರ್ಮಿಗಳು ಮತ್ತು ಕಸುಬುದಾರರಿಗೆ ಹುನರ್‌ಹಾಟ್ ಮಾರುಕಟ್ಟೆ ಮತ್ತು ಅವಕಾಶಗಳನ್ನು ಒದಗಿಸುತ್ತದೆ. ಕಳೆದ ಎಂಟು ವರ್ಷಗಳಲ್ಲಿ, ದೇಶಾದ್ಯಂತ 39 ಹುನರ್‌ಹಾಟ್‌ಗಳು 8.5 ಲಕ್ಷಕ್ಕೂ ಹೆಚ್ಚು ಪರಿಣಿತರು, ಕುಶಲಕರ್ಮಿಗಳು ಮತ್ತು ಕಸುಬುದಾರರಿಗೆ ಉದ್ಯೋಗ ಮತ್ತು ಅವಕಾಶಗಳನ್ನು ಒದಗಿಸಿವೆ.

ಕೌಶಲ್ಯ ಅಭಿವೃದ್ಧಿಯಲ್ಲಿ ಭಾರತದೊಂದಿಗೆ ವಿಶ್ವ ಬ್ಯಾಂಕ್ ಸಹಯೋಗ

ಭಾರತೀಯ ಜನಸಂಖ್ಯೆಯಲ್ಲಿ ಪ್ರತಿಭೆಗೆ ಕೊರತೆಯಿಲ್ಲ ಆದರೆ ಅವರನ್ನು ಕೌಶಲ್ಯದಿಂದ ಸಜ್ಜುಗೊಳಿಸುವುದು ಬಹಳ ಮುಖ್ಯ. ಈ ಅಭಿಯಾನದಲ್ಲಿ ವಿಶ್ವಬ್ಯಾಂಕ್ ಕೂಡ ಭಾರತವನ್ನು ಬೆಂಬಲಿಸುತ್ತಿದೆ. ವಿಶ್ವಬ್ಯಾಂಕ್ ಸಹಯೋಗದಲ್ಲಿ ಸಂಕಲ್ಪ್ ಮತ್ತು ಸ್ಟ್ರೈವ್ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ಇದಕ್ಕಾಗಿ 15ಕ್ಕೂ ಹೆಚ್ಚು ದೇಶಗಳೊಂದಿಗೆ ಪರಸ್ಪರ ಸಹಕಾರದ ಕಾರ್ಯಕ್ರಮ ನಡೆಯುತ್ತಿದೆ.

ಸಂಕಲ್ಪ 1

ರಾಜ್ಯ-ಜಿಲ್ಲಾ ಕೌಶಲ್ಯ ಸಮಿತಿಯನ್ನು ಬಲಪಡಿಸಲು ಮತ್ತು ಉತ್ತಮ ಮಾರುಕಟ್ಟೆ ಸಂಪರ್ಕವನ್ನು ಸೃಷ್ಟಿಸಲು ಹಾಗು ಅಲ್ಪಾವಧಿಯ ತರಬೇತಿಯನ್ನು ಗುಣಾತ್ಮಕವಾಗಿ ಸುಧಾರಿಸುವ ಉಪಕ್ರಮ ಇದಾಗಿದೆ.

ಪರಿಶ್ರಮ 2

ಕೈಗಾರಿಕಾ ತರಬೇತಿ ಸಂಸ್ಥೆಗಳು (ಐಟಿಐಗಳು), ಅಪ್ರೆಂಟಿಸ್ಶಿಪ್‌ಗಳ ಮೂಲಕ ನೀಡುವ ಕೌಶಲ್ಯ ತರಬೇತಿಯ ಪ್ರಸ್ತುತತೆ ಮತ್ತು ದಕ್ಷತೆಯನ್ನು ಸುಧಾರಿಸುತ್ತದೆ.

ಫೆಲೋಶಿಪ್ 3

ರಾಜ್ಯದ ಭಾಗವಹಿಸುವಿಕೆಯನ್ನು ಹೆಚ್ಚಿಸಲು, ಕೌಶಲ್ಯಾಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಸಚಿವಾಲಯವು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸಹಯೋಗದೊಂದಿಗೆ ಜಿಲ್ಲಾ ಮಟ್ಟದಲ್ಲಿ ನುರಿತ ಉದ್ಯೋಗಿಗಳನ್ನು ಸೃಷ್ಟಿಸಲು ಮಹಾತ್ಮ ಗಾಂಧಿ ರಾಷ್ಟ್ರೀಯ ಫೆಲೋಶಿಪ್ ಅನ್ನು ಪ್ರಾರಂಭಿಸಿದೆ.

> "ದೇಶದ ಯುವಕರು ತಂತ್ರಜ್ಞಾನದ ಮುಖಾಂತರ ನಿರ್ದಿಷ್ಟವಾಗಿ ಹ್ಯಾಕಥಾನ್‌ಗಳ ಮೂಲಕ ಸಾವಿರಾರು ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುತ್ತಿದ್ದಾರೆ ಮತ್ತು ಒದಗಿಸುತ್ತಿದ್ದಾರೆ. ಇಂದು, ದೇಶದ ಯುವಕರು ಹೊಸ ಉದ್ಯೋಗಗಳನ್ನು ಕೈಗೊಳ್ಳುತ್ತಿದ್ದಾರೆ, ತಮ್ಮದೇ ಆದ ಕೆಲಸ ಮಾಡುತ್ತಿದ್ದಾರೆ, ಧೈರ್ಯವಾಗಿ ಹೊಸ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಮತ್ತು ಬದಲಾಗುತ್ತಿರುವ ಉದ್ಯೋಗಾವಕಾಶಗಳಿಗೆ ಪ್ರತಿಕ್ರಿಯೆಯಾಗಿ ಇತರರಿಗೆ ಕೆಲಸವನ್ನು ನೀಡುತ್ತಿದ್ದಾರೆ."
>
> ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಮತ್ತು ವಿನೂತನ ಉಪಕ್ರಮಗಳನ್ನು ಸಹ ಘೋಷಿಸಲಾಗಿದೆ. ಪದವಿ ಕೋರ್ಸ್‌ಗಳಲ್ಲಿ ಅಪ್ರೆಂಟಿಸ್‌ಷಿಪ್‌ಗಳು, ಸ್ಥಳೀಯ ಸಂಸ್ಥೆಗಳಲ್ಲಿ ಇಂಟರ್ನ್‌ಷಿಪ್‌ಗಳು ಮತ್ತು ಆನ್‌ಲೈನ್ ಪದವಿ ಕಾರ್ಯಕ್ರಮಗಳ ಆಯೋಜನೆಯು ಕೆಲವು ಉದಾಹರಣೆಗಳಾಗಿವೆ. ವಿದೇಶದಲ್ಲಿ ಕೆಲಸ ಮಾಡಲು ಇಚ್ಛಿಸುವ ಯುವ ಭಾರತೀಯರಿಗಾಗಿ ಬ್ರಿಡ್ಜ್ ಕೋರ್ಸ್‌ಗಳನ್ನು ಸಹ ಆಯೋಜಿಸಲಾಗುತ್ತಿದೆ.

ಇಂದು, ದೇಶದ ಯುವಕರು ಹೊಸ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ, ಸ್ಟಾರ್ಟ್‌ಅಪ್‌ಗಳು ಯುನಿಕಾರ್ನ್‌ಗಳಾಗುತ್ತಿವೆ ಮತ್ತು ಭಾರತವು ನಾವೀನ್ಯತೆ ಮತ್ತು ಇನ್ಕ್ಯುಬೇಟರ್‌ಗಳ ಮೂಲಕ ಹೊಸ ಅಲೆಯ ಸ್ಟಾರ್ಟ್‌ಅಪ್‌ಗಳನ್ನು ಪ್ರಾರಂಭಿಸುತ್ತಿದೆ. ಸರ್ಕಾರವು ಕೌಶಲ್ಯಕ್ಕೆ ಒತ್ತು ನೀಡುವುದರಿಂದ, ಪೇಟೆಂಟ್‌ಗಳ ಸಂಖ್ಯೆಯು ವರ್ಷಕ್ಕೆ 15,000 ಕ್ಕಿಂತ ಹೆಚ್ಚಾಗಿದೆ, ಇದು 2014 ಕ್ಕಿಂತ ಮೊದಲು ಸರಾಸರಿ 4,000 ಆಗಿತ್ತು.

ಆದಾಗ್ಯೂ, ವೇಗವಾಗಿ ಬದಲಾಗುತ್ತಿರುವ ಇಂದಿನ ಜಗತ್ತಿನಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಲಕ್ಷಾಂತರ ಕೌಶಲ್ಯವಿರುವ ಕೆಲಸಗಾರರ ಅಗತ್ಯವಿದೆ. ವಿಶೇಷವಾಗಿ ಆರೋಗ್ಯ ರಕ್ಷಣೆಯಲ್ಲಿ, ಅಗಾಧ ಸಾಮರ್ಥ್ಯವಿದೆ. ಇದನ್ನು ಗುರುತಿಸಿ, ಕೌಶಲ್ಯ ಅಭಿವೃದ್ಧಿ ಸಚಿವಾಲಯವು ಪ್ರಪಂಚದಾದ್ಯಂತ ಸೃಷ್ಟಿಯಾಗುತ್ತಿರುವ ಅವಕಾಶಗಳನ್ನು ಮ್ಯಾಪಿಂಗ್ ಮಾಡಲು ಪ್ರಾರಂಭಿಸಿದೆ. ಇದರಿಂದ ಭಾರತದ ಯುವಕರು ಇತರ ದೇಶಗಳ ಅಗತ್ಯಗಳ ಬಗ್ಗೆ ನಿಖರವಾದ ಮತ್ತು ಇತ್ತೀಚಿನ ಮಾಹಿತಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಯಾವ ದೇಶದಲ್ಲಿ ಹೊಸ ಆರೋಗ್ಯ ರಕ್ಷಣೆಯ ಅವಕಾಶಗಳು ಹೊರಹೊಮ್ಮುತ್ತಿವೆ? ಯಾವ ದೇಶ ಮತ್ತು ಸೇವಾ ವಲಯದಲ್ಲಿ ಏನು ಅಗತ್ಯಗಳಿವೆ? ಎಂಬ ಬಗ್ಗೆ ಭಾರತದ ಯುವಕರು ಈಗ ಹೆಚ್ಚು ವೇಗವಾಗಿ ಮಾಹಿತಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಕೌಶಲ್ಯದ ಮ್ಯಾಪಿಂಗ್ನಿಂದಾಗಿ ಅಂತಹ ಮಾಹಿತಿಯನ್ನು ಒದಗಿಸುವ ಕಾರ್ಯವು ಈಗ ಸುಲಭವಾಗಿದೆ. ಕಾರ್ಮಿಕರ ಕೌಶಲ್ಯ ಮ್ಯಾಪಿಂಗ್‌ಗಾಗಿ ಪೋರ್ಟಲ್ ಅನ್ನು ಸಹ ದೇಶದಲ್ಲಿ ಸ್ಥಾಪಿಸಲಾಗಿದೆ. ಕುಶಲ ಕಾರ್ಮಿಕರ ಮ್ಯಾಪಿಂಗ್ನಲ್ಲಿ ಈ ಪೋರ್ಟಲ್ ನಿರ್ಣಾಯಕವಾಗಿರುತ್ತದೆ. ಇದರ ಪರಿಣಾಮವಾಗಿ ಉದ್ಯೋಗದಾತರು ಒಂದೇ ಕ್ಲಿಕ್‌ನಲ್ಲಿ ಕುಶಲ ಕಾರ್ಮಿಕರನ್ನು ಸಂಪರ್ಕಿಸಲು ಸಾಧ್ಯವಾಗುತ್ತದೆ. ಇದು ಕಾರ್ಮಿಕರಿಗೆ, ವಿಶೇಷವಾಗಿ ಇತ್ತೀಚೆಗೆ ನಗರಗಳಿಂದ ಹಳ್ಳಿಗಳಿಗೆ ಸ್ಥಳಾಂತರಗೊಂಡವರಿಗೆ ಪ್ರಯೋಜನವನ್ನು ನೀಡುತ್ತದೆ.

ಸ್ಕಿಲ್ ಇಂಡಿಯಾ ಮಿಷನ್ ಈಗ ಪ್ರತಿ ವರ್ಷ ಲಕ್ಷಾಂತರ ಯುವಕರಿಗೆ ಇಂದಿನ ಅಗತ್ಯಗಳಿಗಾಗಿ ತರಬೇತಿ ನೀಡುವ

ಎಐಸಿಟಿಇ ಜೊತೆಗೆ ಡಿಜಿಟಲ್ ಕೌಶಲ್ಯ ನಿರ್ಮಾಣ

- ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಸಚಿವಾಲಯವು ಕ್ಲೌಡ್ ಕಂಪ್ಯೂಟಿಂಗ್, ಬೃಹತ್ ಡೇಟಾ, ಡೇಟಾ ಅನಲಿಟಿಕ್ಸ್, ಸೈಬರ್ ಭದ್ರತೆ, ಬ್ಲಾಕ್‌ಚೈನ್, ಡ್ರೋನ್‌ಗಳು ಮತ್ತು ರೊಬೊಟಿಕ್ಸ್ ನಂತಹ ಭವಿಷ್ಯದ ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಸಹಯೋಗದೊಂದಿಗೆ ಡಿಜಿಟಲ್ ಕೌಶಲ್ಯ ನಿರ್ಮಾಣ ಕಾರ್ಯಕ್ರಮವನ್ನು ಪ್ರಾರಂಭಿಸಿದೆ.
- ಮೂರು ಮತ್ತು ಆರು ತಿಂಗಳ ಕೋರ್ಸ್‌ಗಳನ್ನು ನಡೆಸುವ ಮೂಲಕ 1.10 ಕೋಟಿ ವಿದ್ಯಾರ್ಥಿಗಳಿಗೆ ಇದರ ಅಡಿಯಲ್ಲಿ ತರಬೇತಿ ನೀಡಲಾಗುವುದು.
- ತಾಂತ್ರಿಕ ತರಬೇತಿಯ ಜೊತೆಗೆ ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ನೀಡಲಾಗುವುದು. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ 10 ಲಕ್ಷ, ರೈಲ್ವೆಯಲ್ಲಿ 5 ಲಕ್ಷ, ಸಹಕಾರ ಸಚಿವಾಲಯದಲ್ಲಿ 1 ಲಕ್ಷ ಹಾಗು ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವಾಲಯದಲ್ಲಿ 1 ಲಕ್ಷ ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಅವಕಾಶಗಳು ಲಭ್ಯವಾಗಲಿವೆ.

"ಪ್ರಧಾನಿ ನರೇಂದ್ರ ಮೋದಿ ಅವರು ಭಾರತವನ್ನು ವಿಶ್ವದ ಕೌಶಲ್ಯ ಅಭಿವೃದ್ಧಿ ರಾಜಧಾನಿಯಾಗಿ ಮಾಡಲು ಬಯಸಿದ್ದಾರೆ. ಪ್ರಪಂಚವು ಅಭೂತಪೂರ್ವ ಬದಲಾವಣೆಗಳಿಗೆ ಒಳಗಾಗುತ್ತಿದೆ ಮತ್ತು ಕೌಶಲ್ಯ, ಮರು-ಕೌಶಲ್ಯ ಮತ್ತು ಉನ್ನತ ಕೌಶಲ್ಯವು ಇಂದಿನ ಅವಶ್ಯಕತೆಯಾಗಿದೆ. ಕೌಶಲ್ಯಾಭಿವೃದ್ಧಿಯನ್ನು ಸಾಮೂಹಿಕ ಆಂದೋಲನವನ್ನಾಗಿ ಮಾಡಬೇಕು. ಭವಿಷ್ಯಕ್ಕಾಗಿ ಸುದೃಢ ಕಾರ್ಯಪಡೆಯನ್ನು ಸಿದ್ಧಪಡಿಸುವಲ್ಲಿ ಸರ್ಕಾರವು ಪ್ರೋತ್ಸಾಹಕವಾಗಿ ಕಾರ್ಯನಿರ್ವಹಿಸುತ್ತಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿಯ ನಡುವೆ ಹೆಚ್ಚಿನ ಸಮನ್ವಯವನ್ನು ಸೃಷ್ಟಿಸುವ ಪ್ರಯತ್ನಗಳು ಈ ದಿಕ್ಕಿನಲ್ಲಿ ಪ್ರಮುಖ ಹೆಜ್ಜೆಯಾಗಿದೆ.

- ಧರ್ಮೇಂದ್ರ ಪ್ರಧಾನ್

ಕೇಂದ್ರ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವರು

'ಯುವ ಕೌಶಲ್': ಯುನಿಸೆಫ್‌ನೊಂದಿಗೆ ಪಾಸ್ಪೋರ್ಟ್-ಟು ಅರ್ನಿಂಗ್ ಕಾರ್ಯಕ್ರಮ

ಯುನಿಸೆಫ್ ಮತ್ತು ಮೈಕ್ರೋಸಾಫ್ಟ್ ಯುವಾ ಕೌಶಲ್, ಪಾಸ್ಪೋರ್ಟ್-ಟು ಅರ್ನಿಂಗ್ (ಪಿ2ಇ) ಕಾರ್ಯಕ್ರಮವನ್ನು ಉದ್ಯಮಶೀಲತೆ, ಉದ್ಯೋಗಶೀಲತೆ ಮತ್ತು ಸಾಮಾಜಿಕ ಕೌಶಲ್ಯಗಳಲ್ಲಿ ಯುವಕರನ್ನು ಸಬಲೀಕರಣಗೊಳಿಸಲು ಪ್ರಾರಂಭಿಸಿವೆ. ಈ ಇ ಕಲಿಕೆಯು ಯುವಕರಿಗೆ ಉಚಿತ ಉದ್ಯೋಗ-ಸಂಬಂಧಿತ ಕೌಶಲ್ಯಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ ಮತ್ತು ಉದ್ಯಮಶೀಲತೆ, ಉದ್ಯೋಗ ಮತ್ತು ಸಾಮಾಜಿಕ ಪ್ರಭಾವಕ್ಕೆ ಅವಕಾಶಗಳನ್ನು ಒದಗಿಸುತ್ತದೆ. ಪಿ2ಇ ಯನ್ನು ಜಾರಿಗೆ ತಂದ ಮೊದಲ ದೇಶ ಭಾರತವಾಗಿದೆ.

ಮೂಲಕ ಸಹಾಯ ಮಾಡುತ್ತಿದೆ. ದೇಶದಲ್ಲಿ ಡಿಜಿಟಲ್ ಕೌಶಲ್ಯ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಮತ್ತು ಉದ್ಯಮದ ಬೇಡಿಕೆಗೆ ಅನುಗುಣವಾಗಿ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ವಿಶೇಷ ಒತ್ತು ನೀಡಲಾಗಿದೆ. ಪ್ರತಿಯೊಬ್ಬ ನಾಗರಿಕನು ಕೌಶಲ್ಯವನ್ನು ಗೌರವಿಸಬೇಕು ಏಕೆಂದರೆ ಯಾವುದೇ ಯಶಸ್ವಿ ವ್ಯಕ್ತಿ ತನ್ನ ಕೌಶಲ್ಯಗಳನ್ನು ತೀಕ್ಷ್ಣಗೊಳಿಸುವ ಅವಕಾಶವನ್ನು ಕಳೆದುಕೊಳ್ಳುವುದಿಲ್ಲ. ಕೌಶಲವೊಂದೇ ಜೀವನ ಮತ್ತು ಹಣ ಗಳಿಸುವ ಮಾರ್ಗವಲ್ಲ. ನಾವು ಬದುಕಲು, ಉತ್ಸಾಹ ಮತ್ತು ದೃಢಚಿತ್ತರಾಗಿರಬೇಕು; ನಂತರ ಕೌಶಲ್ಯವು ನಮ್ಮ ಪ್ರೇರಕ ಶಕ್ತಿಯಾಗುತ್ತದೆ ಮತ್ತು ಹೊಸ ಸ್ಫೂರ್ತಿಯೊಂದಿಗೆ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತದೆ. ನೀವು ಚಿಕ್ಕವರಾಗಿರಲಿ ಅಥವಾ ವಯಸ್ಸಾದವರಾಗಿರಲಿ, ಹೊಸ ಕೌಶಲ್ಯಗಳನ್ನು ಕಲಿಯುವುದು ನಿಮ್ಮ ಜೀವನದ ಉತ್ಸಾಹವನ್ನು ಜೀವಂತವಾಗಿರಿಸುತ್ತದೆ.

ನಿಸ್ಸಂಶಯವಾಗಿ, ನವ ಭಾರತವು ತನಗಾಗಿ ಹೊಸ ಮಾರ್ಗವನ್ನು ಆರಿಸಿಕೊಂಡಿದೆ ಮತ್ತು ಅದು ಮುಂದುವರಿಯುತ್ತದೆ. ಏಕೆಂದರೆ ಅದು ಅಮೃತ ಕಾಲದ ಸಂಕಲ್ಪಕ್ಕೆ ಅನುಗುಣವಾಗಿ, ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಯ ನೀತಿಗಳನ್ನು ಜಾರಿಗೆ ತರಲು ಪ್ರಾರಂಭಿಸಿದೆ. ■

ಪರಿಸರಕ್ಕಾಗಿ ಜೀವನಶೈಲಿ

ಎಲ್.ಐ.ಎಫ್.ಇ.

ಪರಿಸರ ಸಂರಕ್ಷಣೆ: ಉದಾಹರಣೆಯಾಗಿ ಮುನ್ನಡೆಯುತ್ತಿರುವ ಭಾರತ

ಕಳೆದ ಕೆಲವು ವರ್ಷಗಳಲ್ಲಿ, ಪರಿಸರ ಸಂರಕ್ಷಣೆ ಕುರಿತಂತೆ ಭಾರತದ ಬದ್ಧತೆಯನ್ನು ಜಗತ್ತು ಕಂಡಿದೆ. ಕಳೆದ ವರ್ಷ ಗ್ಲಾಸ್ಗೋದಲ್ಲಿ ನಡೆದ ಕಾಪ್26 ಸಭೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನೀಡಿದ ಎಲ್.ಐ.ಎಫ್.ಇ ಲೈಫ್ ಸ್ಟೈಲ್ ಫಾರ್ ಎನ್ವಿರಾನ್ಮೆಂಟ್ (ಪರಿಸರಕ್ಕಾಗಿ ಜೀವನಶೈಲಿ) ಮಂತ್ರವನ್ನು ವಿಶ್ವ ಸಮುದಾಯವು ಶ್ಲಾಘಿಸಿದ್ದು, ಭಾರತದ ಪ್ರಯತ್ನಗಳನ್ನು ಎತ್ತಿ ತೋರಿಸುತ್ತದೆ. ಎಲ್.ಐ.ಎಫ್.ಇ.ಯ ಮಂತ್ರವು ಈಗ ಜಾಗತಿಕ ಆಂದೋಲನವಾಗಿ ಮಾರ್ಪಡುತ್ತಿದೆ. ಜೂನ್ 5ರಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು "ಎಲ್.ಐ.ಎಫ್.ಇ ಆಂದೋಲನ" ಎಂಬ ಜಾಗತಿಕ ಉಪಕ್ರಮಕ್ಕೆ ಚಾಲನೆ ನೀಡಿದರು ಮತ್ತು ಅದೇ ಸಮಯದಲ್ಲಿ ಇಶಾ ಪ್ರತಿಷ್ಠಾನ ಆಯೋಜಿಸಿದ್ದ 'ಮಿಟ್ಟಿ ಬಚಾವೋ' ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣೆಗೆ ಭಾರತದ ಪ್ರಮುಖ ಕೊಡುಗೆಯನ್ನು ಒತ್ತಿ ಹೇಳಿದರು.

ಪ್ರಕೃತಿ, ಮಣ್ಣು ಮತ್ತು ಪರಿಸರವು ಭಾರತಕ್ಕೆ ಕೇವಲ ಪದಗಳಷ್ಟೇ ಆಗಿಲ್ಲ, ಜೊತೆಗೆ ಸಂಸ್ಕೃತಿ ಮತ್ತು ಧರ್ಮಕ್ಕೆ ಸಂಬಂಧಿಸಿದ ದೈವತ್ವದ ಅಂಶವನ್ನೂ ಹೋಲುತ್ತವೆ, ಇದು ಅನಾದಿಕಾಲದಿಂದಲೂ ನಮ್ಮ ದೇವತೆಗಳು ಮತ್ತು ನಮ್ಮ ಪೂರ್ವಜರೊಂದಿಗೆ ಸಂಬಂಧ ಹೊಂದಿದೆ. ಭಾರತದ ಸನ್ನಿವೇಶದಲ್ಲಿ, ಯುಧಿಷ್ಠಿರ ಮತ್ತು ದುರ್ಯೋಧನರ ನಡುವಿನ ಭೇಟಿಯ ಪ್ರಕರಣದಲ್ಲಿ ಒಂದು ಅಂಶವಿದೆ. ದುರ್ಯೋಧನನ ಬಗ್ಗೆ ಹೀಗೆ ಹೇಳಲಾಗಿದೆ: **"जानाम धर्मं न च में प्रवृत्ति।।"**

ಅದರ ಅರ್ಥವೇನೆಂದರೆ- ನನಗೂ ಧರ್ಮ ತಿಳಿದಿದೆ, ಆದರೆ ನನಗೆ ಅದರ ಬಗ್ಗೆ ಒಲವಿಲ್ಲ, ನನಗೆ ಸಾಧ್ಯವಿಲ್ಲ, ಸತ್ಯವೇನೆಂದು ನನಗೆ ತಿಳಿದಿದೆ, ಆದರೆ ನಾನು ಆ ಮಾರ್ಗದಲ್ಲಿ ನಡೆಯಲು ಸಾಧ್ಯವಿಲ್ಲ. ಅಂತಹ ಪ್ರವೃತ್ತಿಯು ಸಮಾಜವನ್ನು ಆಕ್ರಮಿಸಿದಾಗ ಸಾಮೂಹಿಕ ಅಭಿಯಾನಗಳ ಮೂಲಕ ಪರಿಹಾರಗಳನ್ನು ಕಂಡುಹಿಡಿಯಬೇಕಾಗುತ್ತದೆ. ಇಂದು ಜಗತ್ತು, ಪರಿಸರದ ಅಸಮತೋಲನದ ಗಂಭೀರ ಬೆದರಿಕೆಯನ್ನು ಎದುರಿಸುತ್ತಿದೆ ಮತ್ತು 'ಪರಿಸರ ಸ್ನೇಹಿ ಜೀವನಶೈಲಿ'ಯನ್ನು ಅಳವಡಿಸಿಕೊಳ್ಳುವ ಮೂಲಕ ನಾವೆಲ್ಲರೂ ಈ ಬಿಕ್ಕಟ್ಟನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕಿದೆ, ಆದ್ದರಿಂದ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಈ ಮಂತ್ರವು ಜಗತ್ತಿಗೆ ಹೊಸ ಮಾರ್ಗವನ್ನು ತೋರಿಸಿದೆ. ಈ ದಿಸೆಯಲ್ಲಿ ಭಾರತವು ಪ್ರಮುಖ ಜಾಗತಿಕ ಉಪಕ್ರಮಗಳನ್ನು ಕೈಗೊಂಡಿದ್ದು, ವಿಶ್ವಸಂಸ್ಥೆಯ ಹಲವಾರು ಸಂಸ್ಥೆಗಳ ಸಹಭಾಗಿತ್ವದಲ್ಲಿ ಎಲ್.ಐ.ಎಫ್.ಇ ಎಂಬ ಆಂದೋಲನವನ್ನು ಪ್ರಾರಂಭಿಸಲಾಗಿದೆ.

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಜೂನ್ 5 ರಂದು ವಿಶ್ವ ಪರಿಸರ ದಿನದ ಸಂದರ್ಭದಲ್ಲಿ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ 'ಪರಿಸರಾತ್ಮಕ ಸೂಕ್ತ ಜೀವನಶೈಲಿ ಆಂದೋಲನ'ಕ್ಕೆ ಅಂದರೆ ಎಲ್.ಐ.ಎಫ್.ಇ. ಗೆ ಚಾಲನೆ ನೀಡಿದರು. ಅದೇ ವೇಳೆ, 'ಎಲ್.ಐ.ಎಫ್.ಇ. ಗ್ಲೋಬಲ್ ಕಾಲ್ ಫಾರ್ ಐಡಿಯಾಸ್ ಅಂಡ್ ಪೇಪರ್ಸ್'

ಪರಿಸರ ಸಂರಕ್ಷಣೆಗಾಗಿ ಭಾರತ ಕೈಗೊಂಡ ಪ್ರಮುಖ ಕ್ರಮಗಳು

- ಪಳೆಯುಳಿಕೆಯೇತರ ಇಂಧನ ಮೂಲಗಳಿಂದ ಸ್ಥಾಪಿತ ಸಾಮರ್ಥ್ಯದ ಶೇ.40ರಷ್ಟನ್ನು ಸಾಧಿಸುವ ಬದ್ಧತೆಯನ್ನು ಭಾರತ, ನಿಗದಿತ ಗಡುವಿಗಿಂತ 9 ವರ್ಷ ಮುಂಚಿತವಾಗಿ ಸಾಕಾರಗೊಳಿಸಿದೆ.
- ಭಾರತವು ಕಾಪ್ 21ರಲ್ಲಿ ನಿಗದಿಪಡಿಸಿದ ಗುರಿಗಳನ್ನು ನಿಗದಿತ ಸಮಯಕ್ಕಿಂತ 9 ವರ್ಷ ಮುಂಚಿತವಾಗಿದೆ ಸಾಧಿಸಿದೆ. 2014 ರಿಂದ, ಸೌರಶಕ್ತಿಯ ಸ್ಥಾಪಿತ ಸಾಮರ್ಥ್ಯವು ಶೇಕಡಾ 1900 ರಷ್ಟು ಹೆಚ್ಚಾಗಿದೆ. ವನ್ಯಜೀವಿ ಸಂರಕ್ಷಿತ ಪ್ರದೇಶಗಳ ಒಟ್ಟು ಸಂಖ್ಯೆಯು ಶೇ.32ರಷ್ಟು ಹೆಚ್ಚಾಗಿದೆ.



- ನವೆಂಬರ್ 2022 ರ ಗುರಿಗಿಂತ 5 ತಿಂಗಳು ಮೊದಲೇ ಪೆಟ್ರೋಲ್ ನಲ್ಲಿ ಶೇ.10ರಷ್ಟು ಎಥೆನಾಲ್ ಮಿಶ್ರಣದ ಗುರಿಯನ್ನು ಸಾಧಿಸಲಾಗಿದೆ. ಪರಿಣಾಮವಾಗಿ, ಕಚ್ಚಾ ತೈಲ ಆಮದು 5.5 ಶತಕೋಟಿ ಡಾಲರ್ ಗಿಂತಲೂ ಹೆಚ್ಚು ಕಡಿಮೆಯಾಗಿದ್ದು, ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆಯು 2.7 ದಶಲಕ್ಷ ಟನ್ ಗಳಷ್ಟು ತಗ್ಗಿದೆ ಮತ್ತು ರೈತರ ಆದಾಯವು ಸುಮಾರು 5.5 ಶತಕೋಟಿ ಡಾಲರ್ ಗಳಷ್ಟು ಹೆಚ್ಚಾಗಿದೆ.

288% ಗಂಗಾ ನದಿಯ ಪುನಶ್ಚೇತನಕ್ಕಾಗಿ ಬಜೆಟ್‌ನಲ್ಲಿ ಹೆಚ್ಚಳವಾಗಿದೆ. ಅತಿದೊಡ್ಡ ಸೌರ ಉದ್ಯಾನ ರಾಜಸ್ಥಾನದ ಭಾಡ್ಲಾದಲ್ಲಿ ಪ್ರಾರಂಭವಾಗಿದೆ.

2010 ರಿಂದ 2020 ರ ಅವಧಿಯಲ್ಲಿ ಏಷ್ಯಾದ ಸಿಂಹಗಳ ಸಂಖ್ಯೆ ಶೇ.64ರಷ್ಟು ಹೆಚ್ಚಾಗಿದೆ. 2014 ರಿಂದ 2018 ರವರೆಗೆ ಹುಲಿಗಳ ಸಂಖ್ಯೆಯಲ್ಲಿ ಶೇ.33ರಷ್ಟು ಹೆಚ್ಚಳವಾಗಿದೆ.

(ಜಾಗತಿಕ ಕಲ್ಪನೆ ಮತ್ತು ಪ್ರಬಂಧಗಳಿಗೆ ಕರೆ) ಅನ್ನು ಪ್ರಾರಂಭಿಸಲಾಯಿತು, ಇದು ವಿಶ್ವದಾದ್ಯಂತದ ವ್ಯಕ್ತಿಗಳು, ವಿಶ್ವವಿದ್ಯಾಲಯಗಳು, ಚಿಂತಕರ ಚಾವಡಿಗಳು, ಲಾಭರಹಿತ ಸಂಸ್ಥೆಗಳು ಮತ್ತು ಇತರರಿಂದ ಅತ್ಯುತ್ತಮ ಹವಾಮಾನ- ಸ್ನೇಹಿ ಸ್ವಭಾವದ ಬದಲಾವಣೆ ಪರಿಹಾರ ಸೂಚಿಸುವಂತೆ ಆಹ್ವಾನಿಸಿದ್ದು, ಇದು ವಿಸ್ತರಣೆಯಾಗಲೂಬಹುದು.

ವಿಶ್ವಸಂಸ್ಥೆ, ವಿಶ್ವ ಸಂಪನ್ಮೂಲ ಸಂಸ್ಥೆ, ಸಾಮಾಜಿಕ ಮತ್ತು ನಡೆವಳಿಕೆಯಲ್ಲಿನ ಬದಲಾವಣೆ ಕುರಿತ ಕೇಂದ್ರ (ಸಿಎಸ್.ಬಿಸಿ) ಹಾಗು ಬಿಲ್ ಮತ್ತು ಮೆಲಿಂಡಾ ಗೇಟ್ಸ್ ಪ್ರತಿಷ್ಠಾನದ ಸಹಭಾಗಿತ್ವದಲ್ಲಿ ಭಾರತ ಸರ್ಕಾರವು ಈ ಅಭಿಯಾನವನ್ನು ಪ್ರಾರಂಭಿಸಿದೆ. 'ಲೈಫ್ ಆಂದೋಲನ'ವನ್ನು ಪರಿಚಯಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಪರಿಸರ ಸಂರಕ್ಷಣೆ ಮತ್ತು ಅದರ ಸಾಧನೆಗಳತ್ತ ಭಾರತದ ಪ್ರಮುಖ ಕ್ರಮಗಳನ್ನು ಒತ್ತಿಹೇಳಿದ್ದಲ್ಲದೆ, ನಾವೀನ್ಯತೆ ಮತ್ತು ತಂತ್ರಜ್ಞಾನದೊಂದಿಗೆ ಮರುಬಳಕೆ, ಕಡಿಮೆ ಬಳಕೆ ಮತ್ತು ಪುನರ್ಬಳಕೆಯ ತತ್ವಗಳಿಗೆ ಒತ್ತು ನೀಡಿದರು. "ಉತ್ತಮ ಪರಿಸರ ಮತ್ತು ಜಾಗತಿಕ ಯೋಗಕ್ಷೇಮಕ್ಕಾಗಿ ಯಾವುದೇ ಪ್ರಯತ್ನವನ್ನು ಬೆಂಬಲಿಸಲು ಭಾರತ ಸಿದ್ಧವಾಗಿದೆ. ನಮ್ಮ ಹಿಂದಿನ ಸಾಧನೆಗಳೇ ಸ್ವತಃ ಮಾತನಾಡುತ್ತದೆ. ಅಂತಾರಾಷ್ಟ್ರೀಯ ಸೌರ ಸಹಯೋಗ, ಒಂದು ಸೂರ್ಯ-ಒಂದು ವಿಶ್ವ-ಒಂದು ಗ್ರಿಡ್ ಮೇಲೆ ಗಮನ ಕೇಂದ್ರೀಕರಿಸಲಾಗಿದೆ ಮತ್ತು ವಿಪತ್ತು ತಾಳಿಕೊಳ್ಳುವ ಮೂಲಸೌಕರ್ಯಕ್ಕಾಗಿ ಒಕ್ಕೂಟದಂತಹ ಉಪಕ್ರಮಗಳು ಪ್ರಮುಖ ಕೊಡುಗೆಗಳನ್ನು ನೀಡುತ್ತವೆ. ಈ ಪ್ರಯತ್ನಗಳನ್ನು ಜಗತ್ತು ಬೆಂಬಲಿಸುತ್ತಿದೆ ಎಂದು ನಮಗೆ ಸಂತೋಷವಾಗಿದೆ. ಲೈಫ್ (LIFE) ಅಭಿಯಾನವು ನಮ್ಮನ್ನು ಮತ್ತಷ್ಟು ಒಗ್ಗೂಡಿಸುತ್ತದೆ ಮತ್ತು ಮುಂದಿನ ಪೀಳಿಗೆಗೆ ಸುರಕ್ಷಿತ ಭವಿಷ್ಯವನ್ನು ಖಾತ್ರಿಪಡಿಸುತ್ತದೆ ಎಂಬ ವಿಶ್ವಾಸವಿದೆ ನನಗಿದೆ. ಈ ಪಯಣದ ಭಾಗವಾಗಲು ನಾನು ಮತ್ತೊಮ್ಮೆ ಜಗತ್ತನ್ನು ಆಹ್ವಾನಿಸುತ್ತೇನೆ ಎಂದು ತಿಳಿಸಿದ್ದರು. ■

'ಮಣ್ಣನ್ನು ಉಳಿಸಿ' ಕಾರ್ಯಕ್ರಮ:
ಮಣ್ಣಿನ ಪುನಶ್ಚೇತನಕ್ಕೆ ಉಪಕ್ರಮಗಳು

ಕಳೆದ ಕೆಲವು ವರ್ಷಗಳಲ್ಲಿ ಮಣ್ಣಿನ ಆರೋಗ್ಯ ಹಾಳಾಗುತ್ತಿರುವ ಬಗ್ಗೆ ಪ್ರಪಂಚದಾದ್ಯಂತ ಕಳವಳ ವ್ಯಕ್ತವಾಗುತ್ತಿವೆ. ತಜ್ಞರ ಪ್ರಕಾರ, ಕಳೆದ 25 ವರ್ಷಗಳಲ್ಲಿ, ವಿಶ್ವದ ಫಲವತ್ತಾದ ಭೂಮಿಯ ಪೈಕಿ ಶೇಕಡ 10ರಷ್ಟು ಬಂಜರು ಭೂಮಿಯಾಗಿದೆ. ಇದಕ್ಕೆ ಕಾರಣವೆಂದರೆ ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಅತಿಯಾದ ಬಳಕೆ ಮತ್ತು ಜಾಗತಿಕ ತಾಪಮಾನ ಏರಿಕೆಯಿಂದಾಗಿ ಮಣ್ಣಿನ ತೇವಾಂಶ ಮತ್ತು ಪೋಷಕಾಂಶಗಳ ನಷ್ಟವಾಗಿದೆ. ಈ ಕುರಿತಂತೆ ವೃದ್ಧಿಸುತ್ತಿರುವ ಕಾಳಜಿಯ ನಡುವೆ, ಭಾರತವು ನೈಸರ್ಗಿಕ ಕೃಷಿ, ಮಣ್ಣಿನ ಆರೋಗ್ಯ ಕಾರ್ಡ್, ಬೇವು ಲೇಪಿತ ಯೂರಿಯಾ, ಸೂಕ್ಷ್ಮ ನೀರಾವರಿ, ಮಳೆಯ ನೀರನ್ನು ಹಿಡಿದು ಸಂಗ್ರಹಿಸುವುದು, ನದಿ ಸಂರಕ್ಷಣೆ ಮತ್ತು ಅಟಲ್ ಭೂಜಲ್ ಅಭಿಯಾನದಂತಹ ಪ್ರಮುಖ ಉಪಕ್ರಮಗಳೊಂದಿಗೆ ಮುಂದುವರಿಯುತ್ತಿದೆ. ಜೂನ್ 5 ರಂದು ದೆಹಲಿಯ ವಿಜ್ಞಾನ ಭವನದಲ್ಲಿ ಇಶಾ ಪ್ರತಿಷ್ಠಾನ ಆಯೋಜಿಸಿದ್ದ 'ಮಿಟ್ಟಿ ಬಚಾವೋ' ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮಣ್ಣನ್ನು ಉಳಿಸುವ ನಿಟ್ಟಿನಲ್ಲಿ ಭಾರತದ 5 ಪ್ರಮುಖ ಪ್ರಯತ್ನಗಳನ್ನು ಒತ್ತಿ ಹೇಳಿದರು. "ನಾವು ಐದು ಪ್ರಮುಖ ವಿಷಯಗಳ ಮೇಲೆ ಗಮನ ಹರಿಸಿದ್ದೇವೆ - ಮೊದಲನೆಯದಾಗಿ - ಮಣ್ಣನ್ನು ರಾಸಾಯನಿಕ ಮುಕ್ತಗೊಳಿಸುವುದು ಹೇಗೆ ಎಂಬುದು. ಎರಡನೆಯದಾಗಿ- ನೀವು ಮಣ್ಣಿನ ಸಾವಯವ ದ್ರವ್ಯ ಎಂದು ತಾಂತ್ರಿಕ ಭಾಷೆಯಲ್ಲಿ ಕರೆಯುವ ಮಣ್ಣಿನಲ್ಲಿ ವಾಸಿಸುವ ಜೀವಿಗಳನ್ನು ಉಳಿಸುವುದು ಹೇಗೆ? ಮತ್ತು ಮೂರನೆಯದಾಗಿ - ಮಣ್ಣಿನ ತೇವಾಂಶವನ್ನು ಕಾಪಾಡುವುದು ಮತ್ತು ನೀರಿನ ಲಭ್ಯತೆಯನ್ನು ಹೆಚ್ಚಿಸುವುದು ಹೇಗೆ? ನಾಲ್ಕನೆಯದಾಗಿ, ಅಂತರ್ಜಲದ ಕೊರತೆಯಿಂದಾಗಿ ಮಣ್ಣಿಗೆ ಆಗುತ್ತಿರುವ ಹಾನಿಯನ್ನು ಹೇಗೆ ನಿವಾರಿಸುವುದು, ಮತ್ತು ಐದನೆಯದಾಗಿ, ಅರಣ್ಯ ಪ್ರದೇಶದಲ್ಲಿನ ಇಳಿಕೆಯಿಂದಾಗಿ ಮಣ್ಣಿನ ನಿರಂತರ ಸವೆತವನ್ನು ತಡೆಯುವುದು ಹೇಗೆ?" ಎಂಬುದಾಗಿದೆ ಎಂದು ತಿಳಿಸಿದರು.

ಸಾಲ ಪಡೆಯಲು ಏಕಗವಾಕ್ಷಿ

ದೇಶದ ನಾಗರಿಕರ ಜೀವನವನ್ನು ಸುಧಾರಿಸುವ ಸಲುವಾಗಿ ಸರ್ಕಾರವು ಡಿಜಿಟಲೀಕರಣ ಮತ್ತು ಸುಗಮ ಜೀವನಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಇದಕ್ಕಾಗಿಯೇ ಸರ್ಕಾರವು ಈಗ ಆನ್‌ಲೈನ್ ವೇದಿಕೆಗಳಲ್ಲಿ ಅನೇಕ ಸಾಲ ಯೋಜನೆಗಳನ್ನು ಒದಗಿಸುತ್ತಿದೆ, ಇದರಿಂದ ಸಾಲ ಪಡೆಯಲಿಚ್ಛಿಸುವವರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಮತ್ತು ಯಾವುದೇ ತೊಂದರೆಯಿಲ್ಲದೆ ಸಾಲವನ್ನು ಪಡೆಯಬಹುದು. ಈ ಸಾಲವನ್ನು ಜನ ಸಮರ್ಥ್ ಪೋರ್ಟಲ್ ಮೂಲಕ ವಿವಿಧ ವಿಭಾಗಗಳಲ್ಲಿ ವಿತರಿಸಲಾಗುವುದು. ಈ ಪೋರ್ಟಲ್ ಗೆ ಜೂನ್ 6 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಚಾಲನೆ ನೀಡಿದರು. ಎಲ್ಲ ಫಲಾನುಭವಿಗಳನ್ನು ಸರ್ಕಾರಿ ಯೋಜನೆಗಳ ವ್ಯಾಪ್ತಿಗೆ ತರುವ ಮೂಲಕ ಸ್ವಯಂ ಉದ್ಯೋಗವನ್ನು ಹೆಚ್ಚಿಸುವಲ್ಲಿ ಈ ಪೋರ್ಟಲ್ ಪ್ರಮುಖ ಪಾತ್ರ ವಹಿಸಲಿದೆ.

ಜೂನ್ 6 ರಂದು ಹಣಕಾಸು ಮತ್ತು ಸಾಂಸ್ಥಿಕ ವ್ಯವಹಾರಗಳ ಸಚಿವಾಲಯದ ಐಕಾನಿಕ್ ವೀಕ್ ಸೆಲೆಬ್ರೇಷನ್ಸ್ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಮಂತ್ರಿಯವರು ಈ ಪೋರ್ಟಲ್‌ಗೆ ಚಾಲನೆ ನೀಡಿದರು, ನಾಗರಿಕರಿಗೆ ಸರ್ಕಾರದ 13 ಯೋಜನೆಗಳನ್ನು ಒಂದೇ ವೇದಿಕೆಯಲ್ಲಿ ಕ್ರೋಡೀಕರಿಸುವ ಮೂಲಕ ಅವುಗಳು ಸುಲಭವಾಗಿ ಲಭ್ಯವಾಗುವಂತೆ ಮಾಡುವ ಗುರಿಯನ್ನು ಹೊಂದಲಾಗಿದೆ. ಇದು ನಾಗರಿಕರಿಗೆ ಸಾಲ ಪಡೆಯುವುದನ್ನು ಸುಗಮಗೊಳಿಸುತ್ತದೆ ಮತ್ತು ಅನೇಕ ಸ್ಥಳಗಳಿಗೆ ಅಲೆದಾಡುವ ಮತ್ತು ಅನೇಕ ಕಾರ್ಯವಿಧಾನಗಳ ಮೂಲಕ ಸಾಗುವ ಶ್ರಮ ಉಳಿಸುತ್ತದೆ. ಅದೇ ವೇಳೆ, ಈ ಪೋರ್ಟಲ್ ನಾಗರಿಕರ ಜೀವನವನ್ನು ಸುಗಮಗೊಳಿಸುವುದಲ್ಲದೆ, ಅವರ ಕನಸುಗಳನ್ನು ಸಾಕಾರಗೊಳಿಸಲು ಅವರಿಗೆ ನೆರವಾಗುತ್ತದೆ. ಈ ಸಂದರ್ಭದಲ್ಲಿ ಪ್ರಧಾನಮಂತ್ರಿಯವರು ಕಳೆದ ಎಂಟು ವರ್ಷಗಳಲ್ಲಿ ಎರಡೂ ಸಚಿವಾಲಯಗಳ ಪಯಣ ಮತ್ತು ಸಾಧನೆಗಳ ಕುರಿತ ಡಿಜಿಟಲ್ ವಸ್ತುಪ್ರದರ್ಶನವನ್ನೂ ಉದ್ಘಾಟಿಸಿದರು.

"ಭಾರತ ಸರ್ಕಾರದ ಎಲ್ಲ ಸಾಲ ಸಂಬಂಧಿತ ಯೋಜನೆಗಳು ಈಗ ಒಂದೇ ತಾಣದಲ್ಲಿ ಲಭ್ಯವಾಗಲಿವೆ" ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪೋರ್ಟಲ್ ಬಿಡುಗಡೆ ಸಮಾರಂಭದಲ್ಲಿ ತಿಳಿಸಿದರು. ಜನ ಸಮರ್ಥ್ ಪೋರ್ಟಲ್ ಜನಸಾಮಾನ್ಯರಿಗೆ ಪ್ರಧಾನಮಂತ್ರಿಯವರ ಸೇವೆಯ ಒಂದು ಭಾಗವಾಗಿದೆ, ಏಕೆಂದರೆ ಸಾರ್ವಜನಿಕರನ್ನು ತಲುಪುವುದು, ಪ್ರತಿಯೊಬ್ಬ ಅರ್ಹ ವ್ಯಕ್ತಿಯನ್ನು ತಲುಪುವುದು ಮತ್ತು ಅವರಿಗೆ ಸಂಪೂರ್ಣ ಪ್ರಯೋಜನಗಳನ್ನು ಒದಗಿಸುವುದು ಸರ್ಕಾರದ ಮೊದಲ ಆದ್ಯತೆ ಮತ್ತು ಜವಾಬ್ದಾರಿಯಾಗಿದೆ.

ಜನ ಸಮರ್ಥ್ ಪೋರ್ಟಲ್ : ನಾಲ್ಕು ಸಾಲ ವಿಭಾಗಗಳಲ್ಲಿ 13 ಯೋಜನೆಗಳು

- "ಜನ ಸಮರ್ಥ್" ಪ್ರಸ್ತುತ ನಾಲ್ಕು ಸಾಲ ವಿಭಾಗಗಳಲ್ಲಿ 13 ಸರ್ಕಾರಿ ಯೋಜನೆಗಳಿಗೆ ಅರ್ಜಿಗಳನ್ನು ಸಲ್ಲಿಸಲು ಮತ್ತು 125ಕ್ಕೂ ಹೆಚ್ಚು ಸಾಲದಾತರಿಂದ ಆಯ್ಕೆ ಮಾಡಲು ಎಲ್ಲ ಸೇವೆಯ ಒಂದು ತಾಣವನ್ನು ಒದಗಿಸುತ್ತದೆ.
- ಇದು ಸಿಬಿಡಿಟಿ, ಜಿಎಸ್ಟಿ, ಉದಯ್, ಎನ್.ಇ.ಎಸ್.ಎಲ್, ಯುಐಡಿಎಐ, ಸಿ.ಐ.ಬಿ.ಐ.ಎಲ್ ಮತ್ತು ಇತರ ಸರ್ಕಾರಿ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವ ಮೂಲಕ ತ್ವರಿತ ಸಾಲ ಪ್ರಕ್ರಿಯೆಯನ್ನು ಖಚಿತಪಡಿಸುತ್ತದೆ.
- "ಜನ ಸಮರ್ಥ್" ಪೋರ್ಟಲ್ ಕೃಷಿ, ಜೀವನೋಪಾಯ, ಶಿಕ್ಷಣ ಮತ್ತು ವ್ಯಾಪಾರ ಚಟುವಟಿಕೆಯ ವರ್ಗಗಳಲ್ಲಿ ಸಾಲಗಳನ್ನು ನೀಡುತ್ತದೆ.
- ಜನ ಸಮರ್ಥ ಪೋರ್ಟಲ್ ನಲ್ಲಿ ಈಗಾಗಲೇ ಮೂರು ಸರ್ಕಾರಿ ಯೋಜನೆಗಳು ಲಭ್ಯವಿದ್ದು, ಭವಿಷ್ಯದಲ್ಲಿ ಇನ್ನೂ ಹೆಚ್ಚಿನ ಯೋಜನೆಗಳನ್ನು ಸೇರಿಸಲಾಗುವುದು. 'ಜನ ಸಮರ್ಥ್' ಪೋರ್ಟಲ್ ಅರ್ಹತೆಯನ್ನು ಪರಿಶೀಲಿಸಿ, ತಾತ್ವಿಕ ಅನುಮೋದನೆ ನೀಡುತ್ತದೆ ಮತ್ತು ಅರ್ಜಿಯನ್ನು ಆಯ್ಕೆ ಮಾಡಲಾದ ಬ್ಯಾಂಕ್ ಗೆ ಕಳುಹಿಸುತ್ತದೆ.
- ಇದು ಸಾಲ ಪ್ರಕ್ರಿಯೆಯಲ್ಲಿನ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಫಲಾನುಭವಿಗಳಿಗೆ ತಿಳಿಸುತ್ತದೆ. ಒಂದಕ್ಕಿಂತ ಹೆಚ್ಚು ಬಾರಿ ಬ್ಯಾಂಕ್ ಶಾಖೆಗಳಿಗೆ ಭೇಟಿ ನೀಡುವ ಅಗತ್ಯವಿರುವುದಿಲ್ಲ.
- ಶಿಕ್ಷಣಕ್ಕಾಗಿ ಮೂರು, ಕೃಷಿಗಾಗಿ ಮೂರು, ವ್ಯಾಪಾರ ಚಟುವಟಿಕೆ ವರ್ಗಗಳಿಗೆ ಆರು ಮತ್ತು ಜೀವನೋಪಾಯ ಸಾಲಕ್ಕಾಗಿ ಒಂದು ಯೋಜನೆ ಇದೆ. ■

ವಿಶ್ವದ ಜೈವಿಕ ತಂತ್ರಜ್ಞಾನ ತಾಣವಾಗುವ ಗುರಿ ಹೊಂದಿರುವ ಭಾರತ

ಜೈವಿಕ ತಂತ್ರಜ್ಞಾನ (ಬಯೋಟೆಕ್) ದೇಶದ ಜಿಡಿಪಿಗೆ ಗಮನಾರ್ಹ ಕೊಡುಗೆ ನೀಡುತ್ತಿರುವುದೇ ಅಲ್ಲದೆ, ಹೆಚ್ಚಿನ ಸಂಖ್ಯೆಯ ಉದ್ಯೋಗಗಳನ್ನೂ ಸೃಷ್ಟಿಸುವ ಕ್ಷೇತ್ರವಾಗಿದೆ. ಕಳೆದ 8 ವರ್ಷಗಳಲ್ಲಿ, ಭಾರತದ ಜೈವಿಕ ತಂತ್ರಜ್ಞಾನ ವಲಯವು 8 ಪಟ್ಟು ವೃದ್ಧಿಯೊಂದಿಗೆ 80 ಶತಕೋಟಿ ಡಾಲರ್ ಜೈವಿಕ - ಆರ್ಥಿಕತೆಯನ್ನು ತಲುಪುವಲ್ಲಿ ಯಶಸ್ವಿಯಾಗಿದೆ. ಇದು ಕೇಂದ್ರ ಸರ್ಕಾರದ ನಿರಂತರ ಪ್ರಯತ್ನಗಳ ಫಲವಾಗಿದೆ. ಇದು ಹೊಸ ಗುರಿಗಳೊಂದಿಗೆ ಮುಂದುವರಿಯುವ ಸಮಯವಾಗಿದ್ದು, ಜೈವಿಕ ತಂತ್ರಜ್ಞಾನ ನವೋದ್ಯಮ ಎಕ್ಸ್ ಪೋದಂತಹ ಕಾರ್ಯಕ್ರಮವು ಈ ನಿಟ್ಟಿನಲ್ಲಿ ಒಂದು ಹೆಜ್ಜೆಯಾಗಿದೆ. ಜೂನ್ 9 ರಂದು ಇದನ್ನು ಉದ್ಘಾಟಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ, " ಜೈವಿಕ ತಂತ್ರಜ್ಞಾನದ ಜಾಗತಿಕ ಪರಿಸರ ವ್ಯವಸ್ಥೆಯಲ್ಲಿ ಭಾರತವು ಅಗ್ರ -10 ರಾಷ್ಟ್ರಗಳ ಗುಂಪನ್ನು ತಲುಪಲು ಬಹಳ ದೂರವೇನಿಲ್ಲ" ಎಂದು ಹೇಳಿದ್ದರು.

ಕೋವಿಡ್‌ನ ಕಠಿಣ ಪರಿಸ್ಥಿತಿಯಲ್ಲಿ, ವೈದ್ಯಕೀಯ ಸಾಧನಗಳು, ವೈದ್ಯಕೀಯ, ಮೂಲಸೌಕರ್ಯ, ಲಸಿಕೆ ಸಂಶೋಧನೆ ಮತ್ತು ಉತ್ಪಾದನೆಯ ಪರಿಣಾಮಕಾರಿತ್ವದ ಬಗ್ಗೆ ದೇಶದಲ್ಲಿ ಅನುಮಾನಗಳು ಉದ್ಭವಿಸಿದ್ದಾಗ, ಭಾರತವು ಯಾರೂ ಊಹಿಸದ ಸಾಧನೆ ಮಾಡಿತು. ಜೈವಿಕ ತಂತ್ರಜ್ಞಾನ ಮತ್ತು ಇತರ ಎಲ್ಲಾ ವಲಯಗಳೊಂದಿಗೆ ಸರ್ಕಾರ ಮತ್ತು ಉದ್ಯಮದ ಸಮನ್ವಯವು ಹೊಸ ಯಶೋಗಾಥೆಯನ್ನು ಬರೆಯಿತು. ಆದರೆ ಈ ಅಸಾಧಾರಣ ಯಶಸ್ಸಿನ ಹಿಂದೆ ಕಳೆದ 8 ವರ್ಷಗಳ ಕಠಿಣ ಪರಿಶ್ರಮ ಮತ್ತು ಪ್ರಯತ್ನಗಳಿದ್ದವು, ಇವು ಜೈವಿಕ ತಂತ್ರಜ್ಞಾನದಂತಹ ಕ್ಷೇತ್ರಗಳ ಮೇಲೆ ವಿಶೇಷ ಗಮನ ಹರಿಸಿತ್ತು. ನವೋದ್ಯಮ ಭಾರತ, ಅಟಲ್ ನಾವೀನ್ಯತೆ ಅಭಿಯಾನ, ಮೇಕ್ ಇನ್ ಇಂಡಿಯಾ ಮತ್ತು ಸ್ವಾವಲಂಬಿ ಭಾರತದಂತಹ ಉಪಕ್ರಮಗಳಿಂದ ಬಯೋಟೆಕ್ ವಲಯಕ್ಕೆ ಉತ್ತೇಜನ ದೊರೆತಿದೆ. ಈ ಪ್ರಯತ್ನಗಳಿಗೆ ಹೊಸ ದಿಕ್ಕನ್ನು ನೀಡುವ ಮೂಲಕ, ಜೈವಿಕ ತಂತ್ರಜ್ಞಾನ ನವೋದ್ಯಮ ಎಕ್ಸ್ ಪೋವನ್ನು ಜೂನ್ 9-10 ರಂದು ದೆಹಲಿಯ ಪ್ರಗತಿ ಮೈದಾನದಲ್ಲಿ ಆಯೋಜಿಸಲಾಗಿತ್ತು. ಇದನ್ನು ಉದ್ಘಾಟಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ, "ನಮ್ಮ ಐಟಿ ವೃತ್ತಿಪರರ ಕೌಶಲ್ಯ ಮತ್ತು ನಾವೀನ್ಯತೆಗೆ ಸಂಬಂಧಿಸಿದಂತೆ ವಿಶ್ವದಲ್ಲಿ ವಿಶ್ವಾಸವು ಹೊಸ ಉತ್ತುಂಗದಲ್ಲಿದೆ. ಇದೇ ನಂಬಿಕೆ, ಇದೇ ಖ್ಯಾತಿಯನ್ನು ಈ ದಶಕದಲ್ಲಿ ಭಾರತದ ಜೈವಿಕ ತಂತ್ರಜ್ಞಾನ ವಲಯದಲ್ಲಿ ಮತ್ತು ಭಾರತದ ಜೈವಿಕ-ವೃತ್ತಿಪರರಲ್ಲಿ ಕಾಣಲಾಗುತ್ತಿದೆ." ಎಂದು ಹೇಳಿದರು.

ದೇಶದಲ್ಲಿ ಈ ವಲಯದ ಅಭಿವೃದ್ಧಿಗೆ ಜೈವಿಕ ತಂತ್ರಜ್ಞಾನ ಕೈಗಾರಿಕೆ ಸಂಶೋಧನೆ ನೆರವು ಮಂಡಳಿ (ಬಿಐಆರ್.ಎ.ಸಿ) ನೀಡಿದ ಕೊಡುಗೆಯ ಬಗ್ಗೆಯೂ ಪ್ರಧಾನಮಂತ್ರಿ ಮಾತನಾಡಿದರು. ಇಂದು ಅಮೃತ್ ಅವಧಿಯಲ್ಲಿ ದೇಶವು ಹೊಸ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿರುವಾಗ, ದೇಶದ ಅಭಿವೃದ್ಧಿಯಲ್ಲಿ ಜೈವಿಕ ತಂತ್ರಜ್ಞಾನ ಉದ್ಯಮದ ಪಾತ್ರವು ಬಹಳ ಮಹತ್ವದ್ದಾಗಿದೆ ಎಂದು ಪ್ರಧಾನಮಂತ್ರಿ ಹೇಳಿದರು. ■

ಜೈವಿಕ ತಂತ್ರಜ್ಞಾನ ವಲಯದಲ್ಲಿ ಅನಂತ ಸಾಮರ್ಥ್ಯ ...

ಭಾರತವು ವಿಶ್ವದ ಜೈವಿಕ ತಂತ್ರಜ್ಞಾನದ ಅಗ್ರ 12 ತಾಣಗಳಲ್ಲಿ ಮತ್ತು ಇಂಡೋ-ಪೆಸಿಫಿಕ್ ನಲ್ಲಿ ಮೂರನೇ ಸ್ಥಾನದಲ್ಲಿದೆ. ಜಾಗತಿಕ ನಾವೀನ್ಯತೆ ಸೂಚ್ಯಂಕವು 46ನೇ ಸ್ಥಾನಕ್ಕೆ ತಲುಪುವುದರೊಂದಿಗೆ, ಭಾರತದ ಜೈವಿಕ ಆರ್ಥಿಕತೆಯು ವರ್ಷದಿಂದ ವರ್ಷಕ್ಕೆ ಎರಡಂಕಿಗಳಲ್ಲಿ ಬೆಳೆಯುತ್ತಿದೆ, 2018 ರಲ್ಲಿದ್ದ 51 ಶತಕೋಟಿಗೆ ಹೋಲಿಸಿದರೆ, 2021 ರಲ್ಲಿ 81 ಶತಕೋಟಿಗೆ ತಲುಪಿದೆ. 2025ರ ವೇಳೆಗೆ ನಾವು 150 ಶತಕೋಟಿ ಗುರಿಯನ್ನು ಸಮೀಪಿಸುತ್ತಿದ್ದೇವೆ, ಇದು ಕೋವಿಡ್ ವರ್ಷಗಳಲ್ಲಿಯೂ ಎರಡಂಕಿಯ ವೃದ್ಧಿಗೆ ಸಾಕ್ಷಿಯಾಗಿದೆ. ಜೈವಿಕ ತಂತ್ರಜ್ಞಾನ ಇನ್ ಕ್ಯುಬೇಟರ್ ಗಳ ಸಂಖ್ಯೆ ಮತ್ತು ಒಟ್ಟು ಧನಸಹಾಯವು ಸುಮಾರು 7 ಪಟ್ಟು ಹೆಚ್ಚಾಗಿದೆ. 2014 ರಲ್ಲಿ, ನಮ್ಮ ದೇಶದಲ್ಲಿ ಕೇವಲ 6 ಜೈವಿಕ ಇನ್ ಕ್ಯುಬೇಟರ್ ಗಳಿದ್ದವು, ಇಂದು ಅವುಗಳ ಸಂಖ್ಯೆ 75 ಕ್ಕೆ ಏರಿದೆ. 8 ವರ್ಷಗಳ ಹಿಂದೆ ನಮ್ಮ ದೇಶದಲ್ಲಿ 10 ಜೈವಿಕ ತಂತ್ರಜ್ಞಾನ ಉತ್ಪನ್ನಗಳು ಮಾತ್ರ ಇದ್ದವು. ಇಂದು ಅವುಗಳ ಸಂಖ್ಯೆ 700 ದಾಟಿದೆ.

ಜೈವಿಕ ತಂತ್ರಜ್ಞಾನ ನವೋದ್ಯಮದಲ್ಲಿ ಹೂಡಿಕೆದಾರರ ಸಂಖ್ಯೆ 9 ಪಟ್ಟು ಹೆಚ್ಚಳ



ಪುಣೆಯ ಸಂತ ತುಕಾರಾಂ ಮಂದಿರ, ಮುಂಬೈನಲ್ಲಿ ಕ್ರಾಂತಿಕಾರಿಗಳ ಗ್ಯಾಲರಿ ಉದ್ಘಾಟನೆ

ಅಭಿವೃದ್ಧಿ ಮತ್ತು ಪರಂಪರೆ ಏಕಕಾಲದಲ್ಲಿ ಸಾಗುತ್ತವೆ

ಆಧುನಿಕ ತಂತ್ರಜ್ಞಾನ ಮತ್ತು ಮೂಲಸೌಕರ್ಯಗಳು ಕಳೆದ ಎಂಟು ವರ್ಷಗಳಲ್ಲಿ ಭಾರತದ ಅಭಿವೃದ್ಧಿಗೆ ಸಮಾನಾರ್ಥಕವಾಗಿವೆ. ಇದರ ಪರಿಣಾಮವಾಗಿ, ಭಾರತದ ಶ್ರೇಷ್ಠ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುವ ಕಾರ್ಯವು ಸಮಾನಾಂತರವಾಗಿ ಪೂರ್ಣಗೊಂಡಿದೆ. ಕೇದಾರನಾಥದಿಂದ ಹಿಡಿದು ಕಾಶಿ ವಿಶ್ವನಾಥ ದೇವಾಲಯದವರೆಗೆ ಮತ್ತು ಹೈದರಾಬಾದಿನ ಶ್ರೀ ರಾಮಾನುಜಾಚಾರ್ಯರ ಪ್ರತಿಮೆಯವರೆಗೆ ಇದರ ಉದಾಹರಣೆಗಳಿವೆ. ಈ ಪಟ್ಟಿಯಲ್ಲಿ ಈಗ ಮಹಾರಾಷ್ಟ್ರದ ಶ್ರೇಷ್ಠ ಶ್ರೀ ಸಂತ ತುಕಾರಾಮ್ ಮಹಾರಾಜ್ ಅವರ ಶಿಲಾ ಮಂದಿರದ ಹೆಸರೂ ಸೇರಿದೆ. "ಅಭಿವೃದ್ಧಿ ಮತ್ತು ಪರಂಪರೆ ಎರಡೂ ಒಟ್ಟಿಗೆ ಮುಂದುವರಿಯುವುದನ್ನು ನಾವು ಖಚಿತಪಡಿಸಿಕೊಳ್ಳುತ್ತಿದ್ದೇವೆ" ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಜೂನ್ 14 ರಂದು ಅದರ ಉದ್ಘಾಟನಾ ಸಮಾರಂಭದಲ್ಲಿ ಹೇಳಿದರು.

ಸಂತ ತುಕಾರಾಂ ಅವರು ಒಬ್ಬ ವಾರ್ಕರಿ ಪಂಥದ ಸಂತ ಮತ್ತು ಕವಿಯಾಗಿದ್ದರು, ಅಭಂಗ್ (ಭಕ್ತಿಗೀತೆಗಳು ಎಂದೂ ಕರೆಯಲಾಗುತ್ತದೆ), ಭಕ್ತಿಪದಗಳು ಮತ್ತು ಕೀರ್ತನೆಗಳು ಎಂದು ಕರೆಯಲಾಗುವ ಆಧ್ಯಾತ್ಮಿಕ ಹಾಡುಗಳ ಮೂಲಕ ಜನಸಾಮಾನ್ಯರಿಗೆ ಜ್ಞಾನೋದಯ ಮಾಡಿಸಿದರು. ದೇಹುವಿನಲ್ಲಿ ವಾಸಿಸುತ್ತಿದ್ದ ಸಂತ ತುಕಾರಾಮರು ಮಹಾರಾಷ್ಟ್ರ ಭಕ್ತಿ ಚಳವಳಿಗೆ ಅಡಿಪಾಯ ಹಾಕಿದರು ಎಂದು ಹೇಳಲಾಗುತ್ತದೆ. ಸಾಹಿತ್ಯದಲ್ಲಿ ಅವರ ಸ್ಥಾನವು ವಾರ್ಕರಿ ಪಂಥದಲ್ಲಿ ಮಾತ್ರವಲ್ಲದೆ ಪ್ರಪಂಚದಾದ್ಯಂತ ಅಸಾಧಾರಣವಾಗಿದೆ. ಅವರ ಅಭಂಗ್ ಗಳನ್ನು ಇಂಗ್ಲಿಷಿಗೂ ಭಾಷಾಂತರಿಸಲಾಗಿದೆ. ಅವರ ಮರಣಾನಂತರ, ಶಿಲಾ ದೇವಾಲಯವನ್ನು ನಿರ್ಮಿಸಲಾಯಿತು. ಇತ್ತೀಚೆಗೆ ಇದನ್ನು ಮರು ಅಭಿವೃದ್ಧಿಗೊಳಿಸಲಾಗಿದ್ದು, ಇದನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಉದ್ಘಾಟಿಸಿದರು. ಈ ದೇವಾಲಯದಲ್ಲಿ ಸಂತ ತುಕಾರಾಮರ ವಿಗ್ರಹವೂ ಇದೆ. ಸಂತ ತುಕಾರಾಮರು ವಿಠ್ಠಲನ ಅಥವಾ ಭಗವಾನ್ ವಿಷ್ಣುವಿನ ನಿಷ್ಠಾವಂತ ಅನುಯಾಯಿಯಾಗಿದ್ದರು ಮತ್ತು ವೈಷ್ಣವ ಧರ್ಮಕ್ಕೆ ಬದ್ಧರಾಗಿದ್ದರು. ಸಂತ ತುಕಾರಾಮರ ಭಕ್ತಿಪದಗಳ ಅನೇಕ ಕೃತಿಗಳನ್ನು ಇಂದಿಗೂ ಕಾಣಬಹುದು. ಅವರ ಗೌರವಾರ್ಥ, ಭಾರತ ಸರ್ಕಾರವು 2002ರಲ್ಲಿ 100ರೂ. ಗಳ ಬೆಳ್ಳಿಯ ನಾಣ್ಯವನ್ನೂ ಬಿಡುಗಡೆ ಮಾಡಿತ್ತು.

"ಇಂದು, ಸ್ವಾತಂತ್ರ್ಯದ 75 ನೇ ವರ್ಷದಲ್ಲಿ, ದೇಶವು ತನ್ನ ಗುರಿಗಳಲ್ಲಿ ಶೇ. 100ರಷ್ಟು ಸಾಧನೆಯ ಸಂಕಲ್ಪ ಮಾಡಿದೆ. ದೇವಾಲಯದ ಉದ್ಘಾಟನಾ

ಪರಂಪರೆ ಸಂರಕ್ಷಣೆಯ ಪ್ರಯತ್ನಗಳು ಪಂಢರಾಪುರದಿಂದ ಚಾರ್‌ಧಾಮ್‌ವರೆಗೆ ಮತ್ತು ರಾಮ ಮಂದಿರದಿಂದ ರಾಮಾಯಣ ಸರ್ಕ್ಯೂಟ್ ವರೆಗೆ ನಡೆಯುತ್ತವೆ

- ಪಂಢರಾಪುರ ಪಾಲ್ಕಿ ಮಾರ್ಗವನ್ನು ಆಧುನೀಕರಣಗೊಳಿಸಲಾಗುತ್ತಿದೆ ಮತ್ತು ಚಾರ್‌ಧಾಮ್ ಯಾತ್ರೆಗಾಗಿ ಹೊಸ ಹೆದ್ದಾರಿಗಳನ್ನು ನಿರ್ಮಿಸಲಾಗುತ್ತಿದೆ. ಪ್ರಸಾದ ಯೋಜನೆಯಡಿ ದೇಶಾದ್ಯಂತ ಯಾತ್ರಾ ಸ್ಥಳಗಳು ಮತ್ತು ಪ್ರವಾಸಿ ಆಕರ್ಷಕ ತಾಣಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.
- ಅಯೋಧ್ಯೆಯಲ್ಲಿ ಭವ್ಯವಾದ ರಾಮ ಮಂದಿರವನ್ನು ಸಹ ನಿರ್ಮಿಸಲಾಗುತ್ತಿದೆ; ಕಾಶಿ ವಿಶ್ವನಾಥ ಧಾಮ್ ಸಂಕೀರ್ಣವು ಸಹ ಅದರ ಹೊಸ ರೂಪದಲ್ಲಿದೆ; ಮತ್ತು ಸೋಮನಾಥದಲ್ಲಿ ಗಮನಾರ್ಹ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ.
- ಮಹರ್ಷಿ ವಾಲ್ಮೀಕಿ ರಾಮಾಯಣದಲ್ಲಿ ಉಲ್ಲೇಖಿಸಲಾದ ಸ್ಥಳಗಳನ್ನು ರಾಮಾಯಣ ಸರ್ಕ್ಯೂಟ್ ಒಳಗೊಂಡಿದೆ.
- ಈ ಎಂಟು ವರ್ಷಗಳಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ಐದು ತೀರ್ಥ ಸ್ಥಳಗಳನ್ನು ಸಹ ಅಭಿವೃದ್ಧಿಪಡಿಸಲಾಗಿದೆ.

> ಸಂತರ "ಸತ್ಸಂಗ" (ಪವಿತ್ರ ಕೂಟ) ಮಾನವ ಜನ್ಮದಲ್ಲಿ ಅತ್ಯಂತ ಅಪರೂಪದ ಸುಯೋಗ ಎಂದು ನಮ್ಮ ಧರ್ಮಗ್ರಂಥಗಳಲ್ಲಿ ಹೇಳಲಾಗಿದೆ. ಒಬ್ಬನು ಸಂತರ ಅನುಗ್ರಹವನ್ನು ಪಡೆದರೆ, ಭಗವಂತನ ಸಹಜ ಸಾಕ್ಷಾತ್ಕಾರವಾಗುತ್ತದೆ. ನಾನು ಈಗ ಅದೇ ಅನುಭೂತಿ ಅನುಭವಿಸುತ್ತಿದ್ದೇನೆ, ಕಾರಣ ಈ ಪವಿತ್ರ ಯಾತ್ರಾಸ್ಥಳವಾದ ದೇಹುವಿಗೆ ನಾನು ಆಗಮಿಸಿದ್ದೇನೆ.
> ನರೇಂದ್ರ ಮೋದಿ
> ಪ್ರಧಾನಮಂತ್ರಿ

ಜಲಭೂಷಣ ಭವನ ಮತ್ತು ಗ್ಯಾಲರಿ ಉದ್ಘಾಟನೆ

1885ರಿಂದ ಮಹಾರಾಷ್ಟ್ರದ ರಾಜ್ಯಪಾಲರ ಅಧಿಕೃತ ನಿವಾಸವಾಗಿರುವ ಮುಂಬೈನ ರಾಜಭವನದಲ್ಲಿ ಜಲಭೂಷಣ ಭವನವನ್ನು ಪ್ರಧಾನಮಂತ್ರಿಯವರು ಲೋಕಾರ್ಪಣೆ ಮಾಡಿದರು. ಈ ಕಟ್ಟಡದ ಜೀವಿತಾವಧಿ ಮುಗಿದಾಗ, ಅದನ್ನು ನೆಲಸಮಗೊಳಿಸಲಾಯಿತು ಮತ್ತು ಹಳೆಯ ಕಟ್ಟಡದ ಎಲ್ಲಾ ವಿಶಿಷ್ಟ ಲಕ್ಷಣಗಳನ್ನು ಸಂರಕ್ಷಿಸಿ ಹೊಸ ಕಟ್ಟಡವನ್ನು ನಿರ್ಮಿಸಲಾಯಿತು. ಪ್ರಧಾನಮಂತ್ರಿಯವರು ಮುಂಬೈನಲ್ಲಿ ಕ್ರಾಂತಿಕಾರಿಗಳ ಗ್ಯಾಲರಿಯನ್ನೂ ಲೋಕಾರ್ಪಣೆ ಮಾಡಿದರು. ವಾಸ್ತವವಾಗಿ, 2016ರಲ್ಲಿ, ರಾಜಭವನದಲ್ಲಿ ಬಂಕರ್ ಅನ್ನು ಪತ್ತೆ ಮಾಡಲಾಯಿತು, ಇದನ್ನು ಈ ಹಿಂದೆ ಬ್ರಿಟಿಷರು ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳನ್ನು ರಹಸ್ಯವಾಗಿ ಶೇಖರಿಸಿಡುವ ತಾಣವಾಗಿ ಬಳಸುತ್ತಿದ್ದರು. ಬಂಕರ್ ಅನ್ನು 2019ರಲ್ಲಿ ನವೀಕರಿಸಲಾಗಿದ್ದು, ಬಂಕರ್ ಗ್ಯಾಲರಿಯನ್ನು ಸ್ವಾತಂತ್ರ್ಯ ಹೋರಾಟಗಾರರು ಮತ್ತು ಕ್ರಾಂತಿಕಾರಿಗಳ ಕೊಡುಗೆಯನ್ನು ಸ್ಮರಿಸಲು ಒಂದು ರೀತಿಯ ವಸ್ತುಸಂಗ್ರಹಾಲಯವಾಗಿ ರೂಪಿಸಲಾಯಿತು.

ಸಮಾರಂಭದಲ್ಲಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಪ್ರಸ್ತುತ ದೇಶದಲ್ಲಿ ಬಡವರಿಗಾಗಿ ಜಾರಿಯಲ್ಲಿರುವ ಯೋಜನೆಗಳು ವಿದ್ಯುತ್, ನೀರು, ವಸತಿ ಮತ್ತು ಚಿಕಿತ್ಸೆಯಂತಹ ಜೀವನದ ಮೂಲಭೂತ ಅಗತ್ಯಗಳೊಂದಿಗೆ ಸಂಬಂಧಿಸಿದ್ದಾಗಿವೆ. ಅವುಗಳನ್ನು ಎಲ್ಲರಿಗೂ ಲಭ್ಯವಾಗುವಂತೆ ಮಾಡಲು ಸರ್ಕಾರ ಉದ್ದೇಶಿಸಿದೆ. ಅಂತೆಯೇ, ದೇಶವು ಪರಿಸರ, ಜಲ ಸಂರಕ್ಷಣೆ ಮತ್ತು ನದಿ-ಉಳಿಸುವ ಅಭಿಯಾನಗಳನ್ನು ಪ್ರಾರಂಭಿಸಿದೆ ಮತ್ತು ಆರೋಗ್ಯಕರ ಭಾರತಕ್ಕಾಗಿ ಪ್ರತಿಜ್ಞೆ ಮಾಡಿದೆ. ಸರ್ಕಾರವು ಈ ನಿರ್ಣಯಗಳನ್ನು ಕಾರ್ಯಗತಗೊಳಿಸಲು ಸಹ ದೃಢಸಂಕಲ್ಪ ಮಾಡಿದೆ. ಪ್ರಸ್ತುತ, ದೇಶವು ವಾರ್ಕರಿ ಸಂತರ ಆದರ್ಶಗಳನ್ನು ಆಧರಿಸಿದ ಅಭಿಯಾನದ ಮೂಲಕ ನೈಸರ್ಗಿಕ ಕೃಷಿಯನ್ನು ಉತ್ತೇಜಿಸುತ್ತಿದೆ ಎಂದರು. ಈ ಅಂತ್ಯೋದಯ ನಿರ್ಣಯವು ವಾರ್ಕರಿ ಸಂತ ತುಕಾರಾಮ್ ಅವರಿಂದ ಪ್ರಭಾವಿತವಾಗಿದ್ದು, ಅವರ ಬಗ್ಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೀಗೆ ಹೇಳಿದರು "ಅವರ ಆದರ್ಶಗಳು ಅನೇಕ ಜನರಿಗೆ ಸ್ಫೂರ್ತಿ ನೀಡುತ್ತವೆ." ಇತರರಿಗೆ ಸಹಾಯ ಮಾಡಲು ಮತ್ತು ಸಹಾನುಭೂತಿಯುಳ್ಳ ಸಮಾಜವನ್ನು ನಿರ್ಮಿಸಲು ಅವರು ನಮ್ಮನ್ನು ಪ್ರೇರೇಪಿಸುತ್ತಾರೆ. ಛತ್ರಪತಿ ಶಿವಾಜಿ ಮಹಾರಾಜರಂತಹ ರಾಷ್ಟ್ರ ನಾಯಕರ ಜೀವನದಲ್ಲಿ ತುಕಾರಾಂ ಅವರಂತಹ ಸಂತರು ಪ್ರಭಾವಬೀರಿದ್ದರು. ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ವೀರ ಸಾವರ್ಕರ್ ಸೆರೆಮನೆಯಲ್ಲಿದ್ದಾಗ, ಕೈಕೋಳಗಳನ್ನೆ ಚಿಪ್ಲಿಯಂತೆ ಮಾಡಿಕೊಂಡು ತುಕಾರಾಂರ ಅಭಂಗ್ ಹಾಡುತ್ತಿದ್ದರು ಎಂದರು.

ತಮ್ಮ ಮಹಾರಾಷ್ಟ್ರ ಭೇಟಿಯ ಸಮಯದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತುಕಾರಾಮ್ ಮಹಾರಾಜ್ ಅವರ ದೇವಾಲಯವನ್ನು ಉದ್ಘಾಟಿಸಿದರು, ಜಲಭೂಷಣ ಭವನ ಮತ್ತು ಕ್ರಾಂತಿಕಾರಿಗಳ ಗ್ಯಾಲರಿಯನ್ನು ಉದ್ಘಾಟಿಸಿದರು ಮತ್ತು ಮುಂಬೈ ಸಮಾಚಾರ್ ನ ದ್ವಿಶತಮಾನೋತ್ಸವದಲ್ಲಿ ಭಾಗವಹಿಸಿದ್ದರು.

ಕಳೆದ 200 ವರ್ಷಗಳಿಂದ ನಿರಂತರವಾಗಿ ಪ್ರಕಾಶಿತವಾಗುತ್ತಿರುವ ಮುಂಬೈ ಸಮಾಚಾರ್

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮುಂಬೈನ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್ ನಲ್ಲಿ ನಡೆದ ಮುಂಬೈ ಸಮಾಚಾರ್ ದ್ವಿಶತಮಾನೋತ್ಸವದಲ್ಲಿ ಭಾಗವಹಿಸಿದ್ದರು. 1822ರ ಜುಲೈ 1ರಂದು ಫರ್ದುಂಜಿ ಮರ್ಜಬಂಜಿ ಮುಂಬಯಿ ಸಮಾಚಾರ್ ಪತ್ರಿಕೆಯನ್ನು ಸಾಪ್ತಾಹಿಕವಾಗಿ ಪ್ರಕಟಿಸಲು ಪ್ರಾರಂಭಿಸಿದರು ಮತ್ತು ಅದು 1832ರಲ್ಲಿ ಒಂದು ದೈನಿಕವಾಯಿತು. ಈ ಪತ್ರಿಕೆಯು 200 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಈ ಅಸಾಧಾರಣ ಸಾಧನೆಯ ಸ್ಮರಣಾರ್ಥ ಅಂಚೆ ಚೀಟಿಯನ್ನು ಸಹ ಬಿಡುಗಡೆ ಮಾಡಲಾಯಿತು. ■

ರಕ್ಷಣಾ ವಲಯದಲ್ಲಿ ಹೊಸ ಉದ್ಯೋಗಾವಕಾಶಗಳನ್ನು ತೆರೆಯಲಿರುವ 'ಅಗ್ನಿಪಥ್'

ಸಜ್ಜಾಗಲಿದೆ ಯುವ ಪ್ರತಿಭೆಯ ಬಲಿಷ್ಠ ಪಡೆ

ಯುವಕರು ಯಾವುದೇ ರಾಷ್ಟ್ರದ ಬೆನ್ನೆಲುಬು. ಯುವ ಮನಸ್ಸು ರಚನಾತ್ಮಕ ಕಲ್ಪನೆಗಳು ಮತ್ತು ಸೃಜನಶೀಲತೆಯಿಂದ ತುಂಬಿರುತ್ತದೆ. ವಿಶ್ವದ ಯಾವುದೇ ರಾಷ್ಟ್ರವು ತನ್ನ ಯುವ ಶಕ್ತಿಯ ಸಾಮರ್ಥ್ಯಗಳನ್ನು ಬಳಸಿಕೊಳ್ಳದೆ ಬಲಿಷ್ಠವಾಗಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ, ಭಾರತವು ಜನಸಂಖ್ಯೆಯ ಲಾಭವನ್ನು ಹೊಂದಿದ್ದು, ಇದನ್ನು ವಿಶ್ವದ ಅತ್ಯಂತ ಕಿರಿಯ ರಾಷ್ಟ್ರವೆಂದು ಪರಿಗಣಿಸಲಾಗಿದೆ. ಯುವಕರನ್ನು ಸಶಕ್ತಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಅವರನ್ನು ಸಶಕ್ತಗೊಳಿಸಲು ಎರಡು ಪ್ರಮುಖ ನಿರ್ಧಾರಗಳನ್ನು ಕೈಗೊಂಡಿದೆ. ಮೊದಲನೆಯದು- ಯುವಕರಿಗೆ ಸಶಸ್ತ್ರ ಪಡೆಗಳಲ್ಲಿ 4 ವರ್ಷಗಳ ಸೇವೆಯ ಅವಕಾಶವನ್ನು ಒದಗಿಸುವ 'ಅಗ್ನಿಪಥ್' ಯೋಜನೆ ಮತ್ತು ಎರಡನೆಯದು... ಮುಂದಿನ ಒಂದೂವರೆ ವರ್ಷದಲ್ಲಿ ಕೇಂದ್ರ ಸರ್ಕಾರ ಮತ್ತು ಅದರ ಇಲಾಖೆಗಳ ಅಡಿಯಲ್ಲಿ ಅಭಿಯಾನದೋಪಾದಿಯಲ್ಲಿ 10 ಲಕ್ಷ ಹೊಸ ಉದ್ಯೋಗಗಳನ್ನು ಭರ್ತಿ ಮಾಡುವುದಾಗಿದೆ.

ಭಾರತದ ಯುವಶಕ್ತಿಯನ್ನು ಶಿಸ್ತುಬದ್ಧ, ಕುಶಲ ಮತ್ತು ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಕೇಂದ್ರ ಸರ್ಕಾರವು ನಿಯಮಿತವಾಗಿ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಈಗ ಯುವಕರಿಗೆ ತಮ್ಮ ಕನಸುಗಳನ್ನು ನನಸಾಗಿಸಲು ಸಹಾಯ ಮಾಡಲು ಹೊಸ ದಿಕ್ಕನ್ನು ನೀಡುವ ಉದ್ದೇಶದಿಂದ 'ಅಗ್ನಿಪಥ್' ಯೋಜನೆಯನ್ನು ಪ್ರಾರಂಭಿಸಲಾಗಿದೆ. ಜೂನ್ 14ರಂದು ರಕ್ಷಣಾ ವ್ಯವಹಾರಗಳ ಸಂಪುಟ ಸಮಿತಿಯು ಈ ಯೋಜನೆಯನ್ನು ಅನುಮೋದಿಸಿದೆ. ಈ ಯೋಜನೆಯಡಿ, 17.5 ವರ್ಷದಿಂದ 21 ವರ್ಷದೊಳಗಿನ ಯುವಕರಿಗೆ 4 ವರ್ಷಗಳ ಕಾಲ ಸಶಸ್ತ್ರ ಪಡೆಗಳಿಗೆ ಸೇರಿ ಸೇವೆ ಸಲ್ಲಿಸಲು ಅವಕಾಶ ನೀಡಲಾಗುವುದು. ನೇಮಕಾತಿ ಪ್ರಕ್ರಿಯೆಯ ಮೊದಲ ವರ್ಷದಲ್ಲಿ ಗರಿಷ್ಠ ವಯೋಮಿತಿಯಲ್ಲಿ ಎರಡು ವರ್ಷಗಳ ಸಡಿಲಿಕೆಯನ್ನು ನೀಡಲಾಗುತ್ತದೆ...

ಈ ಯೋಧರನ್ನು ಅಗ್ನಿವೀರರು ಎಂದು ಕರೆಯಲಾಗುತ್ತದೆ

- ಸಿಪಾಯಿ ಹುದ್ದೆಗೆ ಹೊಸ ನೇಮಕಾತಿಗಳನ್ನು ಈಗ ಅಗ್ನಿಪಥ್ ಯೋಜನೆಯಡಿ ನಡೆಸಲಾಗುತ್ತದೆ ಮತ್ತು ಅದರ ಅಡಿಯಲ್ಲಿ ನೇಮಕಗೊಂಡ ಸೈನಿಕರನ್ನು ಅಗ್ನಿವೀರ್ ಎಂದು ಕರೆಯಲಾಗುತ್ತದೆ.
- ಅವರು 4 ವರ್ಷಗಳ ಕಾಲ ಸೈನ್ಯದಲ್ಲಿ ಸೇವೆ ಮಾಡುವ ಅವಕಾಶವನ್ನು ಪಡೆಯುತ್ತಾರೆ, ಆದರೆ ಅವರಲ್ಲಿ ಶೇಕಡ 25ರಷ್ಟು ಜನರು ದೀರ್ಘಕಾಲದವರೆಗೆ ಸೈನ್ಯದಲ್ಲಿ ಕೆಲಸ ಮಾಡುವ ಅವಕಾಶವನ್ನು ಪಡೆಯುತ್ತಾರೆ. ಅಂದರೆ, 4 ವರ್ಷಗಳ ನಂತರ, ಈ ಸೈನಿಕರಲ್ಲಿ 25 ಪ್ರತಿಶತದಷ್ಟು ಸೈನಿಕರು ಸಶಸ್ತ್ರ ಪಡೆಗಳಲ್ಲಿ 15 ವರ್ಷಗಳ ಶಾಶ್ವತ ಆಯೋಗಕ್ಕೆ ಅರ್ಹರಾಗಿರುತ್ತಾರೆ.
- ನಾಲ್ಕು ವರ್ಷಗಳ ಸೇವೆಯ ನಂತರ, ಅವರು ಒಂದು ಬಾರಿಯ ನಿಧಿ ಮತ್ತು ತಾಂತ್ರಿಕ ಸಾಮರ್ಥ್ಯದ ಪ್ರಮಾಣಪತ್ರವನ್ನು ಪಡೆಯುತ್ತಾರೆ, ಇದು ಸಾಂಸ್ಥಿಕ ಜಗತ್ತಿನಲ್ಲಿ ಹೊಸ ಉದ್ಯೋಗವನ್ನು ಪಡೆಯಲು ಅವರಿಗೆ ಸಹಾಯ ಮಾಡುತ್ತದೆ. ಈ ಯೋಜನೆಯಡಿ ಮೊದಲ ನೇಮಕಾತಿಯನ್ನು 90 ದಿನಗಳಲ್ಲಿ ಘೋಷಿಸಲಾಗುವುದು.

ಮೆರಿಟ್ ಆಧಾರದ ಮೇಲೆ ನೇಮಕಾತಿ

- ಅಗ್ನಿವೀರ್ ಆಗಲು, 17.5 ರಿಂದ 21 ವರ್ಷದೊಳಗಿನ ದೇಶದ

ಯಾವುದೇ 10 ಮತ್ತು 12 ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಯುವಕರು ಅರ್ಜಿ ಸಲ್ಲಿಸಬಹುದು.

- ಅಗ್ನಿಪಥ್ ಯೋಜನೆಯಡಿ, ಭೂಸೇನೆ, ವಾಯುಪಡೆ ಮತ್ತು ನೌಕಾಪಡೆಯಲ್ಲಿ ನೇಮಕಾತಿಗಾಗಿ ಅಖಿಲ ಭಾರತ ಮೆರಿಟ್ ಆಧಾರಿತ ನೇಮಕಾತಿ ಯೋಜನೆಯನ್ನು ಪರಿಚಯಿಸಲಾಗುವುದು. 10ರ ನಂತರ ಅಗ್ನಿವೀರ್ ಆಗಲಿರುವ ಯುವಕರು ಸೇನೆಯಿಂದಲೇ 12ನೇ ತರಗತಿ ಪ್ರಮಾಣಪತ್ರವನ್ನೂ ಪಡೆಯುತ್ತಾರೆ.
- ಈ ಯೋಜನೆಯಡಿ, ಈ ವರ್ಷ ಸುಮಾರು 46000 ಯುವಕರನ್ನು ನಾಲ್ಕು ವರ್ಷಗಳ ಅವಧಿಗೆ ನೇಮಕ ಮಾಡಿಕೊಳ್ಳಲಾಗುವುದು. ನೇಮಕಾತಿ ಪ್ರಕ್ರಿಯೆಯಲ್ಲಿ ಮಹಿಳೆಯರೂ ಭಾಗವಹಿಸಬಹುದು. ಅಂತಹ ನೇಮಕಾತಿಗಳನ್ನು ಪ್ರತಿ ವರ್ಷ ನಡೆಸಲಾಗುತ್ತದೆ.

ಸಂಬಳ ಮತ್ತು ಸೌಲಭ್ಯಗಳು

- ಮೊದಲ ವರ್ಷದಲ್ಲಿ, ಅಗ್ನಿವೀರ್ ಮಾಸಿಕ 30,000 ರೂ.ಗಳ ವೇತನವನ್ನು ಪಡೆಯುತ್ತಾರೆ, ಅದರಲ್ಲಿ 9,000 ರೂ.ಗಳನ್ನು ಸೇವಾ ನಿಧಿಯಲ್ಲಿ ಠೇವಣಿ ಇಡಲಾಗುತ್ತದೆ. ಅಷ್ಟೇ ಮೊತ್ತವನ್ನು ಸೇನೆಯೂ ಅಗ್ನಿವೀರರ ಖಾತೆಗೆ ಜಮಾ ಮಾಡಲಿದೆ. ಎರಡನೇ ವರ್ಷದಲ್ಲಿ ತಿಂಗಳಿಗೆ 33,000 ಸಾವಿರ ರೂ., ಮೂರನೇ ವರ್ಷದಲ್ಲಿ ತಿಂಗಳಿಗೆ 36,500 ರೂ., ಮತ್ತು ನಾಲ್ಕನೇ ವರ್ಷ ತಿಂಗಳಿಗೆ 40,000 ರೂ. ಇದರೊಂದಿಗೆ, ನಿಯಮಾನುಸಾರ ಪಡಿತರ, ಸಮವಸ್ತ್ರ ಮತ್ತು ಪ್ರಯಾಣ ಭತ್ಯೆಯನ್ನೂ ನೀಡಲಾಗುವುದು.
- ಅಗ್ನಿವೀರ್ ಗೆ 11.71 ಲಕ್ಷ ರೂ.ಗಳನ್ನು ನಾಲ್ಕು ವರ್ಷ ಪೂರ್ಣಗೊಂಡ ನಂತರ ಸೇವಾ ನಿಧಿಯಾಗಿ ನೀಡಲಾಗುವುದು ಮತ್ತು ಇದು ತೆರಿಗೆ ಮುಕ್ತವಾಗಿರುತ್ತದೆ. ಅಗ್ನಿವೀರ್ ಪಿಂಚಣಿ ಅಥವಾ ಗ್ರಾಚ್ಯುಯಿಟಿಯ ಪ್ರಯೋಜನವನ್ನು ಪಡೆಯುವುದಿಲ್ಲ.
- ವಂತಿಗೆ ರಹಿತ ಜೀವ ವಿಮಾ ರಕ್ಷಣೆ 48 ಲಕ್ಷ ರೂ. ಸೇನಾ ಸೇವೆಯ ಸಮಯದಲ್ಲಿ ಸಾವನ್ನಪ್ಪಿದರೆ ಹೆಚ್ಚುವರಿ ಪರಿಹಾರ, ಅಂಗವೈಕಲ್ಯ ಪರಿಹಾರ 44 ಲಕ್ಷ ರೂ. 75, 50 ಮತ್ತು 25 ಪ್ರತಿಶತದಷ್ಟು ಅಂಗವೈಕಲ್ಯದ ಮೇಲೆ ಅವರಿಗೆ ಅನುಕ್ರಮವಾಗಿ 44, 25 ಮತ್ತು 15 ಲಕ್ಷ ರೂ. ಪರಿಹಾರ ನೀಡಲಾಗುತ್ತದೆ.

ಕೌಶಲ್ಯ ಅಭಿವೃದ್ಧಿ ಉಪಕ್ರಮಗಳು

- ಈ ಯೋಜನೆಯಡಿ ನೇಮಕಗೊಂಡ ಅಗ್ನಿವೀರರು ತಮ್ಮ ಸೇವಾ ಅವಧಿಯನ್ನು ಪೂರ್ಣಗೊಳಿಸಿದ ನಂತರ ಇತರ ಕ್ಷೇತ್ರಗಳಲ್ಲಿ ಹೆಚ್ಚಿನ ಉದ್ಯೋಗ ದೊರಕಿಸುವ ದೃಷ್ಟಿಕೋನದೊಂದಿಗೆ ಪ್ರಯತ್ನವನ್ನು ಸಹ ಮಾಡಲಾಗಿದೆ. ಅವರ ಸೇನಾ ನಿಯೋಜನೆಯ ಸಮಯದಲ್ಲಿ ತಾಂತ್ರಿಕ ತರಬೇತಿ, ಡಿಪ್ಲೊಮಾ ಅಥವಾ ಹೆಚ್ಚಿನ ಶಿಕ್ಷಣದ ಅವಕಾಶಗಳನ್ನು ನೀಡಲಾಗುವುದು. ಇದು ಅವರಿಗೆ ಸಾಂಸ್ಥಿಕ ಜಗತ್ತಿನಲ್ಲಿ ಉದ್ಯೋಗ ಪಡೆಯಲು ಸುಲಭವಾಗುತ್ತದೆ.

ಸಶಸ್ತ್ರ ಪಡೆಗಳಿಗೆ ಪ್ರಮುಖ ಉಪಕ್ರಮಗಳು

- ಪ್ರತಿ ವರ್ಷ ಸುಮಾರು 60,000 ಸಿಬ್ಬಂದಿ ಭಾರತೀಯ ಸೇನೆಯಿಂದ ನಿವೃತ್ತರಾಗುತ್ತಾರೆ. ಈ ಖಾಲಿ ಹುದ್ದೆಗಳ ಮುಕ್ತ ನೇಮಕಾತಿಗಾಗಿ ಸೇನೆಯು 100ಕ್ಕೂ ಹೆಚ್ಚು ರ್ಯಾಲಿಗಳನ್ನು ಆಯೋಜಿಸುತ್ತಿತ್ತು. ಈಗ ಅವರನ್ನು ಅಗ್ನಿಪಥ್ ಯೋಜನೆಯ ಮೂಲಕ ನೇಮಕ ಮಾಡಿಕೊಳ್ಳಬಹುದು.
- ಸೇನೆಯ ಶ್ರೇಣಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸೈನಿಕರ ಸರಾಸರಿ ವಯಸ್ಸನ್ನು ಕಡಿಮೆ ಮಾಡುವುದು ಅಗ್ನಿಪಥ್ ಯೋಜನೆಯ ಉದ್ದೇಶವಾಗಿದೆ. ಪ್ರಸ್ತುತ, ಒಬ್ಬ ಸೈನಿಕನ ಸರಾಸರಿ ವಯಸ್ಸು 32 ವರ್ಷಗಳು ಆದರೆ ಹೊಸ ನೇಮಕಾತಿ ಯೋಜನೆಯಲ್ಲಿ, ಅದು 26 ವರ್ಷ ಆಗಲಿದೆ. ■

ಒಂದೂವರೆ ವರ್ಷದಲ್ಲಿ 10 ಲಕ್ಷ ಯುವಕರಿಗೆ ಹೊಸ ಉದ್ಯೋಗ

ಸರ್ಕಾರಿ ಉದ್ಯೋಗಕ್ಕೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಸಿಹಿ ಸುದ್ದಿ ಇದೆ. ಮುಂಬರುವ ಒಂದೂವರೆ ವರ್ಷಗಳಲ್ಲಿ, ಸರ್ಕಾರವು ವಿವಿಧ ಇಲಾಖೆಗಳಲ್ಲಿ ಹತ್ತು ಲಕ್ಷ ಹುದ್ದೆಗಳನ್ನು ಭರ್ತಿ ಮಾಡಲಿದೆ. ಈ ನೇಮಕಾತಿಯನ್ನು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಚಿವಾಲಯಗಳ ಅಡಿಯಲ್ಲಿ ನಡೆಸಲಾಗುವುದು. ಅಂದರೆ, ಪ್ರತಿದಿನ ಸುಮಾರು 1850 ಜನರಿಗೆ ಉದ್ಯೋಗ ನೀಡಲಾಗುವುದು. ಎಲ್ಲಾ ಇಲಾಖೆಗಳು ಮತ್ತು ಸಚಿವಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳ ಸ್ಥಿತಿಗತಿಯನ್ನು ಪರಿಶೀಲಿಸಿದ ನಂತರ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಈ ಉದ್ಯೋಗಗಳನ್ನು ಅಭಿಯಾನದೋಪಾದಿಯಲ್ಲಿ ಅಂದರೆ ಆದಷ್ಟು ಬೇಗ ಭರ್ತಿ ಮಾಡುವ ಸೂಚನೆ ನೀಡಿದ್ದಾರೆ. ಕೇಂದ್ರ ಸರ್ಕಾರದ ಸಚಿವಾಲಯಗಳು ಮತ್ತು ಅಂಚೆ, ರಕ್ಷಣಾ (ನಾಗರಿಕ), ರೈಲ್ವೆ ಮತ್ತು ಕಂದಾಯದಂತಹ ಇಲಾಖೆಗಳಲ್ಲಿ ಹೊಸ ಉದ್ಯೋಗಗಳು ಲಭ್ಯವಾಗುತ್ತವೆ. ಕಳೆದ ವರ್ಷ, ಕೇಂದ್ರದ ಸಹಾಯಕ ಸಚಿವ ಜಿತೇಂದ್ರ ಸಿಂಗ್ ಅವರು ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ, ಮಾರ್ಚ್ 1, 2020 ರವರೆಗೆ, ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ 8.72 ಲಕ್ಷ ಹುದ್ದೆಗಳು ಖಾಲಿ ಇವೆ ಎಂದು ತಿಳಿಸಿದ್ದರು. ಅಂತಹ ಪರಿಸ್ಥಿತಿಯಲ್ಲಿ, ಪ್ರಸ್ತುತ ಈ ಸಂಖ್ಯೆ ಸುಮಾರು 10 ಲಕ್ಷಕ್ಕೆ ಏರುತ್ತಿತ್ತು ಎಂಬುದು ಸ್ಪಷ್ಟವಾಗಿದೆ, ಇದಕ್ಕಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ನೇಮಕಾತಿಯನ್ನು ಪ್ರಾರಂಭಿಸಲು ಆದೇಶಿಸಿದ್ದಾರೆ. ಜಿತೇಂದ್ರ ಸಿಂಗ್ ಅವರು ಕೇಂದ್ರ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಒಟ್ಟು 40 ಲಕ್ಷ 4 ಸಾವಿರ ಹುದ್ದೆಗಳಿವೆ, ಅದರಲ್ಲಿ ಸುಮಾರು 31 ಲಕ್ಷ 32 ಸಾವಿರ ಉದ್ಯೋಗಿಗಳನ್ನು ನೇಮಿಸಲಾಗಿದೆ ಎಂದು ಹೇಳಿದ್ದರು. ಈ ರೀತಿಯಾಗಿ, 8.72 ಲಕ್ಷ ಹುದ್ದೆಗಳ ನೇಮಕಾತಿಯ ಅಗತ್ಯವಿದೆ.

ಡಿಜಿಟಲ್ ಇಂಡಿಯಾ

ಸ್ವಾವಲಂಬನೆಯತ್ತ ಭಾರತದ ಸಂಕಲ್ಪದ ಸಂಕೇತ

ತಂತ್ರಜ್ಞಾನ ಮತ್ತು ನಾವೀನ್ಯತೆಯಿಂದ ಪಾರದರ್ಶಕತೆಗೆ ಭಾರತದ ಪರಿವರ್ತನೆಯಲ್ಲಿ ಡಿಜಿಟಲ್ ಇಂಡಿಯಾ ಒಂದು ಶಕ್ತಿಯುತ ತಾಂತ್ರಿಕ ಪರಿಹಾರವಾಗಿದೆ. ಇದು 21ನೇ ಶತಮಾನದಲ್ಲಿ ಭಾರತದ ಸಂಕಲ್ಪ, ಸ್ವಾವಲಂಬನೆ ಮತ್ತು ಸಬಲೀಕರಣದ ಸಂಕೇತವಾಗಿದೆ. ನಗದುರಹಿತ ಮತ್ತು ಡಿಜಿಟಲ್ ಆರ್ಥಿಕತೆಯ ಮೂಲಕ ಜಾಗತಿಕ ಬಿಕ್ಕಟ್ಟಿನ ನಡುವೆಯೂ ನಾಗರಿಕರನ್ನು ಸಬಲೀಕರಣಗೊಳಿಸುವಲ್ಲಿ ಪ್ರವರ್ತಕರಾದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗಿಂತ ಯಾರು ಚೆನ್ನಾಗಿ ಡಿಜಿಟಲ್ ಶಕ್ತಿಯನ್ನು ಅರ್ಥಮಾಡಿಕೊಳ್ಳುತ್ತಾರೆ? ಇದಕ್ಕಾಗಿಯೇ; ಜುಲೈ 1, 2015 ರಂದು ಪ್ರಧಾನಮಂತ್ರಿ ಮೋದಿ ಡಿಜಿಟಲ್ ಇಂಡಿಯಾವನ್ನು ಪ್ರಾರಂಭಿಸಿದರು. ಡಿಜಿಟಲ್ ಇಂಡಿಯಾ ಸರ್ಕಾರ ಮತ್ತು ಜನರ ನಡುವಿನ ಅಂತರ, ವ್ಯವಸ್ಥೆಗಳು ಮತ್ತು ಸೌಲಭ್ಯಗಳು, ಸಮಸ್ಯೆಗಳು ಮತ್ತು ಪರಿಹಾರಗಳ ನಡುವಿನ ಅಂತರವನ್ನು ಕಡಿಮೆ ಮಾಡುವ ಮೂಲಕ ಸಾಮಾನ್ಯ ನಾಗರಿಕನನ್ನು ಸಶಕ್ತಗೊಳಿಸುತ್ತದೆ.

> ಡಿಜಿಟಲ್ ಇಂಡಿಯಾ ಎಂದರೆ ಸಮಯ, ಶ್ರಮ ಮತ್ತು ಹಣದ ಉಳಿತಾಯ. ಡಿಜಿಟಲ್ ಇಂಡಿಯಾ ಎಂದರೆ ತ್ವರಿತ ಲಾಭ, ಪೂರ್ಣ ಲಾಭ. ಡಿಜಿಟಲ್ ಇಂಡಿಯಾ ಎಂದರೆ ಕನಿಷ್ಠ ಸರ್ಕಾರ ಮತ್ತು ಗರಿಷ್ಠ ಆಡಳಿತ ಎಂದರ್ಥ. ಗಾತ್ರ ಮತ್ತು ವೇಗದ ಮೇಲೂ ಬಲವಾದ ಒತ್ತು ಇದ್ದು, ಇದರೊಂದಿಗೆ ಡಿಜಿಟಲ್ ಇಂಡಿಯಾದ ಮೂಲಸೌಕರ್ಯವನ್ನು ನಿರ್ಮಿಸಲಾಗುತ್ತದೆ.
>
> **ನರೇಂದ್ರ ಮೋದಿ, ಪ್ರಧಾನಮಂತ್ರಿ.**

ಉತ್ತರ ಪ್ರದೇಶದ ಶಹಜಹಾನ್ಪುರದ ಸಾಮಾನ್ಯ ಸೇವಾ ಕೇಂದ್ರದ (ಸಿಎಸ್ಸಿ) ಮಾಲೀಕ ಗುರ್‌ದೀಪ್ ಸಿಂಗ್ ಅವರು ಬೇರೆ ಯಾವುದೇ ಆದಾಯದ ಮೂಲವಿಲ್ಲದ ಕಾರಣ ಈ ಕೆಲಸವನ್ನು ಪ್ರಾರಂಭಿಸಿದರು. ಈಗ ಅವರು 20 ಜನರಿಗೆ ಉದ್ಯೋಗ ನೀಡಿದ್ದಾರೆ.

ಲಡಾಖ್ ನ ಜೊಂಡ್ರೋ ಎಂ. ಸಂಗ್ಮಾ ಪಿಂಚಣಿಗಾಗಿ ಜೀವನ ಪ್ರಮಾಣಪತ್ರವನ್ನು ಸಲ್ಲಿಸಲು ವರ್ಷಕ್ಕೊಮ್ಮೆ ತಮ್ಮ ಮನೆಯಿಂದ ಎರಡರಿಂದ ಮೂರು ಕಿಲೋಮೀಟರ್ ದೂರದ ಬ್ಯಾಂಕಿಗೆ ಹೋಗಬೇಕಾಗಿತ್ತು. "ನಾನು ಉಮಂಗ್ ಅಪ್ಲಿಕೇಶನ್ ಅನ್ನು ಡೌನ್ಲೋಡ್ ಮಾಡಿಕೊಂಡಿದ್ದು, ಈಗ ಮನೆಯಲ್ಲಿ ಕುಳಿತೇ ಜೀವನ ಪ್ರಮಾಣಪತ್ರವನ್ನು ಡಿಜಿಟಲ್ ಆಗಿ ಸಲ್ಲಿಸಬಹುದು" ಎಂದು ಅವರು ವಿವರಿಸುತ್ತಾರೆ. ಸಂಗ್ಮಾ ಎಲ್ಲರಿಗೂ ಉಮಂಗ್ ಅಪ್ಲಿಕೇಶನ್ ಅನ್ನು ಡೌನ್ಲೋಡ್ ಮಾಡಲು ಮತ್ತು ಅನುಮೋದಿತ ಬಯೋಮೆಟ್ರಿಕ್ ಸಾಧನಗಳನ್ನು ಖರೀದಿಸಲು ಸಲಹೆ ನೀಡುತ್ತಾರೆ.

ಅದೇ ರೀತಿ, ಬಿಹಾರದ ಐಟಿ ವೃತ್ತಿಪರ ಚಂದನ್ ಕುಮಾರ್ ಅವರು ಡಿಜಿಲಾಕರ್ ನಲ್ಲಿ ನಿಲ್ಲಿಸಲಾದ ನೋಂದಣಿ ಪ್ರಮಾಣಪತ್ರ (ಆರ್.ಸಿ.) ದೊಂದಿಗೆ ಅಪಘಾತಕ್ಕೀಡಾದ ಕಾರಿಗೆ ವಿಮಾ ಕ್ಲೇಮ್ ಅನ್ನು ಪಡೆದರು. ಅವರು 2016 ರಲ್ಲಿ ಕಾರು ಖರೀದಿಸಲು ಬ್ಯಾಂಕಿನಿಂದ ಹಣ ಸಾಲ ಪಡೆದಿದ್ದರು. ಅವರು ಬ್ಯಾಂಕ್ ಸಾಲವನ್ನು ಮರುಪಾವತಿಸಿದರು, ಆದರೆ ಲಾಕ್ ಡೌನ್ ನಿಂದಾಗಿ, ಗುರ್ಗಾಂವ್ ನ ಅವರ ಬಾಡಿಗೆ ಮನೆಗೆ ಪ್ರಾಧಿಕಾರದ ಪತ್ರವು ತಲುಪಲಿಲ್ಲ. 2021 ರಲ್ಲಿ ಕಾರು ಅಪಘಾತಕ್ಕೀಡಾದಾಗ, ಡಿಜಿಲಾಕರ್ ನ ಆರ್.ಸಿ.ಯನ್ನು ವಿಮಾ ಕ್ಲೇಮ್ ಸಲ್ಲಿಸಲು ಬಳಸಲಾಯಿತು, ಇದನ್ನು ವಿಮಾ ಕಂಪನಿ ಒಪ್ಪಿಕೊಂಡಿತು.

ಜುಲೈ 1, 2015 ರಂದು ಪ್ರಾರಂಭಿಸಲಾದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಡಿಜಿಟಲ್ ಇಂಡಿಯಾ ಉಪಕ್ರಮವು ಜನರ ಜೀವನವನ್ನು ಹೇಗೆ ಸುಗಮಗೊಳಿಸಿದೆ ಎಂಬುದಕ್ಕೆ ಇವು ಕೆಲವು ಉದಾಹರಣೆಗಳಾಗಿವೆ. ಕನಿಷ್ಠ ಸರ್ಕಾರ- ಗರಿಷ್ಠ ಆಡಳಿತದೊಂದಿಗೆ ದೇಶದಲ್ಲಿ ಸುಗಮ ವ್ಯಾಪಾರ ಮಾಡುವ ಮತ್ತು ಸುಗಮ ಜೀವನ ಮಟ್ಟವು ನಿರಂತರವಾಗಿ ಸುಧಾರಿಸುತ್ತಿದೆ. ಪಾರದರ್ಶಕತೆ ಬಂದಿದೆ, ಮತ್ತು ಡಿಜಿಟಲ್ ಇಂಡಿಯಾ ಭ್ರಷ್ಟಾಚಾರವನ್ನು ಕೊನೆಗಾಣಿಸಲು ಶ್ರಮಿಸುತ್ತಿದೆ. ಡಿಜಿಟಲ್

ಈ ಕೆಳಗಿನ ದತ್ತಾಂಶದೊಂದಿಗೆ ಡಿಜಿಟಲ್ ಇಂಡಿಯಾದ ಮಹತ್ವವನ್ನು ಅರ್ಥಮಾಡಿಕೊಳ್ಳಬಹುದು

ನೇರ ಸವಲತ್ತು ವರ್ಗಾವಣೆ

2014-2015 ರಿಂದ 2022ರ ಜೂನ್ 2 ರವರೆಗೆ, ಅಂದಾಜು 2.27 ಲಕ್ಷ ಕೋಟಿ ರೂ.ಗಳನ್ನು ನೇರವಾಗಿ ಫಲಾನುಭವಿಗಳ ಖಾತೆಗಳಿಗೆ ವರ್ಗಾಯಿಸಲಾಗಿದೆ. ಭ್ರಷ್ಟಾಚಾರದ ಕಾರಣ ಹಣ ಸೋರಿಕೆಗೆ ಕಾರಣವಾಗಿರುವ ಭ್ರಷ್ಟಾಚಾರವನ್ನು ಜಾಮ್ ತ್ರಿವಳಿಯಿಂದ ಕೊನೆಗಾಣಿಸಲಾಗುತ್ತಿದೆ.

- ದೇಶಾದ್ಯಂತ 132 ಕೋಟಿಗೂ ಹೆಚ್ಚು ನಿವಾಸಿಗಳಿಗೆ ಆಧಾರ್ ಸಂಖ್ಯೆಗಳನ್ನು ನೀಡಲಾಗಿದೆ.
- ಸರ್ಕಾರದ ಇ-ಮಾರುಕಟ್ಟೆ ತಾಣ (ಜಿಇಎಂ) ದಲ್ಲಿ, 25.52 ಲಕ್ಷ ಕೋಟಿ ರೂ.ಗಳ ಮೌಲ್ಯದ ಸರಕುಗಳನ್ನು ಆರ್ಡರ್ ಮಾಡಲಾಗಿದೆ. ಈ ವೇದಿಕೆಯು 40 ಲಕ್ಷಕ್ಕೂ ಹೆಚ್ಚು ವ್ಯಾಪಾರಿಗಳನ್ನು ಒಂದೆಡೆ ಕಲೆಹಾಕಿದೆ.
- ಡಿಜಿಲಾಕರ್ 92.3 ದಶಲಕ್ಷ ಬಳಕೆದಾರರನ್ನು ಹೊಂದಿದೆ ಮತ್ತು 5.10 ಶತಕೋಟಿ ದಾಖಲೆಗಳನ್ನು ವಿತರಿಸಿದೆ.
- ಭಾರತ್ ನೆಟ್ ಯೋಜನೆಯ ಭಾಗವಾಗಿ ದೇಶಾದ್ಯಂತ 1.77 ಲಕ್ಷಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳಲ್ಲಿ ಆಪ್ಟಿಕಲ್ ಫೈಬರ್ ಕೇಬಲ್ ಗಳು ಮತ್ತು ಸಂಬಂಧಿತ ಉಪಕರಣಗಳನ್ನು ಸ್ಥಾಪಿಸಲಾಗಿದೆ.
- 2014ರಿಂದ, ಸುಮಾರು 5.70 ಕೋಟಿ ಪ್ರಮಾಣಪತ್ರಗಳನ್ನು ಇ-ಜೀವನ್ ಪ್ರಮಾಣ್ ಮೂಲಕ ವಿತರಿಸಲಾಗಿದೆ. ದೇಶದಲ್ಲಿ ಒಂದೇ ಮಂಡಿಯ ಕಲ್ಪನೆಯ ಮೇಲೆ ಸ್ಥಾಪಿಸಲಾದ ಇ-ನ್ಯಾಮ್ ವೇದಿಕೆಯಲ್ಲಿ 1.73 ಕೋಟಿಗೂ ಹೆಚ್ಚು ರೈತರು ನೋಂದಾಯಿಸಿಕೊಂಡಿದ್ದಾರೆ.
- ದೇಶಾದ್ಯಂತ 45.55 ಕೋಟಿಗೂ ಹೆಚ್ಚು ಜನ್ ಧನ್ ಖಾತೆಗಳನ್ನು ತೆರೆಯಲಾಗಿದೆ.
- 4.94 ಲಕ್ಷ ಸಾಮಾನ್ಯ ಸೇವಾ ಕೇಂದ್ರಗಳನ್ನು (ಸಿಎಸ್ಸಿ) ಸ್ಥಾಪಿಸಲಾಗಿದ್ದು, ಇದು ಉದ್ಯೋಗ ಮತ್ತು ಸೇವೆಗಳನ್ನು ಒದಗಿಸುತ್ತಿದೆ.
- ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್ ಮೂಲಕ, ಬ್ಯಾಂಕ್ ಆಪ್ಕೆ ದ್ವಾರ್ ಸೇವೆಯ ಅಡಿಯಲ್ಲಿ 1.02 ಲಕ್ಷಕ್ಕೂ ಹೆಚ್ಚು ಪೋಸ್ಟ್ ಪೇಮೆಂಟ್ ಬ್ಯಾಂಕ್ ಗಳನ್ನು ಸ್ಥಾಪಿಸಲಾಗಿದೆ.
- ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್ 8.39 ಕೋಟಿಗೂ ಹೆಚ್ಚು ಅರ್ಜಿಗಳನ್ನು ಪರಿಶೀಲಿಸಿದೆ.
- ಉಮಂಗ್ ಮೊಬೈಲ್ ಅಪ್ಲಿಕೇಶನ್ 279 ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳಿಂದ 20,527 ಸೇವೆಗಳನ್ನು ಮತ್ತು 33 ರಾಜ್ಯ ಸಂಸ್ಥೆಗಳಿಂದ 1417 ಸೇವೆಗಳನ್ನು ಒಳಗೊಂಡಿದೆ.
- ಇ-ಸಿಗ್ನೇಚರ್ ಸೇವೆಯಿಂದ ಪ್ರಮಾಣೀಕರಿಸಿದ ದಾಖಲೆಗಳ ಮೇಲೆ ಸಹಿಗಳನ್ನು ಹಾಕಲಾಗುತ್ತಿದೆ. ಫೆಬ್ರವರಿ 2022 ರವರೆಗೆ ಸುಮಾರು 29 ಕೋಟಿ ಇ-ಸಹಿಗಳನ್ನು ವಿತರಿಸಲಾಗಿದೆ.

ಯುನಿಫೈಡ್ ಪೇಮೆಂಟ್ಸ್ ಇಂಟರ್ಫೇಸ್ (ಯುಪಿಐ):
ಒಂದೇ ಮೊಬೈಲ್ ಅಪ್ಲಿಕೇಶನ್ ಮೂಲಕ, ಈ ಡಿಜಿಟಲ್ ಪಾವತಿ ವೇದಿಕೆಯಲ್ಲಿ ಅನೇಕ ಬ್ಯಾಂಕುಗಳ ಖಾತೆಗಳನ್ನು ಲಿಂಕ್ ಮಾಡಬಹುದು. ಫೆಬ್ರವರಿ 2022 ರವರೆಗೆ, 229 ಬ್ಯಾಂಕುಗಳು ಯುಪಿಐ ಸೇವೆಗೆ ಸೇರಿಕೊಂಡಿವೆ.

ಮೊಬೈಲ್ ಹ್ಯಾಂಡ್ ಸೆಟ್ ತಯಾರಿಕೆ:
ಭಾರತವು ಈಗ ಮೊಬೈಲ್ ಹ್ಯಾಂಡ್ ಸೆಟ್ ಗಳ ತಯಾರಿಕೆಯಲ್ಲಿ ವಿಶ್ವದ ಎರಡನೇ ಅತಿದೊಡ್ಡ ರಾಷ್ಟ್ರವಾಗಿದೆ. 2014 ರಲ್ಲಿ, ಕೇವಲ ಎರಡು ಕಾರ್ಖಾನೆಗಳು ಮಾತ್ರ ಸೆಲ್ಯುಲಾರ್ ಫೋನ್ ಗಳು ಮತ್ತು ಅವುಗಳ ಬಿಡಿಭಾಗಗಳನ್ನು ಉತ್ಪಾದಿಸುತ್ತಿದ್ದವು, ಇದು 2021 ರ ವೇಳೆಗೆ 200 ಕ್ಕೆ ಏರಿದೆ.

ರೂಪೇ ಪೇಮೆಂಟ್ ಗೇಟ್ ವೇ:
ರೂಪೇ ಪೇಮೆಂಟ್ ಗೇಟ್ ವೇ ಭಾರತದ ಮೊದಲ ಜಾಗತಿಕ ಪಾವತಿ ಜಾಲವಾಗಿದೆ. ರೂಪೇ ಕಾರ್ಡ್ ಗಳನ್ನು 70 ಕೋಟಿ ಭಾರತೀಯರು ಬಳಸುತ್ತಾರೆ. ಬಳಸಲು ಸರಳವಾದ ರೂಪೇ ಪಾವತಿ ಗೇಟ್ ವೇ ಸೇವೆ ಸಿಂಗಾಪುರ, ಯುನೈಟೆಡ್ ಅರಬ್ ಎಮಿರೇಟ್ಸ್, ಭೂತಾನ್ ಮತ್ತು ನೇಪಾಳದಲ್ಲಿ ಲಭ್ಯವಿದೆ.

ಇ-ಡಿಸ್ಟ್ರಿಕ್ಟ್ ಅಭಿಯಾನದೋಪಾದಿಯ ಯೋಜನೆ (ಎಂಎಂಪಿ):
ದೇಶಾದ್ಯಂತ 709 ಜಿಲ್ಲೆಗಳಲ್ಲಿ 3916 ಇ-ಡಿಸ್ಟ್ರಿಕ್ಟ್ ಸೇವೆಗಳನ್ನು ಪ್ರಾರಂಭಿಸಲಾಗಿದೆ.

ಡಿಜಿಟಲ್ ಇಂಡಿಯಾ ಯೋಜನೆಗಳ ಅನಾವರಣ

ಡಿಜಿಟಲ್ ಕರೆನ್ಸಿ: ಕೇಂದ್ರೀಯ ಬ್ಯಾಂಕ್ ಡಿಜಿಟಲ್ ಕರೆನ್ಸಿಯನ್ನು ಅಂದರೆ ಡಿಜಿಟಲ್ ರೂಪಾಯಿಯನ್ನು ಪ್ರಾರಂಭಿಸುವ ಘೋಷಣೆಯನ್ನು ಪ್ರಸಕ್ತ ಹಣಕಾಸು ವರ್ಷದ ಬಜೆಟ್ ನಲ್ಲಿ ಮಾಡಿದೆ. ಪ್ರಸ್ತುತ ನಮ್ಮ ಭೌತಿಕ ಕರೆನ್ಸಿಯಾಗಿರುವ ಈ ಡಿಜಿಟಲ್ ರೂಪಾಯಿಯನ್ನು ಆರ್. ಬಿ.ಐ ನಿಯಂತ್ರಿಸುತ್ತದೆ ಮತ್ತು ಮೇಲ್ವಿಚಾರಣೆ ಮಾಡುತ್ತದೆ.

ಇ-ಪಾಸ್ಪೋರ್ಟ್ ಸೇವೆ: ಪ್ರಸಕ್ತ ಹಣಕಾಸು ವರ್ಷದಲ್ಲಿ ನಾಗರಿಕರು ಇ-ಪಾಸ್ಪೋರ್ಟ್ ಗಳನ್ನು ಪಡೆಯುತ್ತಾರೆ ಎಂದು ಸರ್ಕಾರ ಘೋಷಿಸಿದೆ. ಇ-ಪಾಸ್ಪೋರ್ಟ್ ಗಾಗಿ ಚಿಪ್ ಖರೀದಿಯನ್ನು ಸಹ ಪ್ರಾರಂಭಿಸಲಾಗಿದೆ, ಇದರಲ್ಲಿ ಎಂಬೆಡೆಡ್ ರೇಡಿಯೋ ಫ್ರೀಕ್ವೆನ್ಸಿ ಐಡೆಂಟಿಫಿಕೇಶನ್ (ಐಎಫ್ಐ) ಚಿಪ್ ಮತ್ತು ಹಿಂಭಾಗದ ಕವರ್ ನಲ್ಲಿ ಅಂತರ್ಗತವಾಗಿ ಹುದುಗಿಸಲಾದ ಆಂಟೆನಾ ಒಳಗೊಂಡಿರುತ್ತದೆ.

ಈ ವರ್ಷ 5ಜಿ ಆರಂಭ: 5ಜಿ ಅಪ್ಲಿಕೇಶನ್ ಗಳನ್ನು ಪ್ರಯೋಗಿಸಲು ಮತ್ತು ಪ್ರದರ್ಶಿಸಲು 224 ಕೋಟಿ ರೂ.ಗಳ ವೆಚ್ಚದಲ್ಲಿ ದೇಶೀಯ 5 ಜಿ ಪರೀಕ್ಷಾ ವೇದಿಕೆಯನ್ನು ಸಹ ಸ್ಥಾಪಿಸಲಾಗಿದೆ. ಈಗ 5ಜಿ ತರಂಗಾಂತರಗಳ ಹರಾಜಿಗೆ ಸಚಿವ ಸಂಪುಟ ಅನುಮೋದನೆ ನೀಡಿದೆ. 2022 ರಲ್ಲಿ 5 ಜಿ ನೆಟ್ವರ್ಕ್ ಅನ್ನು ಕ್ರಮೇಣ ಪ್ರಾರಂಭಿಸುವ ಯೋಜನೆಗಳಿವೆ.

ಸೂಪರ್ ಕಂಪ್ಯೂಟರ್ ಗಳಲ್ಲಿ ಶಕ್ತಿಯುತ ಹಂತಗಳು

ಸೂಪರ್ ಕಂಪ್ಯೂಟರ್ ಗಳು ನಾವಿನ್ಯತೆ, ಸಂಶೋಧನೆ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಪ್ರತಿಯೊಂದು ದೇಶದ ಯಶಸ್ಸಿಗೆ ಕೀಲಿಕೈಗಳಾಗಿವೆ. ಇದಕ್ಕಾಗಿಯೇ, ನ್ಯಾಷನಲ್ ಸೂಪರ್ ಕಂಪ್ಯೂಟಿಂಗ್ ಅಭಿಯಾನದ (ಎನ್ಎಸ್ಎಂ) ಭಾಗವಾಗಿ, 2022 ರ ಅಂತ್ಯದ ವೇಳೆಗೆ 74 ಸಂಸ್ಥೆಗಳಿಗೆ ಹೆಚ್ಚಿನ ಕಂಪ್ಯೂಟಿಂಗ್ ಸೌಲಭ್ಯಗಳನ್ನು ಒದಗಿಸುವ ಗುರಿಯನ್ನು ಸರ್ಕಾರ ನಿಗದಿಪಡಿಸಿದೆ. ಎನ್ಎಸ್ಎಂ ಕಾರ್ಯಕ್ರಮದ ಅಡಿಯಲ್ಲಿ, ಮುಂದುವರಿದ ಕಂಪ್ಯೂಟಿಂಗ್ ಅಭಿವೃದ್ಧಿ ಕುರಿತ ಕೇಂದ್ರ (ಸೆಂಟರ್ ಫಾರ್ ಡೆವಲಪ್ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್) ಹಾಗೂ ವಿಧ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು "ಪರಮ್ ಸಿದ್ಧಿ ಎಐ ಸೂಪರ್ ಕಂಪ್ಯೂಟರ್' ಅನ್ನು ಅಭಿವೃದ್ಧಿಪಡಿಸಲು ಒಗ್ಗೂಡಿವೆ. 2015ರಲ್ಲಿ ನಿರ್ಮಿಸಲಾದ ಇದು ದೇಶದ ಅತ್ಯಂತ ಶಕ್ತಿಶಾಲಿ ಮತ್ತು ವೇಗದ ಸೂಪರ್ ಕಂಪ್ಯೂಟರ್ ಆಗಿದೆ. ವಿಶ್ವದ ಅಗ್ರ 500 ಸೂಪರ್ ಕಂಪ್ಯೂಟರ್ ಗಳ ಪಟ್ಟಿಯಲ್ಲಿ ಇದು 63ನೇ ಸ್ಥಾನದಲ್ಲಿದೆ.

ಈ ದಶಕವು ಭಾರತದ ಡಿಜಿಟಲ್ ತಂತ್ರಜ್ಞಾನ ಸಾಮರ್ಥ್ಯ ಗಮನಾರ್ಹವಾಗಿ ಸುಧಾರಿಸುವುದನ್ನು ಮತ್ತು ಜಾಗತಿಕ ಡಿಜಿಟಲ್ ಆರ್ಥಿಕತೆಯಲ್ಲಿ ಅದರ ಪಾಲು ಬೆಳೆಯುವುದನ್ನು ಕಾಣುತ್ತದೆ. 5ಜಿ ತಂತ್ರಜ್ಞಾನದ ಪರಿಣಾಮವಾಗಿ ಜಗತ್ತು ಗಮನಾರ್ಹ ಬದಲಾವಣೆಗಳನ್ನು ಕಾಣಲಿದ್ದು, ಭಾರತವು ತನ್ನದೇ ಆದ 5ಜಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುತ್ತಿದೆ. ಡಿಜಿಟಲ್ ಸಬಲೀಕರಣವು ದೇಶವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲು ಸರ್ಕಾರದೊಂದಿಗೆ ಶ್ರಮಿಸುತ್ತಿರುವ ಭಾರತದ ಯುವಕರನ್ನು ಸಶಕ್ತಗೊಳಿಸುತ್ತಿದೆ. ಡಿಜಿಟಲ್ ಇಂಡಿಯಾ ಈ ದಶಕವನ್ನು "ಭಾರತದ ಟೆಕೇಡ್" ಮಾಡಲು ಸಹಾಯ ಮಾಡುತ್ತಿದೆ.

ಇಂಡಿಯಾ ಒಂದು ಶಕ್ತಿಶಾಲಿ ಭಾರತದ ಅಭಿವ್ಯಕ್ತಿಯಾಗಿದೆ.

ಡಿಜಿಟಲ್ ಇಂಡಿಯಾ ದೇಶದಲ್ಲಿ ಮೌನ ಕ್ರಾಂತಿಗೆ ನಾಂದಿ ಹಾಡುತ್ತಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ನಂಬಿದ್ದಾರೆ. ಡಿಜಿಟಲ್ ವಹಿವಾಟಿನಿಂದ ರೈತರ ಬದುಕು ಬದಲಾಗಿದೆ.

ಡಿಜಿಟಲ್ ಸಶಕ್ತರಾಗಿರುವ ಯುವಕರು ಭಾರತವನ್ನು ಈ ದಶಕದ 'ಟೆಕೇಡ್' ಆಗಿ ಮಾಡುತ್ತಾರೆ. ಬಡವರು ಡಿಜಿಟಲ್ ಇಂಡಿಯಾ ಮತ್ತು ಅಗ್ಗದ ಡೇಟಾದಲ್ಲಿ ಆಸಕ್ತಿ ಹೊಂದಿಲ್ಲ ಎಂದು ಈ ಹಿಂದೆ ಹೇಳುತ್ತಿದ್ದವರು ಈಗ 21 ನೇ ಶತಮಾನದಲ್ಲಿ ಡಿಜಿಟಲ್ ಇಂಡಿಯಾದ ಶಕ್ತಿಯನ್ನು ಕಣ್ಣಾರೆ ಕಾಣುತ್ತಿದ್ದಾರೆ.

ನೀತಿ ಆಯೋಗದ 'ನವ ಭಾರತಕ್ಕಾಗಿ ಕಾರ್ಯತಂತ್ರ @ 75' ವರದಿಯ ಪ್ರಕಾರ, 2022-2023ರ ವೇಳೆಗೆ ಭಾರತದಲ್ಲಿ ಡಿಜಿಟಲ್ ವಿಭಜನೆಯನ್ನು ನಿವಾರಿಸುವ ಅಗತ್ಯವಿದೆ. ಇದನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರವು 2014ರಿಂದ ಡಿಜಿಟಲ್ ಸಾಕ್ಷರತೆಗೆ ಆದ್ಯತೆ ನೀಡಿದೆ. ರಾಷ್ಟ್ರೀಯ ಡಿಜಿಟಲ್ ಸಾಕ್ಷರತಾ ಅಭಿಯಾನ ಮತ್ತು ಡಿಜಿಟಲ್ ಸಾಕ್ಷರತಾ ಅಭಿಯಾನ ಎಂಬ ಎರಡು ಯೋಜನೆಗಳನ್ನು ಜಾರಿಗೆ ತರಲಾಗಿದ್ದು, ಮಾರ್ಚ್ 31, 2022 ರವರೆಗೆ 53.67 ಲಕ್ಷ ಫಲಾನುಭವಿಗಳು ಪ್ರಮಾಣೀಕರಿಸಿದ್ದಾರೆ. 6 ಕೋಟಿ ಕುಟುಂಬಗಳನ್ನು ಒಳಗೊಳ್ಳುವ ಮೂಲಕ ಗ್ರಾಮೀಣ ಭಾರತಕ್ಕೆ ಡಿಜಿಟಲ್ ಸಾಕ್ಷರತೆಯನ್ನು ತರಲು ಪ್ರಧಾನಮಂತ್ರಿ ಗ್ರಾಮೀಣ ಡಿಜಿಟಲ್ ಸಾಕ್ಷರತಾ ಅಭಿಯಾನಕ್ಕೆ ಪ್ರತಿ ಮನೆಗೆ ಒಬ್ಬ ವ್ಯಕ್ತಿಯೊಂದಿಗೆ ಅನುಮೋದನೆ ನೀಡಲಾಗಿದೆ. ಈ ಯೋಜನೆಯಲ್ಲಿ 5.78 ಕೋಟಿ ಅಭ್ಯರ್ಥಿಗಳನ್ನು ನೋಂದಾಯಿಸಲಾಗಿದ್ದು, ಅವರಲ್ಲಿ 4.90 ಕೋಟಿ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ. ಐಟಿ ನಿಯಮಗಳು 2021 ಎಂದೂ ಕರೆಯಲಾಗುವ ಮಾಹಿತಿ ತಂತ್ರಜ್ಞಾನ (ಮಧ್ಯಂತರ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿ ಸಂಹಿತೆ) ನಿಯಮಗಳು 2021 ಅನ್ನು ಸರ್ಕಾರ ಫೆಬ್ರವರಿ 25, 2021 ರಂದು ಘೋಷಿಸಿತು. ಇಂಟರ್ನೆಟ್ ಮತ್ತು ಡಿಜಿಟಲ್ ಬಳಕೆದಾರರಿಗೆ ಮುಕ್ತ, ಸುರಕ್ಷಿತ, ವಿಶ್ವಾಸಾರ್ಹ ಮತ್ತು ಉತ್ತರದಾಯಿತ್ವದ ಇಂಟರ್ನೆಟ್ ಅನ್ನು ಖಚಿತಪಡಿಸುವುದು ನಿಯಮಗಳ ಉದ್ದೇಶವಾಗಿದೆ. ■



ಒಂದು ರಾಷ್ಟ್ರ ಒಂದು ತೆರಿಗೆ

ಜಾಗತಿಕ ಪ್ರಕ್ಷುಬ್ಧತೆ ಮತ್ತು ಧ್ರುವೀಕರಣದ ನಡುವೆ, ಭಾರತವು ಇಂದು ಜಾಗತಿಕ ವೇದಿಕೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ, 2014ರ ನಂತರ ಪ್ರಾರಂಭವಾದ ಸುಧಾರಣೆಗಳಿಗೆ ಧನ್ಯವಾದಗಳು. ಕಾನೂನುಗಳು ಮತ್ತು ಅನುಸರಣೆಯ ಜಾಲವನ್ನು ತೆಗೆದುಹಾಕುವ ಮೂಲಕ ಎಲ್ಲಾ ಸಂಕೋಲೆಗಳನ್ನು ಮುರಿಯಲಾಗಿದೆ. ಜಿಎಸ್ಟಿ (ಸರಕು ಮತ್ತು ಸೇವಾ ತೆರಿಗೆ) ಅಂತಹ ಒಂದು ಸುಧಾರಣೆಯಾಗಿದೆ, ಇದನ್ನು ಅಟಲ್ ಬಿಹಾರಿ ವಾಜಪೇಯಿ ಅವರು ಮೊದಲು ಈ ಕಲ್ಪನೆ ರೂಪಿಸಿದ್ದರು. ಆದರೆ 17 ವರ್ಷಗಳ ನಂತರ ಜುಲೈ 1, 2017 ರಂದು ಇದು ವಾಸ್ತವವಾಯಿತು. ಜಿಎಸ್ಟಿಯು ನೂರಾರು ವಿಭಿನ್ನ ತೆರಿಗೆ ಬಲೆಗಳನ್ನು ತೆಗೆದುಹಾಕಿದ್ದಲ್ಲದೆ, ಸಾಮಾನ್ಯ ಜನರ ಜೀವನ ಮತ್ತು ವ್ಯವಹಾರದಲ್ಲಿ ಹೊಸ ಸೇವೆಗಳನ್ನು ಪರಿಚಯಿಸಿತು.

ನಾವು ಒಂದು ರಾಷ್ಟ್ರದ ಅಭಿವೃದ್ಧಿಯಲ್ಲಿ ಹೊಸ ಮಟ್ಟವನ್ನು ಅಥವಾ ಹಂತವನ್ನು ತಲುಪಲು ಪ್ರಯತ್ನಿಸುವ ಸಂದರ್ಭಗಳಿವೆ. ಜೂನ್ 30 ಮತ್ತು ಜುಲೈ 1 ರ ರಾತ್ರಿಯಲ್ಲಿ, ದೇಶವು 17 ವರ್ಷಗಳ ಪಯಣವನ್ನು ಪೂರ್ಣಗೊಳಿಸುವ ಮೂಲಕ ಅತ್ಯುತ್ತಮ ಒಕ್ಕೂಟ ವ್ಯವಸ್ಥೆಯನ್ನು ಪ್ರದರ್ಶಿಸಿತು. ಜಿಎಸ್ಟಿ ಆರ್ಥಿಕ ಕ್ರಾಂತಿಯಾಗಿ ಮಾರ್ಪಟ್ಟು, ಇಡೀ ದೇಶಕ್ಕೆ ನಿರ್ದೇಶನವನ್ನು ನೀಡಿತು ಮತ್ತು ಆರ್ಥಿಕತೆಗೆ ಹೊಸ ಆಯಾಮವನ್ನು ನೀಡಿತು. ಕಾಶ್ಮೀರದಿಂದ ಹಿಡಿದು ಪೋರ್ಟ್ ಬ್ಲೇರ್, ಗುಜರಾತ್ ನಿಂದ ಅರುಣಾಚಲ ಪ್ರದೇಶದವರೆಗೆ ದೇಶದಲ್ಲಿ 500 ವಿವಿಧ ರೀತಿಯ ತೆರಿಗೆಗಳನ್ನು ತೆಗೆದುಹಾಕುವ ಮೂಲಕ 'ಒಂದು ರಾಷ್ಟ್ರ-ಒಂದು ತೆರಿಗೆ'ಯ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಟೀಮ್ ಇಂಡಿಯಾ ಮಹತ್ವದ ಹೆಜ್ಜೆ ಇಟ್ಟಿತು.

ವಾಸ್ತವವಾಗಿ, ಬೆಲೆ ವ್ಯತ್ಯಾಸಗಳಿಂದಾಗಿ, ವಿವಿಧ ರಾಜ್ಯಗಳು ಒಂದೇ ಸರಕುಗಳ ಮೇಲೆ ವಿಭಿನ್ನ ತೆರಿಗೆ ದರಗಳನ್ನು ಹೊಂದಿದ್ದವು. ಇದರ ಪರಿಣಾಮವಾಗಿ, ರಾಜ್ಯದ ಗಡಿ ಪ್ರದೇಶಗಳ ನಿವಾಸಿಗಳು ಆಗಾಗ್ಗೆ ಕಡಿಮೆ ತೆರಿಗೆ ದರವಿರುವ ನೆರೆಯ ರಾಜ್ಯಗಳಿಂದ ದೊಡ್ಡ ಖರೀದಿಗಳನ್ನು ಮಾಡುತ್ತಿದ್ದರು. ಇದಲ್ಲದೆ, ವ್ಯಾಪಾರಿಗಳು ವಿವಿಧ ರೀತಿಯ ತೆರಿಗೆಗಳು ಮತ್ತು ರೂಪಗಳ ಜಾಲದಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದರು. ಈ ಸಂಕೋಲೆಗಳಿಂದ ಜನರನ್ನು ಮುಕ್ತಗೊಳಿಸಲು ಜಿಎಸ್ಟಿಯನ್ನು ಜಾರಿಗೆ ತರಲಾಯಿತು. ಈ ಮಹತ್ವದ ಹೆಜ್ಜೆಯನ್ನು ಪೂರ್ಣಗೊಳಿಸಲು ಐದು ವರ್ಷಗಳು ಬೇಕಾಯಿತು. ಜಿಎಸ್ಟಿ ಜಾರಿಯಾದಾಗಿನಿಂದ ಪರಿಸ್ಥಿತಿ ನಾಟಕೀಯವಾಗಿ ಬದಲಾಗಿದೆ. ಎಲ್ಲಾ 17 ತೆರಿಗೆಗಳನ್ನು ಒಗ್ಗೂಡಿಸಲಾಗಿದೆ. ಭಾರತವು ಒಂದೇ ಮಾರುಕಟ್ಟೆಯಲ್ಲಿ ವಿಲೀನಗೊಂಡಿದೆ. ಅಂತರರಾಜ್ಯ ಹೆದ್ದಾರಿ ತಡೆಗಳನ್ನು ತೆಗೆದುಹಾಕಲಾಯಿತು. ಪ್ರವೇಶ ತೆರಿಗೆಯನ್ನು ತೆಗೆದುಹಾಕಿದ್ದರಿಂದ ನಗರಗಳನ್ನು ಪ್ರವೇಶಿಸಲು ಸುಲಭವಾಗಿದೆ.

ಮನರಂಜನೆಯ ಹೆಸರಿನಲ್ಲಿ ವಿವಿಧ ರಾಜ್ಯಗಳು ಶೇ.35ರಿಂದ ಶೇ.110ರಷ್ಟು ತೆರಿಗೆ ವಿಧಿಸುತ್ತಿದ್ದವು. ಅದನ್ನು ತೀವ್ರವಾಗಿ ಕಡಿಮೆ ಮಾಡಲಾಯಿತು. ಈ ಹಿಂದೆ, 235 ವಸ್ತುಗಳ ಮೇಲಿನ ತೆರಿಗೆ ಶೇಕಡಾ 31 ಅಥವಾ ಅದಕ್ಕಿಂತ ಹೆಚ್ಚಿನದಾಗಿತ್ತು. ಅವುಗಳಲ್ಲಿ 10ನ್ನು ಹೊರತು ಪಡಿಸಿ ಉಳಿದವುಗಳ ಮೇಲಿನ ತೆರಿಗೆಯನ್ನು ತಕ್ಷಣವೇ ಶೇ.28ಕ್ಕೆ ಇಳಿಸಲಾಯಿತು. ಆ 10 ವಸ್ತುಗಳ ಮೇಲಿನ ತೆರಿಗೆಯನ್ನು ಮತ್ತೆ ಶೇ.18ಕ್ಕೆ ಇಳಿಸಲಾಯಿತು. ಯಾವುದೇ ವಸ್ತುವಿನ ಬೆಲೆ ಏರಿಕೆಯಾಗದಂತೆ ನೋಡಿಕೊಳ್ಳಲು ಸೀಮಿತ ಸಮಯದವರೆಗೆ ಹಲವಾರು ಸ್ಲ್ಯಾಬ್ ಗಳನ್ನು ರಚಿಸಲಾಯಿತು. ಇದು ಬೆಲೆಗಳ ಏರಿಕೆಯನ್ನು ನಿಧಾನಗೊಳಿಸಿತು. ಸಾಮಾನ್ಯ ಬಳಕೆಯ ವಸ್ತುಗಳನ್ನು ಶೂನ್ಯ ಅಥವಾ ಶೇ. 5ರ ತೆರಿಗೆ ವ್ಯಾಪ್ತಿಗೆ ತರಲಾಯಿತು. ನಿರ್ಧರಣೆ ಮತ್ತು ಮೌಲ್ಯಮಾಪನಗಳು ಆನ್ ಲೈನ್ ಗೆ ಹೋದವು, ಮತ್ತು ಇನ್ ಸ್ಪೆಕ್ಟರ್ ಗಳ ಪಡೆ ಕಣ್ಮರೆಯಾಯಿತು. ಇನ್ಪುಟ್ ಟ್ಯಾಕ್ಸ್ ಕ್ರೆಡಿಟ್ ಸಿಸ್ಟಮ್ ರಿಟರ್ನ್ ಸಲ್ಲಿಸುವ ಸಮಯದಲ್ಲಿ ಅದೇ ವಸ್ತುವಿನ ಮೇಲೆ ಪಾವತಿಸಿದ ತೆರಿಗೆಯನ್ನು ಕ್ರೆಡಿಟ್ ನಮೂನೆಯಲ್ಲಿ ಹೊಂದಿಸಲು ವ್ಯಾಪಾರಿಗಳಿಗೆ ಅವಕಾಶ ನೀಡಿತು.

ಏಕರೂಪದ ತೆರಿಗೆ ವ್ಯವಸ್ಥೆಯ ಎಳೆಯಲ್ಲಿ ಭಾರತವನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಜಿಎಸ್ಟಿ ಒಂದು ಹೆಜ್ಜೆಯಾಗಿತ್ತು, ಇದರ ಪರಿಣಾಮವಾಗಿ ವ್ಯಾಪಾರ ಚಟುವಟಿಕೆಗಳು ಹೆಚ್ಚಾದವು ಮತ್ತು ದೇಶದ ಜಿಡಿಪಿಗೆ ಹೊಸ ನೋಟಕ್ಕೆ ಕಾರಣವಾಯಿತು. ಇದರ ಪರಿಣಾಮವಾಗಿ, ದೊಡ್ಡ ಮತ್ತು ಸಣ್ಣ ಉದ್ಯಮಿಗಳು ಸುಲಭವಾಗಿ ವ್ಯವಹಾರ ಮಾಡುತ್ತಿದ್ದಾರೆ, ಮತ್ತು ಒಂದೇ ತೆರಿಗೆ ವ್ಯವಸ್ಥೆಯಿಂದಾಗಿ ರಿಟರ್ನ್ಸ್ ಸಲ್ಲಿಸುವ ವ್ಯವಸ್ಥೆ ಸರಳ ಮತ್ತು ಸುಲಭವಾಗಿದೆ. ಜಿಎಸ್ಟಿ ವ್ಯವಸ್ಥೆಯನ್ನು ಪರಿಚಯಿಸಿದ ನಂತರ, ಭಾರತದಲ್ಲಿ ತೆರಿಗೆ ವ್ಯವಸ್ಥೆಯು ಸರಳವಾಗಿದೆ, ಇದು ಉದ್ಯಮಿಗಳಿಗೆ ಹೊಸ ವಿಶ್ವಾಸವನ್ನು ನೀಡುತ್ತಿದೆ. ನಾವು ಸ್ವಾತಂತ್ರ್ಯದ 75 ನೇ ವರ್ಷವನ್ನು ಆಚರಿಸುತ್ತಿರುವುದರಿಂದ ಮತ್ತು 2025ರ ವೇಳೆಗೆ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯ ರಾಷ್ಟ್ರವಾಗಬೇಕೆಂಬ ನಮ್ಮ ಗುರಿಯತ್ತ ನಾವು ಶ್ರಮಿಸುತ್ತಿರುವುದರಿಂದ ಜಿಎಸ್ಟಿ ಮುಂದಿನ ವರ್ಷಗಳಲ್ಲಿ ಭಾರತದ ಇತಿಹಾಸದಲ್ಲಿ ಒಂದು ಮಹತ್ವದ ಕ್ಷಣವಾಗಲಿದೆ.

ಅರ್ಜಿ ನಮೂನೆಗಳನ್ನು ಭರ್ತಿ ಮಾಡುವ ತೊಂದರೆ ಈಗಿಲ್ಲ

ಜಿಎಸ್ಟಿಯ ಪೂರ್ಣ ರೂಪ - ಸರಕು ಮತ್ತು ಸೇವಾ ತೆರಿಗೆ. ಜುಲೈ 1, 2017 ರಂದು ಜಿಎಸ್ಟಿ ಜಾರಿಗೆ ಬಂದಾಗ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇದನ್ನು (ಗುಡ್ ಅಂಡ್ ಸಿಂಪಲ್) ಉತ್ತಮ ಮತ್ತು ಸರಳ ತೆರಿಗೆ ಎಂದು ಕರೆದರು.

ಜಿಎಸ್‌ಟಿಯ ವಿಧಗಳು	ಜಿಎಸ್‌ಟಿಯ ಮೊದಲು [ವ್ಯಾಟ್]	ಜಿಎಸ್‌ಟಿಯ ನಂತರ
ಒಪ್ಪಂದ	317	0
ಇನ್ವಾಯ್ಸ್	12	1
ಘೋಷಣೆಗಳು	32	0
ಪ್ರಪತ್ರ	122	11
ಟ್ರಾನ್ಸಿಟ್ ಫಾರ್ಮ್	2	0
ವರ್ಕ್ ಶೀಟ್	4	0
ಇನ್ ವಾಯ್ಸ್ ಫಾರ್ಮೆಟ್	5	0
ರಿಜಿಸ್ಟರ್	1	0
ಒಟ್ಟು	495	12

ಗ್ರಾಹಕರಿಗೆ ಲಾಭ

ಒಂದು ವರದಿಯ ಪ್ರಕಾರ, ಜಿಎಸ್ಟಿ ಜಾರಿಗೆ ಬಂದ ನಂತರ ಸಾಧಾರಣ ಭಾರತೀಯ ಕುಟುಂಬದ ಸರಾಸರಿ ಮಾಸಿಕ ವೆಚ್ಚವು ಶೇಕಡಾ 4 ರಷ್ಟು ತಗ್ಗಿದೆ.

ಉತ್ಪನ್ನ	ಜಿಎಸ್ಟಿಗೆ ಮೊದಲ ತೆರಿಗೆ ದರ	ಜಿ.ಎಸ್ಟಿ ನಂತರದ ತೆರಿಗೆ ದರ
ಹಾಲಿನ ಪುಡಿ	6%	5%
ಚಹಾ	6%	0
ಗೋಧಿ	2.5%	0
ಹಿಟ್ಟು	3.5%	0
ಸೂರ್ಯಕಾಂತಿ ಎಣ್ಣೆ	6%	5%
ಸಕ್ಕರೆ	6%	5%

ಹಿಂದೆಂದಿಗಿಂತ ಹೆಚ್ಚು ತೆರಿಗೆ ಸಂಗ್ರಹ



ಜಿಎಸ್ಟಿ ಆದಾಯದ ಹೆಚ್ಚಳದೊಂದಿಗೆ ಜಿಎಸ್ಟಿ ರಿಟರ್ನ್ ಸಲ್ಲಿಕೆ ಸಂಖ್ಯೆ ಹೆಚ್ಚಾಗಿದೆ. ಕಾಳಸಂತೆ ಮಾರಾಟ ಮತ್ತು ಕಳ್ಳಸಾಗಣೆಯ ಸಾಧ್ಯತೆಯನ್ನು ನಿರ್ಮೂಲನೆ ಮಾಡಲಾಗಿದೆ. ಪ್ರತಿಯೊಂದು ಸರಕಿಗೂ ಈಗ ದೇಶಾದ್ಯಂತ ಒಂದೇ ಬೆಲೆ ಇದೆ.

ಜಿಎಸ್ಟಿ ವ್ಯವಸ್ಥೆಯನ್ನು 4 ಹೆಸರುಗಳಲ್ಲಿ ಜಾರಿಗೆ ತರಲಾಗಿದೆ

ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಸಿಜಿಎಸ್ಟಿ)
ಒಂದೇ ರಾಜ್ಯದ ಇಬ್ಬರು ಪಕ್ಷಕಾರರ ನಡುವೆ ವಹಿವಾಟು ನಡೆಯುತ್ತಿದ್ದರೆ, ಕೇಂದ್ರದ ಪಾಲಿನ ಸಿಜಿಎಸ್ಟಿಯನ್ನು ಪಾವತಿಸಬೇಕಾಗುತ್ತದೆ.

(ಎಸ್.ಜಿ.ಎಸ್.ಟಿ) | ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ
ಒಂದೇ ರಾಜ್ಯದ ಇಬ್ಬರು ಪಕ್ಷಕಾರರುಗಳ ನಡುವೆ ವಹಿವಾಟು ನಡೆಯುತ್ತಿದ್ದರೆ, ಎಸ್ಜಿಎಸ್ಟಿಯನ್ನು ರಾಜ್ಯದ ಪಾಲಾಗಿ ಪಾವತಿಸಬೇಕಾಗುತ್ತದೆ.

(ಯುಟಿಜಿಎಸ್ಟಿ /ಯುಜಿಎಸ್ಟಿ) | ಕೇಂದ್ರಾಡಳಿತ ಪ್ರದೇಶ ಸರಕುಗಳು ಮತ್ತು ಸೇವಾ ತೆರಿಗೆ
ಒಂದು ಕೇಂದ್ರಾಡಳಿತ ಪ್ರದೇಶದ ಇಬ್ಬರು ಪಕ್ಷಕಾರರುಗಳ (ವ್ಯಾಪಾರಿಗಳು) ನಡುವೆ ವಹಿವಾಟು ನಡೆಯುತ್ತಿದ್ದರೆ, ಆ ಕೇಂದ್ರಾಡಳಿತ ಪ್ರದೇಶದ ಭಾಗವಾಗಿ ಯುಟಿಜಿಎಸ್ಟಿಯನ್ನು ಪಾವತಿಸಬೇಕಾಗುತ್ತದೆ.

(ಐಜಿಎಸ್ಟಿ) | ಸಮಗ್ರ ಸರಕುಗಳು ಮತ್ತು ಸೇವಾ ತೆರಿಗೆ
ಎರಡು ವಿಭಿನ್ನ ರಾಜ್ಯಗಳ ವ್ಯಾಪಾರಿಗಳ ನಡುವೆ ವಹಿವಾಟು ನಡೆಯುತ್ತಿದ್ದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಒಟ್ಟಿಗೆ ತಮ್ಮ ಪಾಲಿನ ಐಜಿಎಸ್ಟಿಯಾಗಿ ಪಾವತಿಸಬೇಕಾಗುತ್ತದೆ. ಇದನ್ನು ಕೇಂದ್ರ ಸರ್ಕಾರಕ್ಕೆ ಕೊಡಲಾಗುತ್ತದೆ; ಕೇಂದ್ರವು ರಾಜ್ಯದ ಪಾಲನ್ನು ಅದಕ್ಕೆ ನೀಡುತ್ತದೆ. ■

ವೈದ್ಯರ ದಿನ - ಜುಲೈ 1

ಮಾನವ ಕುಲದ ದೈವ

ಜೀವನವು ದೇವರ ಅತಿದೊಡ್ಡ ಕೊಡುಗೆಯಾಗಿದೆ, ಆದರೆ ನಮ್ಮ ಜೀವವು ಅಪಾಯದಲ್ಲಿದ್ದಾಗ ವೈದ್ಯರು ನಮ್ಮನ್ನು ಪ್ರಾಣ ಉಳಿಸಲು ರಕ್ಷಕರಾಗಿ ಬದಲಾಗುತ್ತಾರೆ. ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ನಾವು ನಮ್ಮ ಮನೆಗಳಿಗೆ ಸೀಮಿತವಾಗಿದ್ದಾಗ, ಸಂಕಷ್ಟದ ಸಮಯದಲ್ಲೂ ವೈದ್ಯರು ನಮ್ಮನ್ನು ರಕ್ಷಿಸಿದರು. ಒಂದು ವರದಿಯ ಪ್ರಕಾರ, ಸಾಂಕ್ರಾಮಿಕ ರೋಗದಿಂದ ನಮ್ಮನ್ನು ರಕ್ಷಿಸುವ ಪ್ರಯತ್ನದಲ್ಲಿ, ಕೋವಿಡ್ ವಿರುದ್ಧ ಹೋರಾಡುತ್ತಾ ಸುಮಾರು 1490 ವೈದ್ಯರು ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದಾರೆ. ಈ ವರ್ಷ ಜುಲೈ 1 - ರಾಷ್ಟ್ರೀಯ ವೈದ್ಯರ ದಿನದಂದು, ವೈದ್ಯರ ಸ್ಫೂರ್ತಿ ಮತ್ತು ನಿಸ್ವಾರ್ಥ ಸೇವೆಗೆ ನಮನ ಸಲ್ಲಿಸೋಣ...

> ಬಿ.ಸಿ. ರಾಯ್ ಅವರ ಸ್ಮರಣಾರ್ಥ ವೈದ್ಯರ ದಿನವನ್ನು ಆಚರಿಸಲಾಗುತ್ತಿದ್ದು, ನಮ್ಮ ವೈದ್ಯರು ಮತ್ತು ನಮ್ಮ ವೈದ್ಯಕೀಯ ಸಮುದಾಯದ ಅತ್ಯುನ್ನತ ಆದರ್ಶಗಳನ್ನು ಸಂಕೇತಿಸುತ್ತದೆ. ವಿಶೇಷವಾಗಿ, ಕೋವಿಡ್ ಅವಧಿಯಲ್ಲಿ ನಮ್ಮ ವೈದ್ಯರು ದೇಶವಾಸಿಗಳಿಗೆ ಸೇವೆ ಸಲ್ಲಿಸಿದ ರೀತಿ ಸ್ವತಃ ಒಂದು ಉದಾಹರಣೆಯಾಗಿದೆ. 130 ಕೋಟಿ ದೇಶವಾಸಿಗಳ ಪರವಾಗಿ ನಾನು ದೇಶದ ಎಲ್ಲಾ ವೈದ್ಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಮತ್ತು ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.
> -ನರೇಂದ್ರ ಮೋದಿ, ಪ್ರಧಾನ ಮಂತ್ರಿ

2020ರ ಜನವರಿ 29 ರಂದು, ಪುಣೆಯ ರಾಷ್ಟ್ರೀಯ ವೈರಾಣುಶಾಸ್ತ್ರ ಸಂಸ್ಥೆಯ ಪ್ರಿಯಾ ಅಬ್ರಹಾಂ ನೇತೃತ್ವದ ತಂಡ ಮೊದಲ ಬಾರಿಗೆ ಭಾರತದಲ್ಲಿ ಮೂರು ಜನರ ಮಾದರಿಗಳಲ್ಲಿ ಕೋವಿಡ್ ವೈರಾಣು ಇದೆ ಎಂಬುದನ್ನು ಪತ್ತೆ ಮಾಡಿತು. ಈ ಮೂವರು ವುಹಾನ್ ನಿಂದ ಹಿಂದಿರುಗಿದ್ದರು. ಪ್ರಕರಣದ ದೃಢೀಕರಣದೊಂದಿಗೆ, ಭಯದ ವಾತಾವರಣ ಅವರನ್ನು ಕಾಡಿತು. ಆ ಸಮಯದಲ್ಲಿ ಯಾವುದೇ ಸಿದ್ಧ ಚಿಕಿತ್ಸೆಯಿಲ್ಲದ ರೋಗ ಅದಾಗಿತ್ತು. ಪ್ರಿಯಾ ಅಬ್ರಹಾಂ ಮತ್ತು ಅವರ ತಂಡ ಭಾರತದಲ್ಲಿ ಮೊದಲ ಪ್ರಕರಣವನ್ನು ದೃಢಪಡಿಸಿದಾಗ, ಪುಣೆಯ ರಾಷ್ಟ್ರೀಯ ವೈರಾಣುಶಾಸ್ತ್ರ ಸಂಸ್ಥೆ ಕೋವಿಡ್ ಪರೀಕ್ಷಾ ಸೌಲಭ್ಯವನ್ನು ಹೊಂದಿದ್ದ ದೇಶದ ಏಕೈಕ ಪ್ರಯೋಗಾಲಯವಾಗಿತ್ತು. ಈ ಅಪರಿಚಿತ ರೋಗದ ಭೀತಿ ನಿಧಾನವಾಗಿ ರಾಷ್ಟ್ರವನ್ನು ಆವರಿಸುತ್ತಿತ್ತು. ಅಲ್ಲದೆ, ಆ ಸಮಯದಲ್ಲಿ ಅಂತಹ ಬಿಕ್ಕಟ್ಟನ್ನು ಎದುರಿಸಲು ದೇಶದ ಆರೋಗ್ಯ ಮೂಲಸೌಕರ್ಯದಲ್ಲಿ ಯಾವುದೇ ಸಿದ್ಧತೆ ಇರಲಿಲ್ಲ. ಅದು ಒಂದು ಹೊಸ ವೈರಾಣುವಾಗಿದ್ದ ಕಾರಣ, ಯಾರಿಗೂ ಅದರ ವಿರುದ್ಧ ಹೇಗೆ ಹೋರಾಡಬೇಕೆಂದು ತಿಳಿದಿರಲಿಲ್ಲ.

ವೈರಾಣು ಕೂಡ ರೂಪಾಂತರಗೊಳ್ಳುತ್ತಿತ್ತು. ಆದರೆ ನಮ್ಮ ವಿಜ್ಞಾನಿಗಳು ಮತ್ತು ವೈದ್ಯರು ಪರಿಹಾರಗಳನ್ನು ಕಂಡುಹಿಡಿಯುವ ಮೂಲಕ ಮತ್ತು ಪರಿಣಾಮಕಾರಿ ಔಷಧಿಗಳನ್ನು ಅಭಿವೃದ್ಧಿಪಡಿಸುವ ಮೂಲಕ ಸಂದರ್ಭಕ್ಕೆ ಪುಟಿದೆದ್ದರು. ಇದರ ನಡುವೆಯೇ ಕಠಿಣ ಲಾಕ್ ಡೌನ್ ಮತ್ತು ಪೂರ್ವ ಸಿದ್ಧತೆಗಳನ್ನು ನಡೆಸಲಾಯಿತು. ಅಲ್ಲದೆ, ನಮ್ಮ ವೈದ್ಯರು ಜೀವಗಳನ್ನು ಉಳಿಸಲು ಹೆಚ್ಚುವರಿ ಗಂಟೆಗಳ ಕಾಲ ಕೆಲಸವನ್ನು ಮಾಡುವ ಮೂಲಕ ತಮ್ಮನ್ನು ತಾವು

ಭಾರತದಲ್ಲಿ 195 ಕೋಟಿಗೂ ಹೆಚ್ಚು ಲಸಿಕೆ ಡೋಸ್‌ಗಳ ಮಹತ್ವ ಅಂದರೆ..

- ಮೊದಲ ಡೋಸ್ ಅನ್ನು ಇಡೀ ಆಫ್ರಿಕಾಕ್ಕೆ ಮತ್ತು ಎರಡನೇ ಡೋಸ್ ಅನ್ನು ಆಫ್ರಿಕಾದ ಮೂರನೇ ಒಂದು ಭಾಗಕ್ಕೆ ನೀಡಬಹುದಾಗಿತ್ತು.
- ಯುರೋಪಿನ ಇಡೀ ಜನಸಂಖ್ಯೆಗೆ ಎರಡೂ ಡೋಸ್ ಗಳನ್ನು ನೀಡಿದ ನಂತರವೂ, ಶೇ.50ಕ್ಕಿಂತ ಹೆಚ್ಚು ಜನರಿಗೆ ಮುನ್ನೆಚ್ಚರಿಕೆ ಡೋಸ್ ಗಳನ್ನು ನೀಡಬಹುದಾಗಿತ್ತು.
- ದಕ್ಷಿಣ ಮತ್ತು ಉತ್ತರ ಅಮೆರಿಕ ಎರಡರ ಜನಸಂಖ್ಯೆಗೆ ಲಸಿಕೆ ನೀಡಿದ ನಂತರವೂ ಲಸಿಕೆಗಳ ಗಮನಾರ್ಹ ಸಂಗ್ರಹ ಉಳಿಯುತ್ತಿತ್ತು.
- ಓಷಿಯಾನದಾದ್ಯಂತ (ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಇತರ ದೇಶಗಳು) 20 ಕ್ಕೂ ಹೆಚ್ಚು ಬಾರಿ ಡಬಲ್ ಡೋಸ್ ಗಳನ್ನು ನೀಡುವಷ್ಟಾಗುತ್ತಿತ್ತು.

ಲಸಿಕೆಯ ಎರಡೂ ಡೋಸ್ ಗಳನ್ನು ಪಡೆದ ದೇಶದ ಜನಸಂಖ್ಯೆಯ ಶೇ.89ರಷ್ಟು ಜನರು

ಕೋವಿಡ್ ಲಸಿಕೆ ಅಭಿಯಾನದ ಅಡಿಯಲ್ಲಿ ಜೂನ್ 16 ರವರೆಗೆ ದೇಶದಲ್ಲಿ 195.67 ಕೋಟಿಗೂ ಹೆಚ್ಚು ಲಸಿಕೆ ಡೋಸ್ ಗಳನ್ನು ನೀಡಲಾಗಿದೆ. ಅದೇ ವೇಳೆ, ಭಾರತದ ವಯಸ್ಕ ಜನಸಂಖ್ಯೆಯ ಶೇ.89ಕ್ಕೂ ಹೆಚ್ಚು ಜನರು ಲಸಿಕೆಯ ಎರಡೂ ಡೋಸ್ ಗಳನ್ನು ಪಡೆದುಕೊಂಡಿದ್ದಾರೆ. ಏತನ್ಮಧ್ಯೆ, 12 ರಿಂದ 14 ವರ್ಷದೊಳಗಿನ ಶೇಕಡಾ 75 ಕ್ಕೂ ಹೆಚ್ಚು ಮಕ್ಕಳಿಗೆ ಲಸಿಕೆಯ ಮೊದಲ ಡೋಸ್ ನೀಡಲಾಗಿದೆ. ಜೂನ್ 16ರವರೆಗೆ, ಭಾರತದಲ್ಲಿ 58,215 ಕೋವಿಡ್ ಸಕ್ರಿಯ ಪ್ರಕರಣಗಳಿದ್ದು, ಕಳೆದ 24 ಗಂಟೆಗಳಲ್ಲಿ 12,213 ಹೊಸ ಪ್ರಕರಣಗಳು ಬೆಳಕಿಗೆ ಬಂದಿವೆ. ಈ ದಿನಾಂಕದವರೆಗೆ, ಪ್ರಸ್ತುತ ಚೇತರಿಕೆ ದರವು ಶೇಕಡಾ 98.65 ರಷ್ಟಿದ್ದು, ಸಾಪ್ತಾಹಿಕ ಸಕ್ರಿಯ ಪ್ರಕರಣಗಳು ಶೇಕಡಾ 2.38 ರಷ್ಟಿವೆ.

ವೈದ್ಯರ ದಿನ: ಜುಲೈ 1

ಭಾರತದಲ್ಲಿ ಜುಲೈ 1 ಅನ್ನು ರಾಷ್ಟ್ರೀಯ ವೈದ್ಯರ ದಿನವಾಗಿ ಆಚರಿಸಲಾಗುತ್ತದೆ. ದೇಶದ ಮಹಾನ್ ವೈದ್ಯ ಮತ್ತು ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಡಾ. ಬಿಧಾನ್ ಚಂದ್ರ ರಾಯ್ ಅವರ ಸ್ಮರಣಾರ್ಥ ಈ ದಿನವನ್ನು ಆಚರಿಸಲಾಗುತ್ತದೆ. ಅವರು 1882ರ ಜುಲೈ 1 ರಂದು ಪಾಟ್ನಾದಲ್ಲಿ ಜನಿಸಿದರು ಮತ್ತು 1962ರಲ್ಲಿ ಇದೇ ದಿನದಂದು ತಮ್ಮ 80 ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಜಾಗತಿಕ ಮಟ್ಟದಲ್ಲಿ ವೈದ್ಯಕೀಯ ಕ್ಷೇತ್ರಕ್ಕೆ ಗಮನಾರ್ಹ ಕೊಡುಗೆ ನೀಡಿದ ಬಿಧಾನ್ ಚಂದ್ರ ರಾಯ್ ದೇಶದ ಶ್ರೇಷ್ಠ ವೈದ್ಯರಲ್ಲಿ ಒಬ್ಬರಾಗಿದ್ದಾರೆ. ಬಿಧಾನ್ ಚಂದ್ರ ರಾಯ್ ಒಬ್ಬ ವೈದ್ಯ ಮತ್ತು ಸಾಮಾಜಿಕ ಕಾರ್ಯಕರ್ತ, ಚಳವಳಿಗಾರ, ಸ್ವಾತಂತ್ರ್ಯ ಹೋರಾಟಗಾರ ಮತ್ತು ರಾಜಕಾರಣಿಯಾಗಿದ್ದರು.



ಮಹಾತ್ಮಾ ಗಾಂಧಿಯವರ ಮನವೊಲಿಕೆಯಿಂದ ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸಿದ ಬಿಧಾನ್ ಚಂದ್ರ ರಾಯ್ ಅವರು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಅವರ ಕುರಿತಂತೆ ಬಹಳ ಜನಜನಿತವಾದ ಒಂದು ವಿಷಯವೆಂದರೆ, ಅವರು ತಾವು ಗಳಿಸಿದ ಎಲ್ಲ ಆದಾಯವನ್ನೂ, ದಾನ ಮಾಡುತ್ತಿದ್ದರು. 1961ರಲ್ಲಿ, ಡಾ. ಬಿಧಾನ್ ಚಂದ್ರ ರಾಯ್ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಗೌರವ "ಭಾರತ ರತ್ನ" ನೀಡಲಾಯಿತು. ಡಾ. ಬಿಧಾನ್ ಚಂದ್ರ ರಾಯ್ ಅವರ ಗೌರವಾರ್ಥ, 1991 ರಿಂದ ಭಾರತದಲ್ಲಿ ಪ್ರತಿ ವರ್ಷ ಜುಲೈ 1 ರಂದು ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸಲಾಗುತ್ತಿದೆ.

ಸಮರ್ಪಿಸಿಕೊಂಡರು. ಭಾರತದಲ್ಲಿನ ಹೆಚ್ಚಿನ ಜನಸಂಖ್ಯೆ ಈ ಸವಾಲನ್ನು ಮತ್ತಷ್ಟು ಕಷ್ಟಕರವಾಗಿಸಿತ್ತು.

ಇದರ ಹೊರತಾಗಿಯೂ, ಕರೋನಾ ಸಮಯದಲ್ಲಿ, ನಾವು ಪ್ರತಿ ಲಕ್ಷ ಜನಸಂಖ್ಯೆಗೆ ಹರಡಿದ್ದ ಸೋಂಕನ್ನು ನೋಡಿದರೆ, ಸಾವಿನ ಪ್ರಮಾಣವನ್ನು ನೋಡಿದರೆ, ಇದನ್ನು ದೊಡ್ಡ ಅಭಿವೃದ್ಧಿ ಹೊಂದಿದ ಮತ್ತು ಸಮೃದ್ಧ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದ ಸ್ಥಾನವು ತುಲನಾತ್ಮಕವಾಗಿ ಸ್ಥಿರವಾಗಿದೆ. ಯಾವುದೇ ಒಂದು ಜೀವದ ಅಕಾಲಿಕ ಮರಣ ಅಷ್ಟೇ ದುಃಖಕರವಾಗಿರುತ್ತದೆ, ಭಾರತವು ಕೊರೊನಾದಿಂದ ಲಕ್ಷಾಂತರ ಜೀವಗಳನ್ನು ಉಳಿಸಿದೆ. ಇದರ ದೊಡ್ಡ ಶ್ರೇಯಸ್ಸು ನಮ್ಮ ಕಠಿಣ ಪರಿಶ್ರಮಿ ವೈದ್ಯರು, ನಮ್ಮ ಆರೋಗ್ಯ ಕಾರ್ಯಕರ್ತರು ಮತ್ತು ನಮ್ಮ ಮುಂಚೂಣಿ ಕಾರ್ಯಕರ್ತರಿಗೆ ಸಲ್ಲುತ್ತದೆ.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆ

ಇತ್ತೀಚಿನ ಎರಡು ವಾರಗಳಲ್ಲಿ ದೇಶಾದ್ಯಂತ ಕೋವಿಡ್ -19 ಸೋಂಕಿನ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಜಾಗರೂಕರಾಗಿರಬೇಕು ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಎಚ್ಚರಿಕೆ ನೀಡಿದ್ದಾರೆ. ಸಾಧ್ಯವಾದಷ್ಟು ಬೇಗ ಹೊಸ ಪ್ರಕರಣಗಳನ್ನು ತಡೆಗಟ್ಟಲು, ನಿಯಂತ್ರಿಸಲು ಮತ್ತು ಪತ್ತೆ ಮಾಡಲು ಆಡಳಿತಾತ್ಮಕ ಮಟ್ಟದಲ್ಲಿ ಪ್ರಯತ್ನಗಳನ್ನು ಮುಂದುವರಿಸುವಂತೆ ಅವರು ತಿಳಿಸಿದ್ದಾರೆ. ಜೂನ್ 13 ರಂದು ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆರೋಗ್ಯ ಸಚಿವರೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿದರು. ಚರ್ಚೆಯ ವೇಳೆ, ಆರೋಗ್ಯ ಸಚಿವರು, ದೂರದ ಪ್ರದೇಶಗಳಲ್ಲಿ ವಾಸಿಸುವ ಜನರು ಮತ್ತು ಇತರ ದುರ್ಬಲ ಸಮುದಾಯಗಳಿಗೆ ಆರೋಗ್ಯ ಸೇವೆಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸರ್ಕಾರದ "ಹರ್ ಘರ್ ದಸ್ತಕ್ 2.0 ಅಭಿಯಾನ"ವನ್ನು ತ್ವರಿತಗೊಳಿಸುವಂತೆ ಮನವಿ ಮಾಡಿದರು. ■

ವಿವಿಧತೆಯಲ್ಲಿ ಏಕತೆಯ ಮಂತ್ರದೊಂದಿಗೆ ಸ್ವಾತಂತ್ರ್ಯ ಪಡೆದ ಭಾರತ

ಇತಿಹಾಸದ ಒಂದು ಕಾಲಘಟ್ಟದಲ್ಲಿ, ಭಾರತದ ಸಾಂಸ್ಕೃತಿಕ ಪರಂಪರೆ ಮತ್ತು ಭಾಷೆ, ಆಹಾರ ಮತ್ತು ಉಡುಗೆ-ತೊಡುಗೆಗಳಲ್ಲಿನ ವೈವಿಧ್ಯವನ್ನು ದೌರ್ಬಲ್ಯವೆಂದು ಪರಿಗಣಿಸಲಾಗಿತ್ತು. ಆದರೆ ಸ್ವಾತಂತ್ರ್ಯದ ನಮ್ಮ ಹೋರಾಟದಲ್ಲಿ, ವಿವಿಧತೆಯೇ ನಮ್ಮ ಶಕ್ತಿ ಎಂದು ನಾವು ಜಗತ್ತಿಗೆ ಸಾಬೀತುಪಡಿಸಿದೆವು. ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ, ಅದು ಗುಜರಾತ್ ಆಗಿರಲಿ ಅಥವಾ ಬಂಗಾಳವಾಗಿರಲಿ, ದಕ್ಷಿಣ ಭಾಗದ ಪ್ರದೇಶವಾಗಿರಲಿ ಅಥವಾ ದೇಶದ ಉತ್ತರ ಭಾಗವೇ ಇರಲಿ, ಅವರೆಲ್ಲರೂ ಒಗ್ಗಟ್ಟಿನಿಂದ 'ಏಕ ಭಾರತ್ ಶ್ರೇಷ್ಠ ಭಾರತ'ದ ನಂಬಿಕೆಯನ್ನು ಪ್ರದರ್ಶಿಸಿದರು. ಇದು ಸಾಮಾಜಿಕ ಪ್ರಜ್ಞೆಯನ್ನು ಹೆಚ್ಚಿಸಿತು ಮತ್ತು 'ವಿವಿಧತೆಯಲ್ಲಿ ಏಕತೆ' ಸ್ವಾತಂತ್ರ್ಯ ಹೋರಾಟಗಾರರಿಗೆ ಮಂತ್ರವಾಯಿತು...

"ನಾವು ಪ್ರಸ್ತುತ ಆಜಾದಿ ಕಾ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದೇವೆ. ನೂರಾರು ವರ್ಷಗಳ ಗುಲಾಮಗಿರಿ, ಸ್ವಾತಂತ್ರ್ಯಕ್ಕಾಗಿ ಇಷ್ಟು ಸುದೀರ್ಘ ಹೋರಾಟದಲ್ಲಿ ನಮ್ಮ ದೊಡ್ಡ ಶಕ್ತಿ ಯಾವುದು? ನಮ್ಮ ಶಕ್ತಿಯೆಂದರೆ - ಕೈಚೆಲ್ಲದ ನಮ್ಮ ಅಭ್ಯಾಸ! ನಮ್ಮ ಶಕ್ತಿಯೆಂದರೆ - ದೇಶಕ್ಕಾಗಿ, ಮಾನವೀಯತೆಗಾಗಿ ಬದುಕುವುದು, ನಮ್ಮ ಪಟ್ಟಭದ್ರ ಹಿತಾಸಕ್ತಿಗಳನ್ನು ಮೀರಿ ಬೆಳೆಯುವ ನಮ್ಮ ಆಲೋಚನೆ ಮತ್ತು ಬದುಕುವ ಕ್ರಮಗಳು! ಆಜಾದಿ ಕಾ ಅಮೃತ ಮಹೋತ್ಸವದಲ್ಲಿ, ನಾವು ಈ ಮನೋಭಾವದಿಂದ ಮುಂದೆ ಸಾಗುತ್ತಿದ್ದೇವೆ."

- ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಮಹಾನ್ ಹೋರಾಟ ಮತ್ತು ತ್ಯಾಗದ ನಂತರ ನಾವು ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ಸಲ್ಲಿಸುವ ಮತ್ತು ದೇಶದ ಭವ್ಯ ಗತಕಾಲದ ಬಗ್ಗೆ ನಾಗರಿಕರಿಗೆ ತಿಳವಳಿಕೆ ನೀಡುವ ಉದ್ದೇಶದಿಂದ, ಆಜಾದಿ ಕಾ ಅಮೃತ ಮಹೋತ್ಸವವನ್ನು ಆಚರಿಸಲಾಗುತ್ತಿದೆ. 75 ವರ್ಷಗಳ ಹಿಂದೆ, ಭಾರತವು ಅಹಿಂಸೆಯ ಮಾಧ್ಯಮದ ಮೂಲಕ ಸ್ವಾತಂತ್ರ್ಯ ಚಳವಳಿಯನ್ನು ಮುನ್ನಡೆಸಿತು ಮತ್ತು ರಕ್ತಪಾತವಿಲ್ಲದೆ ಸ್ವಾತಂತ್ರ್ಯವನ್ನು ಸಾಧಿಸಬಹುದು ಎಂದು ಜಗತ್ತಿಗೆ ತೋರಿಸಿಕೊಟ್ಟಿತು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಣತಿಯ ಮೇರೆಗೆ ಪ್ರಾರಂಭವಾದ ಆಜಾದಿ ಕಾ ಅಮೃತ ಮಹೋತ್ಸವದ ಅಡಿಯಲ್ಲಿ ದೇಶಾದ್ಯಂತ 25,000ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಆಜಾದಿ ಕಾ ಅಮೃತ ಮಹೋತ್ಸವದ ಸರಣಿಯಲ್ಲಿ, ಈ ಬಾರಿ ಸುಮಂತ್ ಮೆಹ್ತಾ, ಸುಶೀಲಾ ಚೈನ್ ಟ್ರೆಹಾನ್, ಅಮರೇಂದ್ರನಾಥ್ ಚಟರ್ಜಿ ಮತ್ತು ಅಲೇಖ್ ಪಾತ್ರಾ ಅವರ ಕಥೆಗಳನ್ನು ಓದೋಣ, ಅವರು ತಾಯಿ ಭಾರತಿಯ ಸ್ವಾತಂತ್ರ್ಯಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದ್ದಾರೆ.

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಲಂಡನ್‌ನಿಂದ ಮರಳಿದ ವೈದ್ಯ

ಜನನ: 1 ಜುಲೈ 1877, ಮರಣ: 15 ಡಿಸೆಂಬರ್ 1968

ತಮ್ಮ ಪತ್ನಿಯಿಂದ ಸ್ಫೂರ್ತಿ ಪಡೆದ ಸುಮಂತ್ ಮೆಹ್ತಾ ಅವರು ಭಾರತದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಅವರು ಬಡವರ ಉದ್ಧಾರಕ್ಕಾಗಿ ಶ್ರಮಿಸಿದ ವೈದ್ಯರೂ ಆಗಿದ್ದರು. ಅವರು ಇಂಗ್ಲೆಂಡಿನಲ್ಲಿ ವೈದ್ಯಕೀಯ ಅಧ್ಯಯನವನ್ನು ಪೂರ್ಣಗೊಳಿಸಿದರು. ವೈದ್ಯಕೀಯ ಅಧ್ಯಯನಕ್ಕಾಗಿ ಇಂಗ್ಲೆಂಡಿಗೆ ಹೋಗುವ ಮೊದಲೇ ಅವರಿಗೆ ವಿವಾಹವಾಗಿತ್ತು. ಅಲ್ಲಿಂದ ಹಿಂದಿರುಗಿದ ನಂತರ, ಡಾ. ಸುಮಂತ್ ಮೆಹ್ತಾ ಅವರನ್ನು ಬರೋಡಾ ರಾಜ್ ನಲ್ಲಿ ಮುಖ್ಯ ವೈದ್ಯಾಧಿಕಾರಿಯಾಗಿ ನೇಮಿಸಲಾಯಿತು.

ಮೆಹ್ತಾ ಅವರ ಅನುಪಸ್ಥಿತಿಯಲ್ಲಿ, ಅವರ ಪತ್ನಿ ಶಾರದಾ ಮೆಹ್ತಾ ಅವರು ಪತ್ರಿಕೆ ಮತ್ತು ನಿಯತಕಾಲಿಕೆಗಳಿಗೆ ಲೇಖನಗಳನ್ನು ಬರೆಯಲು, ಮಕ್ಕಳ ಸಾಹಿತ್ಯ ಕುರಿತ ಸಣ್ಣ ಪುಸ್ತಕಗಳನ್ನು ಅನುವಾದಿಸುವ ಮತ್ತು ಬರೆಯುವ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಇದಷ್ಟಕ್ಕೇ, ಶಾರದಾ ಮೆಹ್ತಾ ತೃಪ್ತರಾಗಲಿಲ್ಲ ಮತ್ತು ಅವರು ದೇಶಕ್ಕಾಗಿ ಏನನ್ನಾದರೂ ಮಾಡಲು ಬಯಸಿದ್ದರು. ತಮ್ಮ ಪತ್ನಿಯ ಸಮರ್ಪಣೆಯನ್ನು ನೋಡಿದ ಮೆಹ್ತಾ ಅವರು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಲು ಪ್ರೇರೇಪಿತರಾದರು. ತದ ನಂತರ ಅವರು ಶಾರದಾ ಅವರೊಂದಿಗೆ ಮಹಾತ್ಮಾ ಗಾಂಧಿ ಅವರನ್ನು ಭೇಟಿಯಾದರು ಮತ್ತು ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಯೂರೋಪಿಗೆ ಭೇಟಿ ನೀಡಿದಾಗ, ಮೇಡಂ ಕಾಮಾ, ಶ್ಯಾಮ್ ಜಿ ಕೃಷ್ಣ ವರ್ಮಾ ಮತ್ತು ವೀರೇಂದ್ರ ನಾಥ್ ಚಟರ್ಜಿ ಅವರಂತಹ ಕ್ರಾಂತಿಕಾರಿಗಳನ್ನು ಭೇಟಿಯಾದರು, ಅವರೆಲ್ಲರೂ ಮೆಹ್ತಾ ಅವರ ಮೇಲೆ ಶಾಶ್ವತವಾದ ಪ್ರಭಾವ ಬೀರಿದರು. ರಾಮಕೃಷ್ಣ ಪರಮಹಂಸರು ಮತ್ತು ಸ್ವಾಮಿ ವಿವೇಕಾನಂದರ ಧಾರ್ಮಿಕ ಗ್ರಂಥಗಳು ಮತ್ತು ಅವರ ಕೃತಿಗಳು ಸಹ ಅವರ ಮೇಲೆ ಹೆಚ್ಚಿನ ಪ್ರಭಾವ ಬೀರಿದವು. ವಾಸ್ತವವಾಗಿ, ಸುಮಂತ್ ಮೆಹ್ತಾ ಅವರ ಪತ್ನಿ ಶಾರದಾ ಮೆಹ್ತಾ ಅವರೂ ಸಾಮಾನ್ಯ ಮಹಿಳೆಯಾಗಿರಲಿಲ್ಲ.

ಸುಮಂತ್ ಮೆಹ್ತಾ 1928ರಲ್ಲಿ ಬಾರ್ದೋಲಿ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ಪತ್ನಿಯಾಗಿ, ತಾಯಿಯಾಗಿ, ಸಹೋದರಿಯಾಗಿ ಮತ್ತು ಮಗಳಾಗಿ ಅವರು ನಿರ್ವಹಿಸುತ್ತಿದ್ದ ಪಾತ್ರ ಮತ್ತು ಸಮಾಜ ಸೇವಕಿ, ಶಿಕ್ಷಣತಜ್ಞೆ ಮತ್ತು ಮಹಾನ್ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ ನೀಡಿದ ಕೊಡುಗೆಯಿಂದ ಪ್ರಭಾವಿತರಾದ ಮಹಾತ್ಮಾ ಗಾಂಧಿ ಅವರು ಹೀಗೆ ಹೇಳಿದ್ದರು - "ನನ್ನ ಮುಂದಿನ ಜನ್ಮದಲ್ಲಿ ನಾನು ಆಕೆಯ ಗರ್ಭದಿಂದ ಜನಿಸಲು ಬಯಸುತ್ತೇನೆ".

ಸುಮಂತ್ ಮೆಹ್ತಾ 1928ರಲ್ಲಿ ಬಾರ್ದೋಲಿ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಈ ಸತ್ಯಾಗ್ರಹದ ಸಮಯದಲ್ಲಿ, ಅವರು ಸರಭೌನ್ ಆಶ್ರಮದ ದೈನಂದಿನ ಆಡಳಿತವನ್ನು ಯಶಸ್ವಿಯಾಗಿ ನಡೆಸಿದರು, ಇದು ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಮಹಾತ್ಮಾ ಗಾಂಧಿಯವರ ಮೆಚ್ಚುಗೆಗೆ ಪಾತ್ರವಾಯಿತು. ತದನಂತರ, ಅವರು ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು ಮತ್ತು ಅನೇಕ ಬಾರಿ ಜೈಲಿಗೆ ಹೋದರು. ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಅವರನ್ನು ಪೊಲೀಸರು ಬಂಧಿಸಿದರು ಮತ್ತು ಅವರನ್ನು ಗುಜರಾತ್ ನ ಜಲಾಲ್ ಪುರ್ ಜೈಲಿನಲ್ಲಿ ಇರಿಸಲಾಯಿತು. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾಗಿದ್ದರಿಂದ ಅವರು ಸಬರಮತಿ, ವಿಸಾಪುರ್ ಮತ್ತು ನಾಸಿಕ್ ಜೈಲುಗಳಲ್ಲಿ 5 ವರ್ಷಗಳನ್ನು ಕಳೆಯಬೇಕಾಯಿತು. ಪರಿಸರವಾದಿ ಮತ್ತು ಪ್ರಕೃತಿ ಆರಾಧಕರಾಗಿದ್ದ ಅವರು ದೇಸಿ ಮತ್ತು ಆಯುರ್ವೇದ ಚಿಕಿತ್ಸೆಗೆ ಒತ್ತು ನೀಡಿದರು.

ಅವರು 1936 ರಲ್ಲಿ ಕಲೋಲ್ ಬಳಿಯ ಸೆರ್ತಾ ಗ್ರಾಮದಲ್ಲಿ ಆಶ್ರಮವನ್ನು ಸ್ಥಾಪಿಸಿದರು ಮತ್ತು ರೈತರು, ಕಾರ್ಮಿಕರು ಮತ್ತು ಬುಡಕಟ್ಟು ಜನರ ಕಲ್ಯಾಣ ಮತ್ತು ಉನ್ನತಿಗಾಗಿ ಜೀವನಪರ್ಯಂತ ಶ್ರಮಿಸಿದರು. ಸ್ವಾತಂತ್ರ್ಯಾನಂತರ, ಅಧಿಕಾರ ಮತ್ತು ಸ್ಥಾನಗಳನ್ನು ಪಡೆಯಲು ಹೋರಾಟ ನಡೆಯುತ್ತಿದ್ದಾಗ, ಶಾರದಾ ಮತ್ತು ಅವರ ಪತಿ ಜನರ ಕಲ್ಯಾಣದ ಮಾರ್ಗವನ್ನು ಆರಿಸಿಕೊಂಡರು ಮತ್ತು ಅದಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು.

ತಮ್ಮ 18ನೇ ವಯಸ್ಸಿನಲ್ಲೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದ ಅಲೇಖ್ ಪಾತ್ರಾ

ಜನನ: 1 ಜುಲೈ 1923, ಮರಣ: 17 ನವೆಂಬರ್ 1999

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದ ಲೇಖ್ ಪಾತ್ರಾ ಪ್ರಮುಖ ನಾಯಕರಲ್ಲಿ ಒಬ್ಬರಾಗಿದ್ದರು. ಒಡಿಶಾದ ವಿವಿಧ ಭಾಗಗಳಲ್ಲಿ ನಾಗರಿಕ ಹಕ್ಕುಗಳು ಮತ್ತು ಪರಿಸರ ಸಂರಕ್ಷಣಾ ಆಂದೋಲನಗಳಲ್ಲಿ ಭಾಗವಹಿಸುವಂತೆ ಅವರು ನಾಗರಿಕರನ್ನು ಪ್ರೇರೇಪಿಸಿದರು. ಜುಲೈ 1, 1923 ರಂದು ಒಡಿಶಾದ ಪುರಿಯಲ್ಲಿ ಜನಿಸಿದ ಅಲೇಖ್ ಪಾತ್ರಾ ಅವರು ಬಾಲ್ಯದಿಂದಲೂ ದೇಶಭಕ್ತಿಯ ಸ್ಫೂರ್ತಿಯಿಂದ ಕೂಡಿದ್ದರು ಮತ್ತು ಅವರು ತಮ್ಮ 18ನೇ ವಯಸ್ಸಿನಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಲು ಪ್ರಾರಂಭಿಸಿದರು. ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ, ಅವರು ತಮ್ಮ ಸ್ನೇಹಿತರೊಂದಿಗೆ ನಿಮಪದ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದರು ಎಂದು ಹೇಳಲಾಗುತ್ತದೆ.

ಈ ಘಟನೆಯ ವೇಳೆ, ಪ್ರತಿಭಟನಾಕಾರರನ್ನು ತಡೆಯಲು ಪೊಲೀಸರು ಗುಂಡು ಹಾರಿಸಿದರು, ಆಗ ಅವರ ಆಪ್ತ ಸಹಚರರಲ್ಲಿ ಒಬ್ಬರು ಸ್ಥಳದಲ್ಲೇ ಸಾವನ್ನಪ್ಪಿದರು. ಅಲೇಖ್ ಪಾತ್ರಾ ಅವರನ್ನು ಸ್ಥಳದಲ್ಲೇ ಬಂಧಿಸಲಾಯಿತು ಮತ್ತು ಪುರಿ ಜೈಲಿನಲ್ಲಿ ಇಡಲಾಯಿತು. ಅಲ್ಲಿ ಅವರಿಗೆ ಚಿತ್ರಹಿಂಸೆ ನೀಡಲಾಯಿತು, ಆದರೆ ಅವರು ಬಲವಾದ ಇಚ್ಛಾಶಕ್ತಿಯ ವ್ಯಕ್ತಿಯಾಗಿದ್ದರು ಮತ್ತು ಅವರು ವಿಚಲಿತರಾಗಲಿಲ್ಲ. ಜೈಲಿನಿಂದ ಬಿಡುಗಡೆಯಾದ ನಂತರ, ಅವರು ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ತಮ್ಮ ಭೂಗತ ಹೋರಾಟವನ್ನು ಮುಂದುವರಿಸಿದರು ಮತ್ತು ಕೋಲ್ಕತ್ತೆಗೆ ತೆರಳಿದರು. ಅಲ್ಲಿ ಅವರು ಒಬ್ಬ ವ್ಯಕ್ತಿಯಲ್ಲಿ ಮನೆ ಕೆಲಸದವನಾಗಿ ಸೇರಿದರು, ಆದರೆ ತಮ್ಮ ಭೂಗತ ಚಟುವಟಿಕೆಗಳನ್ನು ನಿಲ್ಲಿಸಲಿಲ್ಲ.

ಆಚಾರ್ಯ ಹರಿಹರ ಮತ್ತು ಗೋಪಬಂಧು ದಾಸ್ ಅವರೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಬಹಿರಂಗವಾಗಿ ಭಾಗವಹಿಸಲು ಬಯಸಿದ್ದರಿಂದ ಅವರು ಕೋಲ್ಕತ್ತಾದಲ್ಲಿ ಹೆಚ್ಚು ಕಾಲ ಉಳಿಯಲಿಲ್ಲ. ಅದೇ ವೇಳೆ, ಅವರ ಇತರ ಸ್ವಾತಂತ್ರ್ಯ ಹೋರಾಟಗಾರರ ಮಿತ್ರರು ಸಹ ಅವರು ಭೂಗತವಾಗಿ ಕೆಲಸ ಮಾಡಬಾರದು, ಮತ್ತೆ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಹಿರಂಗವಾಗಿ ಭಾಗವಹಿಸಬೇಕೆಂದು ಬಯಸಿದ್ದರು. ಹೀಗಾಗಿ ಅವರು ಕೋಲ್ಕತ್ತಾದಿಂದ ಪುರಿಗೆ ಹಿಂತಿರುಗಲು ನಿರ್ಧರಿಸಿದರು. ಕೋಲ್ಕತ್ತಾದಿಂದ ಪುರಿಗೆ ಬರುತ್ತಿದ್ದಾಗ, ಪೊಲೀಸರು ಅವರನ್ನು ನಿಲ್ದಾಣದಲ್ಲಿ ಬಂಧಿಸಿ ಮತ್ತೆ ಜೈಲಿಗೆ ಕಳುಹಿಸಿದರು. ಜೈಲಿನಲ್ಲಿದ್ದಾಗ, ಅವರು ಮಹಾತ್ಮಾ ಗಾಂಧಿಯವರ ಸೂಚನೆಗಳನ್ನು ಅನುಸರಿಸುತ್ತಿದ್ದರು ಮತ್ತು ಚರಕ ನೂಲುತ್ತಿದ್ದರು ಮತ್ತು ಖಾದಿಯನ್ನು ನೇಯುತ್ತಿದ್ದರು. ಅವರು ಸ್ವಚ್ಛತೆಯನ್ನು ಉತ್ತೇಜಿಸಲು ಶೌಚಾಲಯಗಳನ್ನು ಸ್ವಚ್ಛಗೊಳಿಸಿದರು. ಜೈಲಿನಿಂದ ಬಿಡುಗಡೆಯಾದ ನಂತರ, ಸ್ವರಾಜ್ಯ, ಗೃಹ ಆಡಳಿತ ಮತ್ತು ಇತರ ಸರ್ವೋದಯ ಕಾರ್ಯಗಳಲ್ಲಿ ತರಬೇತಿ ಪಡೆಯಲು ಅವರು ವಾರ್ಧಾಗೆ ತೆರಳಿದರು.

ಅಲ್ಲಿಂದ ಒಡಿಶಾಕ್ಕೆ ಹಿಂದಿರುಗಿದ ನಂತರ, ಅವರು ಸಾಮಾಜಿಕ ಸುಧಾರಣೆಗಾಗಿ ಕೆಲಸ ಮಾಡಲು ಪ್ರಾರಂಭಿಸಿದರು ಮತ್ತು ಭಾರತದ ಸ್ವಾತಂತ್ರ್ಯದ ಬಳಿಕ, ಅವರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಗೌರವಗಳನ್ನು ನೀಡಿದವು. ಭಾರತದ ಸ್ವಾತಂತ್ರ್ಯದ ನಂತರವೂ, ಅವರು ಜನರ ಕಲ್ಯಾಣಕ್ಕಾಗಿ ಕೆಲಸ ಮಾಡುವುದನ್ನು ಮುಂದುವರಿಸಿದರು ಮತ್ತು ನಿರಂತರವಾಗಿ ಸಕ್ರಿಯರಾಗಿದ್ದರು. ಅವರು ನವೆಂಬರ್ 17, 1999 ರಂದು ತಮ್ಮ 76 ನೇ ವಯಸ್ಸಿನಲ್ಲಿ ನಿಧನ ಹೊಂದಿದರು.

ದೇಶದ ಸ್ವಾತಂತ್ರ್ಯಕ್ಕಾಗಿ ಕ್ರಾಂತಿಕಾರಿ ವಿಧಾನ ಅಳವಡಿಸಿಕೊಂಡ ಅಮರೇಂದ್ರ ನಾಥ ಚಟರ್ಜಿ

ಜನನ: 1 ಜುಲೈ 1880, ಮರಣ: 4 ಸೆಪ್ಟೆಂಬರ್ 1957

ಅಮರೇಂದ್ರನಾಥ ಚಟರ್ಜಿ ಅವರನ್ನು ಯುಗಾಂತರ್ ಗುಂಪಿನ ಉನ್ನತ ನಾಯಕರಲ್ಲಿ ಒಬ್ಬರೆಂದು ಪರಿಗಣಿಸಲಾಗುತ್ತದೆ, ಅವರು ಪ್ರಸಿದ್ಧ ಕ್ರಾಂತಿಕಾರಿಯಾಗಿದ್ದರು, ಈ ಸಂಘಟನೆಯ ಚಳವಳಿಯನ್ನು ಮುನ್ನಡೆಸಲು ಹಣ ಸಂಗ್ರಹಿಸುವ ಜವಾಬ್ದಾರಿಯನ್ನು ಅವರು ಹೊಂದಿದ್ದರು. ಅವರ ಕ್ರಾಂತಿಕಾರಿ ಚಟುವಟಿಕೆಗಳು ಮುಖ್ಯವಾಗಿ ಬಿಹಾರ, ಒಡಿಶಾ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ ಕೇಂದ್ರೀಕೃತವಾಗಿದ್ದವು. ತಮ್ಮ ಅಧ್ಯಯನದ ಸಮಯದಲ್ಲಿ, ಬ್ರಿಟಿಷರನ್ನು ಓಡಿಸಲು ಕ್ರಾಂತಿಕಾರಿ ವಿಧಾನವನ್ನು ಅನುಸರಿಸಬೇಕು ಎಂದು ನಂಬಿದ್ದ ಸಮಾನ ಮನಸ್ಕ ಜನರನ್ನು ಅವರು ಭೇಟಿಯಾದರು. ಇವರಲ್ಲಿ ಉಪೇಂದ್ರನಾಥ್ ಬ್ಯಾನರ್ಜಿ ಮತ್ತು ಹೃಷಿಕೇಶ್ ಕಾಂಜಿಲಾಲ್ ಅವರ ಹೆಸರುಗಳು ಪ್ರಮುಖವಾಗಿವೆ.

ಕ್ರಾಂತಿಯ ಶಕ್ತಿಯಿಂದ ಬ್ರಿಟಿಷ್ ಗುಲಾಮಗಿರಿಯಿಂದ ಭಾರತವನ್ನು ಮುಕ್ತಗೊಳಿಸಲು ಬಯಸಿದ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಮೇರು ವ್ಯಕ್ತಗಳಲ್ಲಿ ಅಮರೇಂದ್ರ ನಾಥ್ ಚಟರ್ಜಿ ಒಬ್ಬರು. ಅದಕ್ಕಾಗಿಯೇ ಅವರು ಯುಗಾಂತರ್ ಗುಂಪನ್ನು ಸೇರಿಕೊಂಡರು, ಅದರ ಮುಖ್ಯ ಚಟುವಟಿಕೆಗಳೆಂದರೆ, ವಿವಿಧ ಸ್ಥಳಗಳಲ್ಲಿನ ಅದರ ಶಾಖೆಗಳ ಮೂಲಕ ಯುವಕರನ್ನು ಒಗ್ಗೂಡಿಸುವುದು, ಅವರನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಬಲಶಾಲಿಗಳನ್ನಾಗಿ ಮಾಡುವುದು, ಇದರಿಂದ ಅವರು ಬ್ರಿಟಿಷ್ ವಿರುದ್ಧ ಹೋರಾಡಲು ಸಾಧ್ಯವಾಯಿತು. ಅಷ್ಟೇ ಅಲ್ಲ, ಈ ಸಂಘಟನೆ ರಹಸ್ಯವಾಗಿ ಬಾಂಬ್ ಗಳ ತಯಾರಿಕೆ, ಶಸ್ತ್ರಾಸ್ತ್ರ ತರಬೇತಿ ಮತ್ತು ದುಷ್ಟ ಬ್ರಿಟಿಷ್ ಅಧಿಕಾರಿಗಳನ್ನು ಕೊಲ್ಲುವುದರಲ್ಲಿ ಭಾಗಿಯಾಗಿತ್ತು.

ಕ್ರಾಂತಿಯಿಂದ ಬ್ರಿಟಿಷರ ಗುಲಾಮಗಿರಿಯಿಂದ ಭಾರತವನ್ನು ಮುಕ್ತಗೊಳಿಸಲು ಬಯಸಿದ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಯೋಧರ ಪಟ್ಟಿಯಲ್ಲಿ ಅಮರೇಂದ್ರ ನಾಥ್ ಚಟರ್ಜಿ ಅವರ ಹೆಸರೂ ಸೇರುತ್ತದೆ.

ಈ ಸಂಘಟನೆಯ ಸಕ್ರಿಯ ಸದಸ್ಯರು ಬ್ರಿಟಿಷರ ಬೆನ್ನೆಲುಬಾಗಿದ್ದ ಅಥವಾ ದೇಶ ದೇಶದ್ರೋಹಿಗಳೆಂದು ತಾವು ಭಾವಿಸಿದ ಭಾರತೀಯ ಅಧಿಕಾರಿಗಳನ್ನೂ ಕೊಂದರು. ಅಮರೇಂದ್ರ ನಾಥ್ ಚಟರ್ಜಿಯವರು ಜುಲೈ 1, 1880 ರಂದು ಪಶ್ಚಿಮ ಬಂಗಾಳದ ಹೂಗ್ಲಿಯ ಉತ್ತರಪಾದದಲ್ಲಿ ಉಪೇಂದ್ರ ನಾಥ್ ಚಟರ್ಜಿ ಅವರ ಮನೆಯಲ್ಲಿ ಜನಿಸಿದರು. ಆರಂಭದಲ್ಲಿ, ಅವರು ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಜತೀಂದ್ರನಾಥ ಮುಖರ್ಜಿಯವರ ಪರವಾಗಿ ನಿಂತರು. ನಂತರ 1907 ರಲ್ಲಿ, ಅವರು ಅರಬಿಂದೋ ಘೋಷ್ ಅವರನ್ನು ಭೇಟಿಯಾದರು ಮತ್ತು ಅವರು ದೇಶವನ್ನು ಬ್ರಿಟಿಷ್ ಗುಲಾಮಗಿರಿಯಿಂದ ಮುಕ್ತಗೊಳಿಸಲು ಸಂಪೂರ್ಣವಾಗಿ ಸಮರ್ಪಿತರಾದರು. ಕ್ರಾಂತಿಕಾರಿಗಳಿಗೆ ಸಹಾಯ ಮಾಡಲು ನಿಧಿ ಸಂಗ್ರಹಿಸಲು ಅವರನ್ನು ಪ್ರೋತ್ಸಾಹಿಸಿದ್ದು ಅರಬಿಂದೋ ಎಂದು ನಂಬಲಾಗಿದೆ. 1915ರಲ್ಲಿ 5 ವರ್ಷಗಳ ಕಾಲ ಭೂಗತರಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಮಾರುವೇಷದಲ್ಲಿ ಪ್ರಯಾಣಿಸಿದ್ದರೆಂದು ಹೇಳಲಾಗುತ್ತದೆ.

ಆ ಸಮಯದಲ್ಲಿ ಬ್ರಿಟಿಷರು ಅವರ ತಲೆಗೆ 10,000 ರೂ.ಗಳ ಬಹುಮಾನವನ್ನು ಘೋಷಿಸಿದ್ದರು. ಅಷ್ಟೇ ಅಲ್ಲ, ಬಂಗಾಳದ ಮೊದಲ ಮಹಿಳಾ ರಾಜಕೀಯ ಕೈದಿಯಾದ ನಾನಿಬಾಲಾ ದೇವಿ, ಅಮರೇಂದ್ರನಾಥ್ ಚಟರ್ಜಿಯವರ ದೂರದ ಸಂಬಂಧಿಯೂ ಆಗಿದ್ದರು ಮತ್ತು ಅವರು ಅವರಿಂದ ಪ್ರೇರಿತರಾಗಿದ್ದರು ಮತ್ತು ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದರು. ಅವರು ಚಂದನ್ ನಗರದಲ್ಲಿ ಒಂದು ಮನೆಯನ್ನು ಬಾಡಿಗೆಗೆ ಪಡೆದು ಅಮರೇಂದ್ರ ನಾಥ್ ಚಟರ್ಜಿ ಮತ್ತು ಯುಗಾಂತರ್ ಗುಂಪಿನ ಇತರ ಕ್ರಾಂತಿಕಾರಿಗಳಾದ ಜಾದು ಗೋಪಾಲ್ ಮುಖರ್ಜಿ, ಶಿವ ಭೂಷಣ್ ದತ್ ಮುಂತಾದವರಿಗೆ ಆಶ್ರಯ ನೀಡಿದರು. 1923 ರಲ್ಲಿ, ಅಮರೇಂದ್ರನಾಥ್ ಚಟರ್ಜಿ ಕೆಲವು ದಿನಗಳ ಕಾಲ ಜೈಲಿನಲ್ಲಿದ್ದರು, ಮತ್ತು ಅದರ ನಂತರ, ಅವರು ತಮ್ಮ ಕ್ರಿಯಾಶೀಲತೆಯನ್ನು ಇತರ ರೀತಿಯಲ್ಲಿ ಹೆಚ್ಚಿಸಿಕೊಂಡರು. ಭಾರತದ ಸ್ವಾತಂತ್ರ್ಯದ ನಂತರವೂ ಅವರು ಸಕ್ರಿಯರಾಗಿದ್ದರು ಮತ್ತು 1957 ರ ಸೆಪ್ಟೆಂಬರ್ 4 ರಂದು ತಮ್ಮ 77 ನೇ ವಯಸ್ಸಿನಲ್ಲಿ ಪಶ್ಚಿಮ ಬಂಗಾಳದಲ್ಲಿ ನಿಧನಹೊಂದಿದರು. ಅಮರೇಂದ್ರ ನಾಥ್ ಚಟರ್ಜಿ ಅವರ ಪ್ರತಿಮೆಯನ್ನು ಅವರ ಹುಟ್ಟೂರಾದ ಉತ್ತರಪಾದದ ಮುಖ್ಯ ರಸ್ತೆಯಲ್ಲಿ ಸ್ಥಾಪಿಸಲಾಗಿದೆ.

ತಮ್ಮ ಕೊನೆಯುಸಿರಿನವರೆಗೂ ದೇಶಕ್ಕಾಗಿ ಸೇವೆ ಸಲ್ಲಿಸಿದ ಸುಶೀಲಾ ಚೈನ್ ಟ್ರೆಹಾನ್

ಜನನ: 1 ಜುಲೈ 1923, **ಮರಣ:** 28 ಸೆಪ್ಟೆಂಬರ್ 2011

ಸುಶೀಲಾ ಚೈನ್ ಟ್ರೆಹಾನ್ ಅವರು ಇತರ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ದೇಶದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದರು. ದೇಶದ ಸ್ವಾತಂತ್ರ್ಯಕ್ಕಾಗಿ ಶೌರ್ಯದಿಂದ ಹೋರಾಡುತ್ತಿರುವಾಗ ಅವರು ಪೊಲೀಸ್ ಚಿತ್ರಹಿಂಸೆಯನ್ನು ಅನುಭವಿಸಿದ್ದಲ್ಲದೆ, ಆ ದಿನಗಳಲ್ಲಿ ನಿಷಿದ್ಧವೆಂದು ಪರಿಗಣಿಸಲಾಗಿದ್ದ ಪಂಜಾಬಿನ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ಅಭಿಯಾನವನ್ನೂ ಸಹ ಕೈಗೊಂಡರು. ಜುಲೈ 1, 1923 ರಂದು ಪಂಜಾಬ್ ನ ಪಠಾಣ್ ಕೋಟ್ ನಲ್ಲಿ ಜನಿಸಿದ ಸುಶೀಲಾ, ತಮ್ಮ ನಾಲ್ವರು ಒಡಹುಟ್ಟಿದವರಲ್ಲಿ ಕಿರಿಯವರಾಗಿದ್ದರು. ಅವರ ತಂದೆ ಮಥುರಾದಾಸ್ ಟ್ರೆಹಾನ್ ವೃತ್ತಿಯಲ್ಲಿ ಗುತ್ತಿಗೆದಾರರಾಗಿದ್ದರು ಮತ್ತು ಪಠಾಣ್ ಕೋಟ್ ನಲ್ಲಿ ಕಾಂಗ್ರೆಸ್ ಪಕ್ಷದ ಸ್ಥಾಪಕರಲ್ಲಿ ಒಬ್ಬರಾಗಿದ್ದರು.

ಅದೇ ಸಮಯದಲ್ಲಿ, ಅವರು ಆರ್ಯ ಸಮಾಜದ ಪ್ರಮುಖ ಸದಸ್ಯರೂ ಆಗಿದ್ದರು. ಸುಶೀಲಾ ಬೆಳೆಯುತ್ತಿದ್ದಾಗಲೇ ಭಾರತದ ಸ್ವಾತಂತ್ರ್ಯದ ಬಗ್ಗೆ ಒಲವು ಬೆಳೆಸಿಕೊಂಡರು. ಈ ಸಮಯದಲ್ಲಿ ಅವರ ತಂದೆ ನಿಗೂಢ ಸಾವಿಗೀಡಾದರು. ಈ ಸ್ಥಿತಿಯಲ್ಲಿ ಅವರು ಒಂದು ಪುಸ್ತಕವನ್ನು ಓದಲಾರಂಭಿಸಿದರು, ಅದನ್ನು ಓದಿದ ಬಳಿಕ ಅವರು ಭಾರತದ ಸ್ವಾತಂತ್ರ್ಯದ ಬಗ್ಗೆ ತುಂಬಾ ಭಾವೋದ್ರಿಕ್ತರಾದರು. ಭಗತ್ ಸಿಂಗ್ ಅವರ ಧೈರ್ಯಶಾಲಿ ಕಥೆಗಳಿಂದ ಸುಶೀಲಾ ಕೂಡ ಪ್ರೇರಿತರಾದರು. ಅವರು ತಮ್ಮ 18 ನೇ ವಯಸ್ಸಿನಲ್ಲಿ ಶಕುಂತಲಾತಾ ಆಜಾದ್ ಎಂಬ ಸ್ವಾತಂತ್ರ್ಯ ಹೋರಾಟಗಾರರನ್ನು ಭೇಟಿಯಾದರು, ನಂತರ ಅವರು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ತಮ್ಮ ಮನೆಯನ್ನೂ ತೊರೆದರು. ಅವರು ಭೂಗತರಾದರು ಮತ್ತು ಸ್ವಾತಂತ್ರ್ಯಕ್ಕಾಗಿ ಕಾರ್ಯತಂತ್ರವನ್ನು ರೂಪಿಸಲು ಪ್ರಾರಂಭಿಸಿದರು. ಆಕೆಯ ಹೋರಾಟದಲ್ಲಿ, ಅವರು ಪೊಲೀಸ್ ಲಾಠಿ ಪ್ರಹಾರ ಎದುರಿಸಿದರು. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಸುಶೀಲಾ ಮನಸ್ಸು ಮಾಡಿದ್ದರು ಮತ್ತು ಯಾವುದೇ ರೀತಿಯ ಪ್ರತಿಕೂಲ ಪರಿಸ್ಥಿತಿಗೂ ಅವರ ಸಂಕಲ್ಪವನ್ನು ಮುರಿಯಲು ಸಾಧ್ಯವಾಗಲಿಲ್ಲ.

ಮಹಿಳೆಯರಲ್ಲಿ ಶಿಕ್ಷಣದ ಮನೋಭಾವವನ್ನು ಜಾಗೃತಗೊಳಿಸಲು ಮತ್ತು ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು, ಅವರು ಬಹು ದೂರದ ಹಳ್ಳಿಗಳಿಗೂ ಬೈಸಿಕಲ್ ನಲ್ಲಿ ಪ್ರಯಾಣಿಸುತ್ತಿದ್ದರು. ಅವರು ಅಲ್ಲಿನ ಮಹಿಳೆಯರನ್ನು ಅಡುಗೆ ಮಾಡಲು, ಬಟ್ಟೆ ಹೊಲಿಯಲು ಮತ್ತು ಸ್ವಚ್ಛಗೊಳಿಸಲು ಪ್ರೋತ್ಸಾಹಿಸಿದ್ದರು. ಆ ಸಮಯದಲ್ಲಿ ಹುಡುಗಿಯರು ಸೈಕಲ್ ತುಳಿಯುವುದು ನಿಷಿದ್ಧ ಎಂದು ಪರಿಗಣಿಸಲಾಗುತ್ತಿತ್ತು ಆದರೆ ಅವರು ಹಠ ಬಿಡಲಿಲ್ಲ. ಭಾರತದ ಸ್ವಾತಂತ್ರ್ಯದ ನಂತರವೂ, ಅವರು ಮಕ್ಕಳಿಗೆ ಶಿಕ್ಷಣವನ್ನು ಉತ್ತೇಜಿಸುವುದನ್ನು ಮುಂದುವರಿಸಿದರು ಮತ್ತು ಮೂರು ಬಾಲಕಿಯರ ಮತ್ತು ಸಹ-ಶಿಕ್ಷಣ ಶಾಲೆಯನ್ನು ತೆರೆದರು. ವಸಾಹತುಶಾಹಿ ಶಕ್ತಿಗಳಿಂದ ವಿಮೋಚನೆಗೊಂಡ ನಂತರ ದೇಶವು ಸಾಮಾಜಿಕ ಕೆಡುಕುಗಳ ಮನಸ್ಥಿತಿಯಿಂದ ಮುಕ್ತವಾಗಿರಬೇಕು ಎಂದು ಅವರು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಹೀಗಾಗಿಯೇ ಅವರು ಭಾರತದ ಸ್ವಾತಂತ್ರ್ಯದ ಕಾಲದಿಂದ ಮರಣಹೊಂದಿದ ಸೆಪ್ಟೆಂಬರ್ 28, 2011 ರವರೆಗೂ ಸಮಾಜದ ಒಳಿತಿಗಾಗಿ ಕೆಲಸ ಮಾಡುವುದನ್ನು ಮುಂದುವರಿಸಿದ್ದರು. ■

ಅಮ್ಮ

“ ನನ್ನ ತಾಯಿಯ ಈ ಜೀವನ ಪಯಣದಲ್ಲಿ, ನಾನು ಇಡೀ ದೇಶದ ಮಾತೃ ಶಕ್ತಿಯ ತಪಸ್ಸು, ತ್ಯಾಗ ಮತ್ತು ಕೊಡುಗೆಯ ಬಗ್ಗೆ ಮಾತನಾಡುತ್ತೇನೆ ”

ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 'ಮಾ' ಎಂಬ ಶೀರ್ಷಿಕೆಯ ಬ್ಲಾಗ್ ಬರೆದಿದ್ದು, ಅದರಲ್ಲಿ ಅವರು ತಮ್ಮ ತಾಯಿಯ ಹೋರಾಟ, ಅವರ ಆದರ್ಶ, ಜಲಸಂರಕ್ಷಣೆ ಪ್ರಯತ್ನಗಳು, ಪ್ರಾಣಿ ಮತ್ತು ಪಕ್ಷಿಗಳ ಮೇಲಿನ ಪ್ರೀತಿ, ಕೆಟ್ಟ ಕೆಲಸ ಮಾಡಬಾರದೆಂಬ ಪಾಠ, ಬಡವರ ಕಲ್ಯಾಣಕ್ಕಾಗಿ ಶ್ರಮಿಸಲು ನೀಡಿದ ಸಲಹೆ ಮತ್ತು ನಮ್ಮನ್ನು ನಾವು ಆರೋಗ್ಯವಾಗಿಟ್ಟುಕೊಳ್ಳಲು ನೀಡಿದ ಹಿತೋಕ್ತಿಗಳ ಬಗ್ಗೆ ಒತ್ತಿ ಹೇಳಿದ್ದಾರೆ. ಆದರ್ಶ ತಾಯಿ ಮತ್ತು ಸ್ತ್ರೀ ಶಕ್ತಿಯನ್ನು ಅವರದೇ ಪದಗಳಲ್ಲಿ ಓದಿ...

ಅಮ್ಮ – ಇದು ನಿಘಂಟಿನಲ್ಲಿರುವ ಮತ್ತೊಂದು ಪದ ಮಾತ್ರವಲ್ಲ. ಇದು ಪ್ರೀತಿ, ಸಹನೆ, ನಂಬಿಕೆ ಮತ್ತು ಇನ್ನೂ ಹೆಚ್ಚಿನ ಭಾವನೆಗಳ ಸಂಪೂರ್ಣ ಹರವು. ಪ್ರಪಂಚದಾದ್ಯಂತ, ಅದು ಯಾವುದೇ ದೇಶ ಅಥವಾ ಪ್ರದೇಶವಾಗಿರಲಿ, ಮಕ್ಕಳು ತಮ್ಮ ತಾಯಂದಿರ ಬಗ್ಗೆ ವಿಶೇಷ ಪ್ರೀತಿಯನ್ನು ಹೊಂದಿರುತ್ತಾರೆ. ತಾಯಿಯು ತನ್ನ ಮಕ್ಕಳಿಗೆ ಜನ್ಮ ನೀಡುವುದು ಮಾತ್ರವಲ್ಲ, ಅವರ ಮನಸ್ಸು, ಅವರ ವ್ಯಕ್ತಿತ್ವ ಮತ್ತು ಅವರ ಆತ್ಮವಿಶ್ವಾಸವನ್ನು ರೂಪಿಸುತ್ತಾಳೆ. ಅದಕ್ಕಾಗಿ ತಾಯಂದಿರು ನಿಸ್ವಾರ್ಥವಾಗಿ ತಮ್ಮ ವೈಯಕ್ತಿಕ ಅಗತ್ಯಗಳು ಮತ್ತು ಆಕಾಂಕ್ಷೆಗಳನ್ನು ತ್ಯಾಗ ಮಾಡುತ್ತಾರೆ.

ಇಂದು, ನನ್ನ ಅಮ್ಮ ಶ್ರೀಮತಿ ಹೀರಾಬಾ ತಮ್ಮ ನೂರನೇ ವರ್ಷಕ್ಕೆ ಕಾಲಿಡುತ್ತಿರುವುದನ್ನು ಹಂಚಿಕೊಳ್ಳಲು ನನಗೆ ಅತ್ಯಂತ ಸಂತೋಷವಾಗುತ್ತಿದೆ. ಇದು ಅವರ ಜನ್ಮ ಶತಮಾನೋತ್ಸವ ವರ್ಷ. ನನ್ನ ತಂದೆ ಬದುಕಿದ್ದರೆ ಅವರೂ ಕಳೆದ ವಾರ ನೂರನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದರು. ನನ್ನ ತಾಯಿಯ ಶತಮಾನೋತ್ಸವ ವರ್ಷ ಆರಂಭವಾಗುತ್ತಿರುವುದರಿಂದ ಮತ್ತು ನನ್ನ ತಂದೆಯವರು ಶತಮಾನೋತ್ಸವವನ್ನು ಪೂರ್ಣಗೊಳಿಸುತ್ತಿದ್ದರಿಂದ 2022 ಒಂದು ವಿಶೇಷ ವರ್ಷವಾಗಿದೆ.

ಕಳೆದ ವಾರವಷ್ಟೇ, ನನ್ನ ಸೋದರ ಸಂಬಂಧಿಯು ಗಾಂಧಿನಗರದಲ್ಲಿರುವ ನನ್ನ ತಾಯಿಯ ಕೆಲವು ವೀಡಿಯೊಗಳನ್ನು ಕಳುಹಿಸಿದ್ದರು. ಸಮಾಜದ ಕೆಲವು ಯುವಕರು ಮನೆಗೆ ಬಂದಿದ್ದರು, ನನ್ನ ತಂದೆಯ ಭಾವಚಿತ್ರವನ್ನು ಕುರ್ಚಿಯ ಮೇಲೆ ಇಡಲಾಗಿತ್ತು, ಕೀರ್ತನೆ ನಡೆಯುತ್ತಿತ್ತು ಮತ್ತು ತಾಯಿ ಮಂಜೀರ ನುಡಿಸುತ್ತಾ ಭಜನೆಯಲ್ಲಿ ಮಗ್ನರಾಗಿದ್ದರು. ಅಮ್ಮ ಇನ್ನೂ ಹಾಗೆಯೇ ಇದ್ದಾರೆ - ವಯೋಸಹಜತೆಯಿಂದ ದೈಹಿಕವಾಗಿ ಕ್ಷೀಣಿಸಿರಬಹುದು, ಆದರೆ ಮಾನಸಿಕವಾಗಿ ಆಕೆ ಎಂದಿನಂತೆಯೇ ಚುರುಕಾಗಿದ್ದಾರೆ.

ಹಿಂದೆ ನಮ್ಮ ಕುಟುಂಬದಲ್ಲಿ ಹುಟ್ಟುಹಬ್ಬವನ್ನು ಆಚರಿಸುವ ಪದ್ಧತಿ ಇರಲಿಲ್ಲ. ಆದರೆ, ನನ್ನ ತಂದೆಯ ಜನ್ಮದಿನದಂದು ಅವರ ನೆನಪಿಗಾಗಿ ಯುವ ಪೀಳಿಗೆಯ ಮಕ್ಕಳು 100 ಗಿಡಗಳನ್ನು ನೆಟ್ಟರು.

ನನ್ನ ಜೀವನದಲ್ಲಿ ನಡೆದ ಒಳ್ಳೆಯದಕ್ಕೆ ಮತ್ತು ನನ್ನಲ್ಲಿರುವ ಒಳ್ಳೆಯತನಕ್ಕೆ ನನ್ನ ಹೆತ್ತವರೇ ಕಾರಣ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಇಂದು, ದೆಹಲಿಯಲ್ಲಿ ಕುಳಿತಿರುವ ನನಗೆ ಹಿಂದಿನ ನೆನಪುಗಳು ತುಂಬಿ ಬರುತ್ತವೆ.

ನನ್ನ ತಾಯಿ ಎಷ್ಟು ಅಸಾಧಾರಣಳೋ ಅಷ್ಟೇ ಸರಳ, ಎಲ್ಲಾ ತಾಯಂದಿರಂತೆ!. ನಾನು ನನ್ನ ತಾಯಿಯ ಬಗ್ಗೆ ಬರೆಯುವಾಗ, ನಿಮ್ಮಲ್ಲಿ ಅನೇಕರಿಗೆ ನಿಮ್ಮ ತಾಯಂದಿರ ಬಗ್ಗೆ ಸಾದೃಶ್ಯ ಕಂಡುಬರುತ್ತದೆ ಎಂದು ನನಗೆ ಖಾತ್ರಿಯಿದೆ. ಇದನ್ನು ಓದುವಾಗ, ನೀವು ನಿಮ್ಮ ಸ್ವಂತ ತಾಯಿಯ ಚಿತ್ರವನ್ನೇ ನೋಡಬಹುದು.

ತಾಯಿಯ ತಪಸ್ಸು ಉತ್ತಮ ಮನುಷ್ಯನನ್ನು ಸೃಷ್ಟಿಸುತ್ತದೆ. ಆಕೆಯ ಪ್ರೀತಿಯು ಮಗುವಿಗೆ ಮಾನವೀಯ ಮೌಲ್ಯಗಳು ಮತ್ತು ಸಹಾನುಭೂತಿಯನ್ನು ತುಂಬುತ್ತವೆ. ತಾಯಿ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿತ್ವ ಮಾತ್ರವಲ್ಲ, ತಾಯ್ತನ ಎಂಬುದು ಒಂದು ಶ್ರೇಷ್ಠತೆ. ದೇವರುಗಳನ್ನು ಅವರ ಭಕ್ತರ ಸ್ವಭಾವಕ್ಕೆ

“ನಾನು ನನ್ನ ತಾಯಿಯ ಮತ್ತು ಅವರಂತಹ ಲಕ್ಷಾಂತರ ಮಹಿಳೆಯರ ಶಕ್ತಿಯನ್ನು ನೋಡಿದಾಗ, ಭಾರತದ ನಾರಿಯರು ಮತ್ತು ಸಹೋದರಿಯರಿಗೆ ಅಸಾಧ್ಯವಾದ ಯಾವುದೇ ಗುರಿ ನನಗೆ ಕಾಣುವುದಿಲ್ಲ.”

ಅನುಗುಣವಾಗಿ ಸೃಷ್ಟಿಸಲಾಗಿದೆ ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಅದೇ ರೀತಿ, ನಾವು ನಮ್ಮ ತಾಯಂದಿರನ್ನು ಮತ್ತು ಅವರ ತಾಯ್ತನವನ್ನು ನಮ್ಮ ಸ್ವಂತ ಸ್ವಭಾವ ಮತ್ತು ಮನಸ್ಥಿತಿಗೆ ಅನುಗುಣವಾಗಿ ಅನುಭವಿಸುತ್ತೇವೆ.

ನನ್ನ ತಾಯಿ ಗುಜರಾತ್ನ ಮೆಹ್ಸಾನಾದ ವಿಸ್ನಗರದಲ್ಲಿ ಜನಿಸಿದರು, ಇದು ನನ್ನ ತವರು ವಡ್ನಾಗರಕ್ಕೆ ಬಹಳ ಹತ್ತಿರದಲ್ಲಿದೆ. ಆಕೆಗೆ ಸ್ವಂತ ತಾಯಿಯ ವಾತ್ಸಲ್ಯ ಸಿಗಲಿಲ್ಲ. ನನ್ನ ತಾಯಿಯು ಎಳೆವಯಸ್ಸಿನಲ್ಲಿಯೇ ನನ್ನ ಅಜ್ಜಿಯನ್ನು ಸ್ಪ್ಯಾನಿಷ್

ಫ್ಲೂ ಸಾಂಕ್ರಾಮಿಕ ರೋಗದಿಂದಾಗಿ ಕಳೆದುಕೊಂಡರು. ಆಕೆಗೆ ನನ್ನ ಅಜ್ಜಿಯ ಮುಖವಾಗಲಿ, ಅವಳ ಮಡಿಲಿನ ನೆಮ್ಮದಿಯಾಗಲಿ ನೆನಪಿಲ್ಲ. ಆಕೆ ತನ್ನ ಇಡೀ ಬಾಲ್ಯವನ್ನು ತನ್ನ ತಾಯಿಯಿಲ್ಲದೆ ಕಳೆದರು. ನಾವೆಲ್ಲರೂ ಮಾಡುವಂತೆ ಅವರು ತನ್ನ ತಾಯಿಯ ಮೇಲೆ ಕೋಪತಾಪ ತೋರಿಸಲು ಸಾಧ್ಯವಾಗಲಿಲ್ಲ. ನಮ್ಮೆಲ್ಲರಂತೆ ಅವರಿಗೆ ತನ್ನ ತಾಯಿಯ ಮಡಿಲಿನಲ್ಲಿ ಮಲಗಲಾಗಲಿಲ್ಲ. ಶಾಲೆಗೆ ಹೋಗಿ ಓದು ಬರಹ ಕಲಿಯಲೂ ಆಗಲಿಲ್ಲ. ಆಕೆಯ ಬಾಲ್ಯವು ಬಡತನ ಮತ್ತು ಕಷ್ಟದಿಂದ ಕೂಡಿತ್ತು.

ಇಂದಿಗೆ ಹೋಲಿಸಿದರೆ ಅಮ್ಮನ ಬಾಲ್ಯ ಅತ್ಯಂತ ಕಷ್ಟಕರವಾಗಿತ್ತು. ಬಹುಶಃ, ದೇವರು ಆಕೆಗೆ ನೀಡಿದ್ದು ಇದನ್ನೇ ಅನ್ನಿಸುತ್ತದೆ. ಇದು ದೇವರ ಇಚ್ಛೆ ಎಂದು ತಾಯಿಯೂ ನಂಬುತ್ತಾರೆ. ಆದರೆ ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು, ತಾಯಿಯ ಮುಖವನ್ನೂ ನೋಡಲಾಗಲಿಲ್ಲವಲ್ಲ ಎಂಬ ಕೊರಗು ಆಕೆಗೆ ನೋವು ನೀಡುತ್ತಲೇ ಇದೆ.

ಈ ಹೆಣಗಾಟಗಳಿಂದಾಗಿ ತಾಯಿಯು ಬಾಲ್ಯವನ್ನು ಅನುಭವಿಸಲಾಗಲಿಲ್ಲ, ಆಕೆಯು ತನ್ನ ವಯಸ್ಸಿಗೆ ಮೀರಿ ಬೆಳೆಯುವಂತೆ ಮಾಡಿತು. ಕುಟುಂಬದಲ್ಲಿ ಹಿರಿಯ ಮಗುವಾಗಿದ್ದ ಅವರು ಮದುವೆಯ ನಂತರ ಹಿರಿಯ ಸೊಸೆಯಾದರು. ಆಕೆಯ ಬಾಲ್ಯದಲ್ಲಿ, ಇಡೀ ಕುಟುಂಬವನ್ನು ನೋಡಿಕೊಳ್ಳುತ್ತಿದ್ದರು ಮತ್ತು ಎಲ್ಲಾ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಮದುವೆಯ ನಂತರವೂ ಆಕೆ ಈ ಎಲ್ಲಾ ಜವಾಬ್ದಾರಿಗಳನ್ನು ನಿಭಾಯಿಸಿದರು. ದುರ್ಭರವಾದ ಜವಾಬ್ದಾರಿಗಳು ಮತ್ತು ದೈನಂದಿನ ಹೋರಾಟಗಳ ಹೊರತಾಗಿಯೂ, ತಾಯಿ ಇಡೀ ಕುಟುಂಬವನ್ನು ಸಹನೆ ಮತ್ತು ಸ್ಥೈರ್ಯದಿಂದ ಒಟ್ಟಿಗೆ ಹಿಡಿದಿಟ್ಟರು.

ವಡ್ನಾಗರದಲ್ಲಿ, ನಮ್ಮ ಕುಟುಂಬವು ಶೌಚಾಲಯ ಅಥವಾ ಸ್ನಾನದ ಮನೆಯಂತಹ ಐಷಾರಾಮಗಳಿರಲಿ, ಕಿಟಕಿಯೂ ಇಲ್ಲದ ಪುಟ್ಟ ಮನೆಯಲ್ಲಿ ವಾಸಿಸುತ್ತಿತ್ತು. ಮಣ್ಣಿನ ಗೋಡೆಗಳು ಮತ್ತು ಮಣ್ಣಿನ ಹೆಂಚುಗಳ ಛಾವಣಿಯಿದ್ದ ಒಂದು ಕೋಣೆಯನ್ನೇ ನಾವು ನಮ್ಮ ಮನೆ ಎಂದು ಕರೆಯುತ್ತಿದ್ದೆವು. ನಾವೆಲ್ಲರೂ-ನನ್ನ ಹೆತ್ತವರು, ನನ್ನ ಒಡಹುಟ್ಟಿದವರು ಮತ್ತು ನಾನು ಅದರಲ್ಲಿಯೇ ಇದ್ದೆವು.

ನನ್ನ ತಂದೆಯವರು ತಾಯಿಗೆ ಅಡುಗೆ ಮಾಡಲು ಸುಲಭವಾಗುವಂತೆ ಬಿದಿರು ಬೊಂಬುಗಳು ಮತ್ತು ಮರದ ಹಲಗೆಗಳಿಂದ ಮಚಾನ್ ಮಾಡಿದ್ದರು. ಇದು ನಮ್ಮ ಅಡುಗೆಮನೆಯಾಗಿತ್ತು. ಅಮ್ಮ ಅಡುಗೆ ಮಾಡಲು ಮಚ್ಚಾನದ ಮೇಲೆ ಹತ್ತುತ್ತಿದ್ದರು ಮತ್ತು ಮನೆಯವರೆಲ್ಲರೂ ಅದರ ಮೇಲೆ ಕುಳಿತು ಊಟ ಮಾಡುತ್ತಿದ್ದೆವು.

ಸಾಮಾನ್ಯವಾಗಿ, ಅಭಾವವು ಒತ್ತಡಕ್ಕೆ ಕಾರಣವಾಗುತ್ತದೆ. ಆದರೂ, ನನ್ನ ಪೋಷಕರು ದೈನಂದಿನ ಹೊಯ್ದಾಟಗಳ ಆತಂಕವು ಕುಟುಂಬದ ವಾತಾವರಣ ಹದಗೆಡಲು ಬಿಡಲಿಲ್ಲ. ನನ್ನ ತಂದೆ ತಾಯಿಯರಿಬ್ಬರೂ ತಮ್ಮ ಜವಾಬ್ದಾರಿಗಳನ್ನು ಹಂಚಿಕೊಂಡು ಜಾಗರೂಕತೆಯಿಂದ ಕುಟುಂಬವನ್ನು ನಿರ್ವಹಿಸಿದರು.

> **“ತಾಯಿಯ ತಪಸ್ಸು ತನ್ನ ಮಗುವನ್ನು ಒಳ್ಳೆ ಮನುಷ್ಯನನ್ನಾಗಿ ಮಾಡುತ್ತದೆ. ತಾಯಿಯ ವಾತ್ಸಲ್ಯವು ತನ್ನ ಮಗುವಿಗೆ ಮಾನವೀಯತೆಯ ಬಗ್ಗೆ ಒಲವನ್ನು ಬೆಳೆಸುತ್ತದೆ”**

ಗಡಿಯಾರದ ಗಂಟೆ ಬಾರಿಸಿದಂತೆ, ನನ್ನ ತಂದೆ ಬೆಳಿಗ್ಗೆ ನಾಲ್ಕು ಗಂಟೆಗೆ ಕೆಲಸಕ್ಕೆ ಹೋಗುತ್ತಿದ್ದರು. ಅವರ ಹೆಜ್ಜೆ ಸಪ್ಪಳವು ಅಕ್ಕಪಕ್ಕದವರಿಗೆ ಈಗ ನಾಲ್ಕು ಗಂಟೆಯಾಗಿದೆ ಮತ್ತು ದಾಮೋದರ್ ಕಾಕಾ ಕೆಲಸಕ್ಕೆ ಹೋಗುತ್ತಿದ್ದಾರೆ ಎಂದು ಹೇಳುತ್ತಿದ್ದವು. ತನ್ನ ಪುಟ್ಟ ಚಹಾ ಅಂಗಡಿಯನ್ನು ತೆರೆಯುವ ಮೊದಲು ಸ್ಥಳೀಯ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸುವುದು ಅವರ ಮತ್ತೊಂದು ದೈನಂದಿನ ಆಚರಣೆಯಾಗಿತ್ತು.

ತಾಯಿಯೂ ಅಷ್ಟೇ ಸಮಯಪಾಲನೆ ಮಾಡುತ್ತಿದ್ದರು. ಅವರು ಕೂಡ ನನ್ನ ತಂದೆಯೊಂದಿಗೆ ಏಳುತ್ತಿದ್ದರು ಮತ್ತು ಬೆಳಿಗ್ಗೆಯೇ ಅನೇಕ ಕೆಲಸಗಳನ್ನು ಮುಗಿಸುತ್ತಿದ್ದರು. ಕಾಳುಗಳನ್ನು ಅರೆಯುವುದರಿಂದ ಹಿಡಿದು ಅಕ್ಕಿ ಮತ್ತು ಬೇಳೆಯನ್ನು ಜರಡಿ ಹಿಡಿಯುವವರೆಗೆ ತಾಯಿಗೆ ಯಾರದೇ ನೆರವಿರಲಿಲ್ಲ. ಕೆಲಸ ಮಾಡುವಾಗ ಆಕೆ ತನ್ನ ನೆಚ್ಚಿನ ಭಜನೆ ಮತ್ತು ಸ್ತೋತ್ರಗಳನ್ನು ಗುನುಗುತ್ತಿದ್ದರು. ನರಸಿ ಮೆಹ್ತಾ ಜಿ ಯವರ ಜನಪ್ರಿಯ ಭಜನೆ

“ತಾಯಿ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿತ್ವವಲ್ಲ, ತಾಯ್ತನವು ಒಂದು ಗುಣವಾಗಿದೆ. ತಾಯಿ ಎಂದಿಗೂ ನಮ್ಮಿಂದ ಏನನ್ನೂ ನಿರೀಕ್ಷಿಸುವುದಿಲ್ಲ.”

'ಜಲ್ಕಮಲ್ಕಡಿ ಜಾನೇ ಬಾಲಾ, ಸ್ವಾಮಿ ಅಮರೋ ಜಗ್ಸೆ' ಇಷ್ಟಪಡುತ್ತಿದ್ದರು. 'ಶಿವಾಜಿ ನೂ ಹಲಾರ್ದು'ಎಂಬ ಲಾಲಿ ಹಾಡು ಸಹ ಅವರಿಗೆ ಇಷ್ಟವಾಗಿತ್ತು.

ಮಕ್ಕಳಾದ ನಾವು ನಮ್ಮ ಓದನ್ನು ಬಿಟ್ಟು ಮನೆಕೆಲಸಗಳಲ್ಲಿ ಸಹಾಯ ಮಾಡಬೇಕೆಂದು ತಾಯಿ ನಿರೀಕ್ಷಿಸುತ್ತಿರಲಿಲ್ಲ. ಆಕೆ ಎಂದಿಗೂ ನಮ್ಮ ಸಹಾಯವನ್ನು ಕೇಳಲಿಲ್ಲ. ಆದರೂ, ತಾಯಿಯ ಕಷ್ಟವನ್ನು ನೋಡಿ, ಆಕೆಗೆ ಸಹಾಯ ಮಾಡುವುದು ನಮ್ಮ ಕರ್ತವ್ಯವೆಂದು ನಾವೇ ತಿಳಿದೆವು. ನಾನು ಊರಿನ ಕೆರೆಯಲ್ಲಿ ಈಜುವುದನ್ನು ನಿಜವಾಗಿಯೂ ಆನಂದಿಸುತ್ತಿದ್ದೆ. ಹಾಗಾಗಿ ಮನೆಯಿಂದ ಕೊಳೆಯಾದ ಬಟ್ಟೆಗಳನ್ನೆಲ್ಲ ತೆಗೆದುಕೊಂಡು ಹೋಗಿ ಕೆರೆಯಲ್ಲಿ ಒಗೆಯುತ್ತಿದ್ದೆ. ಬಟ್ಟೆ ಒಗೆಯುವುದು ಮತ್ತು ನನ್ನ ಆಟ ಎರಡೂ ಒಟ್ಟಿಗೆ ನಡೆಯುತ್ತಿದ್ದವು.

ಮನೆಯ ಖರ್ಚನ್ನು ನಿಭಾಯಿಸಲು ತಾಯಿ ಕೆಲವು ಮನೆಗಳಲ್ಲಿ ಪಾತ್ರೆಗಳನ್ನು ತೊಳೆಯುತ್ತಿದ್ದರು. ನಮ್ಮ ಅಲ್ಪ ಆದಾಯಕ್ಕೆ ಪೂರಕವಾಗಿ ಚರಖಾದಲ್ಲಿ ನೂಲುತ್ತಿದ್ದರು. ಹತ್ತಿ ಬಿಡಿಸುವುದರಿಂದ ಹಿಡಿದು ನೂಲುವವರೆಗೆ ಎಲ್ಲವನ್ನೂ ಮಾಡುತ್ತಿದ್ದರು. ಇಂತಹ ಕಷ್ಟದ ಕೆಲಸದ ನಡುವೆಯೂ ಹತ್ತಿಗಿಡದ ಮುಳ್ಳು ನಮಗೆ ಚುಚ್ಚದಂತೆ ಕಾಳಜಿ ವಹಿಸುತ್ತಿದ್ದರು.

ತಾಯಿ ಇತರರ ಮೇಲೆ ಅವಲಂಬಿತರಾಗುತ್ತಿರಲಿಲ್ಲ ಅಥವಾ ಇತರರನ್ನು ತನ್ನ ಕೆಲಸ ಮಾಡುವಂತೆ ಕೇಳುತ್ತಿರಲಿಲ್ಲ. ಮುಂಗಾರು ಮಳೆಯು ನಮ್ಮ ಮಣ್ಣಿನ ಮನೆಗೆ ಅದರದೇ ಆದ ಸಮಸ್ಯೆಗಳನ್ನು ತರುತ್ತಿತ್ತು. ಆದಾಗ್ಯೂ, ನಮಗೆ ತೊಂದರೆಗಳು ಆದಷ್ಟು ಕಡಿಮೆಯಾಗುವಂತೆ ತಾಯಿ ನೋಡಿಕೊಳ್ಳುತ್ತಿದ್ದರು. ಜೂನ್ ತಿಂಗಳ ಬಿಸಿಲಿನಲ್ಲಿ, ಅವಳು ನಮ್ಮ ಮಣ್ಣಿನ ಮನೆಯ ಛಾವಣಿಯ ಮೇಲೆ ಹತ್ತಿ ಹೆಂಚುಗಳನ್ನು ಸರಿಪಡಿಸುತ್ತಿದ್ದಳು. ಆದರೆ, ಆಕೆಯ ಈ ಎಲ್ಲ ಪ್ರಯತ್ನಗಳ ಹೊರತಾಗಿಯೂ, ನಮ್ಮ ಮನೆಯು ಮಳೆಯ ಆರ್ಭಟವನ್ನು ತಡೆದುಕೊಳ್ಳಲಾರದಷ್ಟು ಹಳೆಯದಾಗಿತ್ತು.

ಮಳೆಗಾಲದಲ್ಲಿ ನಮ್ಮ ಮನೆಯ ಛಾವಣಿ ಸೋರುತ್ತಿತ್ತು. ಮನೆಗೆ ನೀರು ನುಗ್ಗುತ್ತಿತ್ತು. ಮಳೆನೀರನ್ನು ಸಂಗ್ರಹಿಸಲು ತಾಯಿ ಬಕೆಟ್ ಮತ್ತು ಪಾತ್ರೆಗಳನ್ನು ಸೋರುತ್ತಿದ್ದ ಮಳೆ ನೀರಿನ ಕೆಳಗೆ ಇಡುತ್ತಿದ್ದರು. ಈ ಪ್ರತಿಕೂಲ ಪರಿಸ್ಥಿತಿಯಲ್ಲೂ ತಾಯಿ ಸ್ಥೈರ್ಯದ ಪ್ರತೀಕವಾಗಿದ್ದರು. ಹಲವಾರು ದಿನಗಳವರೆಗೆ ಆಕೆ ಈ ನೀರನ್ನು ಬಳಸುತ್ತಿದ್ದರು ಎಂದು ತಿಳಿದರೆ ನಿಮಗೆ ಆಶ್ಚರ್ಯವಾಗುತ್ತದೆ. ಜಲ ಸಂರಕ್ಷಣೆಗೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕೆ!

“ಪ್ರತಿ ಬೇಸಿಗೆಯಲ್ಲಿ, ನನ್ನಮ್ಮ ಪಕ್ಷಿಗಳಿಗಾಗಿ ಪಾತ್ರೆಯಲ್ಲಿ ನೀರನ್ನು ಇಡುತ್ತಿದ್ದರು. ನಮ್ಮ ಮನೆಯ ಸುತ್ತಮುತ್ತಲಿನ ಬೀದಿನಾಯಿಗಳು ಎಂದಿಗೂ ಹಸಿವಿನಿಂದ ಬಳಲಬಾರದು ಎಂದು ಅವರು ಖಾತ್ರಿ ಪಡಿಸಿಕೊಳ್ಳುತ್ತಿದ್ದರು.”

ತಾಯಿ ಮನೆಯನ್ನು ಒಪ್ಪವಾಗಿಡಲು ಇಷ್ಟಪಡುತ್ತಿದ್ದರು ಮತ್ತು ಅದನ್ನು ಸ್ವಚ್ಛಗೊಳಿಸಲು ಮತ್ತು ಸುಂದರಗೊಳಿಸಲು ಸಾಕಷ್ಟು ಸಮಯವನ್ನು ಕಳೆಯುತ್ತಿದ್ದರು. ಹಸುವಿನ ಸಗಣಿಯಿಂದ ನೆಲವನ್ನು ಸಾರಿಸುತ್ತಿದ್ದರು. ಹಸುವಿನ ಸಗಣಿಯ ಬೆರಣಿಯನ್ನು ಉರಿಸಿದಾಗ ಹೆಚ್ಚಿನ ಹೊಗೆ ಬರುತ್ತಿತ್ತು. ತಾಯಿ ನಮ್ಮ ಕಿಟಕಿಗಳಿಲ್ಲದ ಮನೆಯಲ್ಲಿ ಅದರಲ್ಲಿಯೇ ಅಡುಗೆ ಮಾಡುತ್ತಿದ್ದರು! ಗೋಡೆಗಳು ಮಸಿಯಿಂದ ಕಪ್ಪಾಗುತ್ತಿದ್ದವು ಮತ್ತು ಅವುಗಳಿಗೆ ಹೊಸ ಸುಣ್ಣ ಹೊಡೆಯುವ ಅಗತ್ಯವಿರುತ್ತಿತ್ತು. ಇದನ್ನೂ ತಾಯಿ ಕೆಲವು ತಿಂಗಳಿಗೊಮ್ಮೆ ಸ್ವತಃ ಮಾಡುತ್ತಿದ್ದರು. ಇದು ನಮ್ಮ ಪಾಳುಬಿದ್ದ ಮನೆಗೆ ತಾಜಾತನದ ಪರಿಮಳವನ್ನು ನೀಡುತ್ತಿತ್ತು. ಮನೆಯನ್ನು ಅಲಂಕರಿಸಲು ಸಾಕಷ್ಟು ಚಿಕ್ಕ ಮಣ್ಣಿನ ಬಟ್ಟಲುಗಳನ್ನೂ ಮಾಡುತ್ತಿದ್ದರು ಮತ್ತು ಮನೆಯ ಹಳೆಯ ವಸ್ತುಗಳನ್ನು ಮರುಬಳಕೆ ಮಾಡುವಲ್ಲಿ ಪ್ರಸಿದ್ಧವಾದ ಭಾರತೀಯ ಅಭ್ಯಾಸದಲ್ಲಿ ಅಮ್ಮ ಚಾಂಪಿಯನ್ ಆಗಿದ್ದರು.

ಅಮ್ಮನ ಮತ್ತೊಂದು ವಿಶಿಷ್ಟ ಅಭ್ಯಾಸ ನನಗೆ ನೆನಪಿದೆ. ಆಕೆ ಹಳೆಯ ಕಾಗದವನ್ನು ನೀರಿನಲ್ಲಿ ಅದ್ದಿ ಹುಣಸೆ ಬೀಜಗಳೊಂದಿಗೆ ಅಂಟಿನಂತಹ ಪೇಸ್ಟ್ ಅನ್ನು ತಯಾರಿಸುತ್ತಿದ್ದರು. ಈ ಪೇಸ್ಟ್ನಿಂದ ಗೋಡೆಗಳ ಮೇಲೆ ಕನ್ನಡಿಯ ತುಂಡುಗಳನ್ನು ಅಂಟಿಸಿ ಸುಂದರವಾದ ಚಿತ್ರಗಳನ್ನು ಮಾಡುತ್ತಿದ್ದರು. ಬಾಗಿಲಿಗೆ ನೇತು ಹಾಕಲು ಮಾರುಕಟ್ಟೆಯಿಂದ ಸಣ್ಣ ಪುಟ್ಟ ಅಲಂಕಾರಿಕ ವಸ್ತುಗಳು ತರುತ್ತಿದ್ದರು.

ಹಾಸಿಗೆ ಸ್ವಚ್ಛವಾಗಿರಬೇಕು ಮತ್ತು ಸರಿಯಾಗಿ ಹಾಸಿರಬೇಕು ಎಂದು ತಾಯಿ ತುಂಬಾ ಗಮನಿಸುತ್ತಿದ್ದರು. ಹಾಸಿಗೆಯ ಮೇಲಿನ ಧೂಳನ್ನು ಸಹ ಅವರು ಸಹಿಸುತ್ತಿರಲಿಲ್ಲ. ಸ್ವಲ್ಪವೇ ಸುಕ್ಕು ಕಂಡರೂ ಅದನ್ನು ಕೊಡವಿ ಮತ್ತೆ ಹಾಸುತ್ತಿದ್ದರು. ಈ ಅಭ್ಯಾಸದ ಬಗ್ಗೆ ನಾವೆಲ್ಲರೂ ಬಹಳ ಎಚ್ಚರದಿಂದ ಇದ್ದೆವು. ಇಂದಿಗೂ, ಈ ವಯಸ್ಸಿನಲ್ಲೂ, ತನ್ನ ಹಾಸಿಗೆಯ ಮೇಲೆ ಒಂದೇ ಒಂದು ಸುಕ್ಕುಇರಬಾರದು ಎಂದು ನಮ್ಮ ತಾಯಿ ಬಯಸುತ್ತಾರೆ!

ಪರಿಪೂರ್ಣತೆಯ ಬಗೆಗಗಿನ ಅವರ ಪ್ರಯತ್ನವು ಈಗಲೂ ಚಾಲ್ತಿಯಲ್ಲಿದೆ. ಅವರು ಗಾಂಧಿನಗರದಲ್ಲಿ ನನ್ನ ಸಹೋದರ ಮತ್ತು ನನ್ನ ಸೋದರ ಸಂಬಂಧಿಯ ಕುಟುಂಬಗಳೊಂದಿಗೆ ಉಳಿದುಕೊಂಡಿದ್ದರೂ, ಈ ವಯಸ್ಸಿನಲ್ಲೂ ಅ ತನ್ನ ಎಲ್ಲಾ ಕೆಲಸಗಳನ್ನು ಸ್ವತಃ ಮಾಡಲು ಪ್ರಯತ್ನಿಸುತ್ತಾರೆ.

ಶುಚಿತ್ವದ ಬಗ್ಗೆ ಅವರ ಗಮನ ಇಂದಿಗೂ ಸ್ಪಷ್ಟವಾಗಿದೆ. ನಾನು ಅವರನ್ನು ಭೇಟಿ ಮಾಡಲು ಗಾಂಧಿನಗರಕ್ಕೆ ಹೋದಾಗ,

ನನಗೆ ತನ್ನ ಕೈಯಾರೆ ಸಿಹಿತಿಂಡಿಗಳನ್ನು ತಿನ್ನಿಸುತ್ತಾರೆ. ಚಿಕ್ಕ ಮಗುವಿನ ತಾಯಿಯಂತೆ, ನಾನು ತಿಂದ ನಂತರ ನ್ಯಾಪ್ಕಿನ್ ನಿಂದ ನನ್ನ ಮುಖವನ್ನು ಒರೆಸುತ್ತಾರೆ. ಅವರು ಯಾವಾಗಲೂ ತನ್ನ ಸೀರೆಗೆ ಕರವಸ್ತ್ರ ಅಥವಾ ಸಣ್ಣ ಟವೆಲ್ ಅನ್ನು ಸಿಕ್ಕಿಸಿಕೊಂಡಿರುತ್ತಾರೆ.

ಅಮ್ಮನ ಶುಚಿತ್ವದ ಮೇಲಿನ ಉಪಕಥೆಗಳ ಬಗ್ಗೆ ನಾನು ರೀಮ್ಗಟ್ಟಲೆ ಬರೆಯಬಲ್ಲೆ. ಅವರು ಇನ್ನೊಂದು ಗುಣವನ್ನು ಹೊಂದಿದ್ದರು - ಸ್ವಚ್ಛತೆ ಮತ್ತು ನೈರ್ಮಲ್ಯದಲ್ಲಿ ತೊಡಗಿರುವವರಿಗೆ ತುಂಬಾ ಗೌರವ ನೀಡುತ್ತಿದ್ದರು. ನನಗೆ ನೆನಪಿದೆ, ವಡ್ನಾಗರದಲ್ಲಿರುವ ನಮ್ಮ ಮನೆಯ ಪಕ್ಕದ ಚರಂಡಿಯನ್ನು ಸ್ವಚ್ಛಗೊಳಿಸಲು ಯಾರಾದರೂ ಬಂದಾಗ, ತಾಯಿ ಅವರಿಗೆ ಚಹಾ ನೀಡದೆ ಕಳುಹಿಸುತ್ತಿರಲಿಲ್ಲ. ನಮ್ಮ ಮನೆಯು ಸಫಾಯಿ ಕರ್ಮಚಾರಿಗಳಿಗೆ ಕೆಲಸದ ನಂತರ ಚಹಾಕ್ಕೆ ಪ್ರಸಿದ್ಧವಾಯಿತು.

ನಾನು ಯಾವಾಗಲೂ ನೆನಪಿಸಿಕೊಳ್ಳುವ ತಾಯಿಯ ಮತ್ತೊಂದು ಅಭ್ಯಾಸವೆಂದರೆ ಇತರ ಜೀವಿಗಳ ಬಗ್ಗೆ ಅವರ ವಿಶೇಷ ವಾತ್ಸಲ್ಯ. ಪ್ರತಿ ಬೇಸಿಗೆಯಲ್ಲಿ, ಅವರು ಪಕ್ಷಿಗಳಿಗೆ ನೀರಿನ ಪಾತ್ರೆಗಳನ್ನು ಇಡುತ್ತಿದ್ದರು. ನಮ್ಮ ಮನೆಯ ಸುತ್ತ ಮುತ್ತಲಿನ ಬೀದಿನಾಯಿಗಳು ಎಂದಿಗೂ ಹಸಿವಿನಿಂದ ಇರದಂತೆ ನೋಡಿಕೊಳ್ಳುತ್ತಿದ್ದರು.

ನನ್ನ ತಂದೆ ಚಹಾ ಅಂಗಡಿಯಿಂದ ತರುತ್ತಿದ್ದ ಹಾಲಿನ ಕೆನೆಯಿಂದ ತಾಯಿ ರುಚಿಕರವಾದ ತುಪ್ಪವನ್ನು ಮಾಡುತ್ತಿದ್ದರು. ಈ ತುಪ್ಪ ಕೇವಲ ನಮ್ಮ ಬಳಕೆಗೆ ಮಾತ್ರವಾಗಿರಲಿಲ್ಲ. ನಮ್ಮ ನೆರೆಹೊರೆಯಲ್ಲಿರುವ ಹಸುಗಳಿಗೂ ಅದರ ಪಾಲು ಸಿಗುತ್ತಿತ್ತು. ತಾಯಿ ಹಸುಗಳಿಗೆ ಪ್ರತಿದಿನ ರೊಟ್ಟಿ ತಿನ್ನಿಸುತ್ತಿದ್ದರು. ಒಣ ರೊಟ್ಟಿಗಳ ಮೇಲೆ ಮನೆಯಲ್ಲಿ ಮಾಡಿದ ತುಪ್ಪ ಮತ್ತು ಪ್ರೀತಿಯನ್ನು ಸುರಿದು ಅವುಗಳಿಗೆ ನೀಡುತ್ತಿದ್ದರು.

ಒಂದು ಅಗಳು ಆಹಾರವನ್ನೂ ವ್ಯರ್ಥ ಮಾಡಬಾರದು ಎಂದು ತಾಯಿ ಹೇಳುತ್ತಿದ್ದರು. ನಮ್ಮ ನೆರೆಹೊರೆಯಲ್ಲಿ ಮದುವೆಗಳು ನಡೆದಾಗ ಯಾವುದೇ ಆಹಾರವನ್ನು ವ್ಯರ್ಥ ಮಾಡಬೇಡಿ ಎಂದು ನಮಗೆ ನೆನಪಿಸುತ್ತಿದ್ದರು. ಮನೆಯಲ್ಲಿ - ನೀವು ತಿನ್ನಬಹುದಾದಷ್ಟನ್ನು ಮಾತ್ರ ಹಾಕಿಸಿಕೊಳ್ಳಿ- ಎಂಬ ಸ್ಪಷ್ಟವಾದ ನಿಯಮವಿತ್ತು

ಇಂದಿಗೂ ತಾಯಿ ತಟ್ಟೆಯಲ್ಲಿ ಎಷ್ಟು ತಿನ್ನಲು ಸಾಧ್ಯವೋ ಅಷ್ಟು ಮಾತ್ರ ಹಾಕಿಸಿಕೊಳ್ಳುತ್ತಾರೆ ಮತ್ತು ಒಂದು ತುತ್ತು ಕೂಡ ವ್ಯರ್ಥ ಮಾಡುವುದಿಲ್ಲ. ಸಮಯಕ್ಕೆ ಸರಿಯಾಗಿ ತಿನ್ನುತ್ತಾರೆ ಮತ್ತು ಆಹಾರವು ಸರಿಯಾಗಿ ಜೀರ್ಣವಾಗಲು ಅಗಿದು ತಿನ್ನುತ್ತಾರೆ.

ತಾಯಿ ಇತರರ ಸಂತೋಷದಲ್ಲಿ ತನ್ನ ಸಂತೋಷವನ್ನು ಕಂಡುಕೊಳ್ಳುತ್ತಾರೆ. ನಮ್ಮ ಮನೆ ಚಿಕ್ಕದಾಗಿರಬಹುದು, ಆದರೆ ಅವರು ತುಂಬಾ ವಿಶಾಲ ಹೃದಯದವರು. ನನ್ನ ತಂದೆಯ ಆಪ್ತ ಸ್ನೇಹಿತರೊಬ್ಬರು ಹತ್ತಿರದ ಹಳ್ಳಿಯಲ್ಲಿದ್ದರು. ಅವರ ಅಕಾಲಿಕ ಮರಣದ ನಂತರ, ನನ್ನ ತಂದೆ ತನ್ನ ಸ್ನೇಹಿತನ ಮಗ ಅಬ್ಬಾಸ್ ನನ್ನು ನಮ್ಮ ಮನೆಗೆ ಕರೆತಂದರು. ಅವನು ನಮ್ಮಲ್ಲಿಯೇ ಇದ್ದು ಓದು ಮುಗಿಸಿದ. ತಾಯಿಯು ನಮ್ಮೆಲ್ಲರಂತೆಯೇ ಅಬ್ಬಾಸ್ ಬಗ್ಗೆಯೂ ಪ್ರೀತಿ ಮತ್ತು

ಕಾಳಜಿಯನ್ನು ಹೊಂದಿದ್ದರು. ಪ್ರತಿ ವರ್ಷ ಈದ್ನಂದು ಅವನ ನೆಚ್ಚಿನ ಖಾದ್ಯಗಳನ್ನು ತಯಾರಿಸುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ನೆರೆಹೊರೆಯ ಮಕ್ಕಳು ನಮ್ಮ ಮನೆಗೆ ಬಂದು ಅಮ್ಮನ ವಿಶೇಷ ಅಡುಗೆಯನ್ನು ಸವಿಯುವುದು ಮಾಮೂಲಿಯಾಗಿತ್ತು.

ಒಬ್ಬ ಸಾಧು ನಮ್ಮ ನೆರೆಹೊರೆಗೆ ಭೇಟಿ ನೀಡಿದಾಗ, ತಾಯಿ ಅವರನ್ನು ನಮ್ಮ ಬಡಮನೆಗೆ ಊಟಕ್ಕೆ ಕರೆಯುತ್ತಿದ್ದರು. ತನ್ನ ನಿಸ್ವಾರ್ಥ ಸ್ವಭಾವಕ್ಕೆ ತಕ್ಕಂತೆ, ತನಗಾಗಿ ಏನನ್ನೂ ಕೇಳದೆ ಮಕ್ಕಳಾದ ನಮಗೆ ಆಶೀರ್ವದಿಸುವಂತೆ ಸಾಧುಗಳಲ್ಲಿ ವಿನಂತಿಸುತ್ತಿದ್ದರು. "ಇತರರ ಸಂತೋಷದಲ್ಲಿ ಸಂತೋಷ ಕಾಣುವಂತೆ ಮತ್ತು ಅವರ ದುಃಖಗಳಲ್ಲಿ ಸಹಾನುಭೂತಿ ಹೊಂದಿರುವಂತೆ, ಭಕ್ತಿ (ದೈವಿಕ ಭಕ್ತಿ) ಮತ್ತು ಸೇವಾ ಮನೋಭಾವ (ಇತರರಿಗೆ ಸೇವೆ) ಇರುವಂತೆ ನನ್ನ ಮಕ್ಕಳಿಗೆ ಆಶೀರ್ವದಿಸಿ" ಎಂದು ಸಾಧುಗಳಿಗೆ ಕೇಳಿಕೊಳ್ಳುತ್ತಿದ್ದರು.

ನನ್ನ ಮೇಲೆ ಮತ್ತು ಅವರು ನೀಡಿದ ಸಂಸ್ಕಾರಗಳ ಬಗ್ಗೆ ತಾಯಿಗೆ ಯಾವಾಗಲೂ ಅಪಾರವಾದ ವಿಶ್ವಾಸವಿದೆ. ನಾನು ಸಂಘದಲ್ಲಿ ಕೆಲಸ ಮಾಡುವಾಗ ದಶಕಗಳ ಹಿಂದಿನ ಘಟನೆಯೊಂದು ನೆನಪಾಗುತ್ತಿದೆ. ನಾನು ಸಾಂಸ್ಥಿಕ ಚಟುವಟಿಕೆಗಳಲ್ಲಿ ಬಹಳ ನಿರತನಾಗಿದ್ದೆ ಮತ್ತು ನನ್ನ ಕುಟುಂಬದೊಂದಿಗೆ ಸಂಪರ್ಕದಲ್ಲಿರಲು ಸಾಧ್ಯವಾಗಲಿಲ್ಲ. ಆ ಅವಧಿಯಲ್ಲಿ ನನ್ನ ಅಣ್ಣ ತಾಯಿಯನ್ನು ಬದರಿನಾಥ್ ಮತ್ತು ಕೇದಾರನಾಥಕ್ಕೆ ಕರೆದೊಯ್ದರು. ಬದರಿನಾಥದಲ್ಲಿ ದರ್ಶನ ಮುಗಿಸಿದ ನಂತರ ನನ್ನ ತಾಯಿ ಕೇದಾರನಾಥಕ್ಕೆ ಬರುತ್ತಾರೆ ಎಂದು ಅಲ್ಲಿನ ಸ್ಥಳೀಯರಿಗೆ ತಿಳಿಯಿತು.

ಆದರೆ, ಹವಾಮಾನವು ಹಠಾತ್ತನೆ ಹದಗೆಟ್ಟಿತು. ಕೆಲವರು ಕಂಬಳಿಗಳೊಂದಿಗೆ ಕೆಳಗಿಳಿದು ಬಂದರು. ಅವರು ನೀವು ನರೇಂದ್ರ ಮೋದಿಯವರ ತಾಯಿಯೇ ಎಂದು ರಸ್ತೆಗಳಲ್ಲಿ ಬರುತ್ತಿದ್ದ ವಯಸ್ಸಾದ ಮಹಿಳೆಯರನ್ನು ಕೇಳುತ್ತಿದ್ದರು. ಅಂತಿಮವಾಗಿ, ಅವರು ತಾಯಿಯನ್ನು ಭೇಟಿಯಾದರು ಮತ್ತು ಅವರಿಗೆ ಕಂಬಳಿ ಮತ್ತು ಚಹಾವನ್ನು ನೀಡಿದರು. ಅವರು ಕೇದಾರನಾಥದಲ್ಲಿ ತಂಗಲು ಆರಾಮದಾಯಕ ವ್ಯವಸ್ಥೆ ಮಾಡಿದರು. ಈ ಘಟನೆಯು ತಾಯಿಯ ಮೇಲೆ ಗಾಢವಾದ ಪ್ರಭಾವ ಬೀರಿತು. ನಂತರ ಆಕೆ ನನ್ನನ್ನು ಭೇಟಿಯಾದಾಗ, "ಜನರು ನಿಮ್ಮನ್ನು ಗುರುತಿಸುವಂತೆ ಕೆಲವು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೀರಿ ಎಂದು ತೋರುತ್ತದೆ." ಎಂದು ಹೇಳಿದ್ದರು.

ಇಂದು, ಹಲವು ವರ್ಷಗಳ ನಂತರ, ನಿಮ್ಮ ಮಗ ದೇಶದ ಪ್ರಧಾನಿಯಾಗಿದ್ದಾನೆ ಎಂದು ಹೆಮ್ಮೆಪಡುತ್ತೀರಾ ಎಂದು ಜನರು ಕೇಳಿದಾಗಲೆಲ್ಲಾ, ತಾಯಿ ಅತ್ಯಂತ ಗಾಢವಾದ ಪ್ರತಿಕ್ರಿಯೆಯನ್ನು ನೀಡುತ್ತಾರೆ. "ನನಗೂ ನಿಮ್ಮಂತೆಯೇ ಹೆಮ್ಮೆ ಇದೆ. ಇಲ್ಲಿ ಯಾವುದೂ ನನ್ನದಲ್ಲ. ನಾನು ದೇವರ ಯೋಜನೆಗಳಲ್ಲಿ ಕೇವಲ ಸಾಧನ ಮಾತ್ರವಾಗಿದ್ದೇನೆ." ಎಂದು ಹೇಳುತ್ತಾರೆ.

ಯಾವುದೇ ಸರ್ಕಾರಿ ಅಥವಾ ಸಾರ್ವಜನಿಕ ಕಾರ್ಯಕ್ರಮಗಳಿಗೆ ತಾಯಿ ನನ್ನೊಂದಿಗೆ ಎಂದಿಗೂ ಬರುವುದಿಲ್ಲ ಎಂಬುದನ್ನು ನೀವು ಗಮನಿಸಿರಬಹುದು. ಈ ಹಿಂದೆ

“ನನ್ನ ತಾಯಿಯ ಸರಳತೆ ಅಸಾಧಾರಣವಾದ್ದು. ಎಲ್ಲಾ ತಾಯಂದಿರಂತೆ! ನನ್ನ ತಾಯಿಯ ಬಗ್ಗೆ ನಾನು ಬರೆಯುತ್ತಿರುವಾಗ, ನಿಮ್ಮಲ್ಲಿ ಅನೇಕರು ಆಕೆಯ ಬಗ್ಗೆ ನನ್ನ ವರ್ಣನೆಯೊಂದಿಗೆ ಸಂಬಂಧ ಹೊಂದಿರುತ್ತೀರಿ ಎಂಬ ಖಾತ್ರಿ ನನಗಿದೆ. ಓದುವಾಗ, ನಿಮ್ಮ ಸ್ವಂತ ತಾಯಿಯ ಚಿತ್ರಣವೂ ಸಹ ನಿಮಗೆ ಕಾಣಬಹುದು.”

ಎರಡು ಬಾರಿ ಮಾತ್ರ ನನ್ನ ಜೊತೆಗಿದ್ದರು. ಮೊದಲನೆಯ ಬಾರಿಗೆ, ನಾನು ಏಕತಾ ಯಾತ್ರೆಯನ್ನು ಮುಗಿಸಿ ಲಾಲ್ ಚೌಕ್ನಲ್ಲಿ ರಾಷ್ಟ್ರಧ್ವಜಾರೋಹಣ ಮಾಡಿ ಶ್ರೀನಗರದಿಂದ ಹಿಂದಿರುಗಿದ ನಂತರ ಅಹಮದಾಬಾದ್ನಲ್ಲಿ ನಡೆದ ಸಾರ್ವಜನಿಕ ಸಮಾರಂಭವೊಂದರಲ್ಲಿ ಅವರು ನನ್ನ ಹಣೆಗೆ ತಿಲಕವನ್ನು ಇಟ್ಟಿದ್ದರು.

ತಾಯಿಗೆ ಅದು ಅತ್ಯಂತ ಭಾವನಾತ್ಮಕ ಕ್ಷಣವಾಗಿತ್ತು. ಏಕೆಂದರೆ ಏಕತಾ ಯಾತ್ರೆಯ ಸಮಯದಲ್ಲಿ ಫಗ್ವಾರದಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಕೆಲವು ಜನರು ಸಾವನ್ನಪ್ಪಿದ್ದರು. ಆ ಸಮಯದಲ್ಲಿ ತಾಯಿ ತುಂಬಾ ಚಿಂತಿತರಾಗಿದ್ದರು. ಆ ಸಮಯದಲ್ಲಿ ನನ್ನ ಬಗ್ಗೆ ತಿಳಿಯಲು ಇಬ್ಬರು ಕರೆ ಮಾಡಿದ್ದರು. ಒಬ್ಬರು ಅಕ್ಷರಧಾಮ ದೇವಾಲಯದ ಶ್ರದ್ಧೆ ಪ್ರಮುಖ ಸ್ವಾಮಿ ಮತ್ತು ಎರಡನೆಯವರು ಅಮ್ಮ. ತಾಯಿಯ ನೆಮ್ಮದಿ ಮುಗಿಲು ಮುಟ್ಟಿತ್ತು.

ಎರಡನೆಯ ನಿದರ್ಶನವೆಂದರೆ, ನಾನು 2001 ರಲ್ಲಿ ಗುಜರಾತಿನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದಾಗ. ಎರಡು ದಶಕಗಳ ಹಿಂದೆ ನಡೆದ ಪ್ರಮಾಣ ವಚನ ಸ್ವೀಕಾರ ಸಮಾರಂಭವು ತಾಯಿ ನನ್ನೊಂದಿಗೆ ಭಾಗವಹಿಸಿದ ಕೊನೆಯ ಸಾರ್ವಜನಿಕ ಕಾರ್ಯಕ್ರಮ. ಅಂದಿನಿಂದ, ಅವರು ಒಂದೇ ಒಂದು ಸಾರ್ವಜನಿಕ ಕಾರ್ಯಕ್ರಮಕ್ಕೆ ನನ್ನೊಂದಿಗೆ ಬಂದಿಲ್ಲ.

ನನಗೆ ಇನ್ನೊಂದು ಘಟನೆ ನೆನಪಿದೆ. ನಾನು ಗುಜರಾತ್ ಮುಖ್ಯಮಂತ್ರಿಯಾದಾಗ ನನ್ನ ಎಲ್ಲ ಶಿಕ್ಷಕರನ್ನು ಸಾರ್ವಜನಿಕವಾಗಿ ಸನ್ಮಾನಿಸಲು ಬಯಸಿದ್ದೆ. ನನ್ನ ಜೀವನದಲ್ಲಿ ತಾಯಿ ದೊಡ್ಡ ಗುರು ಎಂದು ನಾನು ಭಾವಿಸಿದೆ ಮತ್ತು ನಾನು ಅವರನ್ನು ಗೌರವಿಸಬೇಕು ಎಂದು ತೀರ್ಮಾನಿಸಿದೆ. ನಮ್ಮ ಧರ್ಮಗ್ರಂಥಗಳು ಕೂಡ ‘ನಾಸ್ತಿ ಮಾತ್ರಮೊ ಗುರುಃ- ತಾಯಿಗಿಂತ ದೊಡ್ಡ ಗುರುವಿಲ್ಲ ಎಂದು ಹೇಳುತ್ತವೆ. ಕಾರ್ಯಕ್ರಮಕ್ಕೆ ಬರುವಂತೆ ನಾನು ತಾಯಿಯನ್ನು ವಿನಂತಿಸಿದೆ, ಆದರೆ ಅವರು ನಿರಾಕರಿಸಿದರು. “ನೋಡಿ, ನಾನು ಸಾಮಾನ್ಯ ವ್ಯಕ್ತಿ. ನಾನು ನಿಮಗೆ ಜನ್ಮ ನೀಡಿರಬಹುದು, ಆದರೆ ನೀವು ಸರ್ವಶಕ್ತನಿಂದ ಕಲಿಸಲ್ಪಟ್ಟಿರುವುದು ಮತ್ತು ಬೆಳೆಸಲ್ಪಟ್ಟಿರುವಿರಿ” ಎಂದು ಆಕೆ ಹೇಳಿದರು. ಆ ದಿನ ನನ್ನ ತಾಯಿಯನ್ನುಳಿದು ಎಲ್ಲಾ ಶಿಕ್ಷಕರನ್ನು ಗೌರವಿಸಲಾಯಿತು.

ಇದೆಲ್ಲಕ್ಕಿಂತ ಹೆಚ್ಚಾಗಿ, ಕಾರ್ಯಕ್ರಮಕ್ಕೂ ಮೊದಲು, ನಮ್ಮ ಸ್ಥಳೀಯ ಶಿಕ್ಷಕರಾದ ಜೇತಾಭಾಯಿ ಜೋಶಿ ಅವರ ಕುಟುಂಬದಿಂದ ಯಾರಾದರೂ ಕಾರ್ಯಕ್ರಮಕ್ಕೆ ಬರುತ್ತಾರೆಯೇ ಎಂದು ಅವರು ವಿಚಾರಿಸಿದರು. ಜೋಶಿಯವರು ನನ್ನ ಆರಂಭಿಕ ಕಲಿಕೆಯನ್ನು ಮೇಲ್ವಿಚಾರಣೆ ಮಾಡಿದವರು ಮತ್ತು ನನಗೆ ವರ್ಣಮಾಲೆಯನ್ನು ಕಲಿಸಿದವರು. ತಾಯಿಯು ಅವರನ್ನು ನೆನಪಿಸಿಕೊಂಡು ವಿಚಾರಿಸಿದಾಗ ಅವರು ತೀರಿಹೋಗಿರುವ ವಿಷಯ ತಿಳಿಯಿತು. ಅವರು ಕಾರ್ಯಕ್ರಮಕ್ಕೆ ಬರದಿದ್ದರೂ, ನಾನು ಜೇತಾಭಾಯಿ ಜೋಶಿ ಅವರ ಕುಟುಂಬದ ಯಾರನ್ನಾದರೂ ಕರೆದಿದ್ದೇನೆಯೇ ಎಂಬುದನ್ನು ಖಚಿತಪಡಿಸಿಕೊಂಡರು.

ಔಪಚಾರಿಕವಾಗಿ ಶಿಕ್ಷಣ ಪಡೆಯದೆ ಕಲಿಯಲು ಸಾಧ್ಯ ಎಂದು ತಾಯಿ ನನಗೆ ಮನವರಿಕೆ ಮಾಡಿಕೊಟ್ಟರು. ಅವರ ಆಲೋಚನಾ ಕ್ರಮ ಮತ್ತು ದೂರಗಾಮಿ ಚಿಂತನೆಯು ಯಾವಾಗಲೂ ನನ್ನಲ್ಲಿ ಆಶ್ಚರ್ಯ ಹುಟ್ಟಿಸುತ್ತದೆ.

ತಾಯಿಯು ಯಾವಾಗಲೂ ನಾಗರಿಕಳಾಗಿ ತನ್ನ ಕರ್ತವ್ಯಗಳ ಬಗ್ಗೆ ಬಹಳ ಜಾಗೃತರಾಗಿರುತ್ತಾರೆ. ಚುನಾವಣೆಗಳು ಪ್ರಾರಂಭವಾದಾಗಿನಿಂದ, ಅವರು ಪಂಚಾಯತ್ನಿಂದ ಸಂಸತ್ತಿನವರೆಗೆ ಪ್ರತಿ ಚುನಾವಣೆಯಲ್ಲೂ ಮತ ಚಲಾಯಿಸಿದ್ದಾರೆ. ಕೆಲ ದಿನಗಳ ಹಿಂದೆ ಗಾಂಧಿನಗರ ಮುನ್ಸಿಪಲ್ ಕಾರ್ಪೊರೇಷನ್ ಚುನಾವಣೆಯಲ್ಲಿ ಮತ ಚಲಾಯಿಸಿದರು.

ಸಾರ್ವಜನಿಕರು ಮತ್ತು ದೇವರ ಆಶೀರ್ವಾದ ಇರುವುದರಿಂದ ನನಗೆ ಏನೂ ಆಗುವುದಿಲ್ಲ ಎಂದು ತಾಯಿ ಆಗಾಗ್ಗೆ ಹೇಳುತ್ತಿರುತ್ತಾರೆ. ಜನರ ಸೇವೆಯನ್ನು ಮುಂದುವರಿಸಲು ಬಯಸಿದರೆ ಆರೋಗ್ಯಕರ

ಜೀವನಶೈಲಿಯನ್ನು ನಡೆಸುವುದು ಮತ್ತು ವೈಯಕ್ತಿಕ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳುವುದು ಅವಶ್ಯಕ ಎಂದು ಅವರು ನನಗೆ ನೆನಪಿಸುತ್ತಿರುತ್ತಾರೆ.

ಮೊದಲು, ತಾಯಿ ಚಾತುರ್ಮಾಸ ಆಚರಣೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ನವರಾತ್ರಿಯ ಸಮಯದಲ್ಲಿ ನನ್ನ ಸ್ವಂತ ಅಭ್ಯಾಸಗಳು ಅವರಿಗೆ ತಿಳಿದಿವೆ. ಈಗ, ನಾನು ಬಹಳ ಸಮಯದಿಂದ ಕಟ್ಟುನಿಟ್ಟಾಗಿ ಪಾಲಿಸುತ್ತಿರುವ ಈ ವೈಯಕ್ತಿಕ ನಿಯಮಗಳನ್ನು ಸಡಿಲಿಸಬೇಕೆಂದು ನನಗೆ ಹೇಳಲು ಪ್ರಾರಂಭಿಸಿದ್ದಾರೆ.

ಜೀವನದಲ್ಲಿ ಅಮ್ಮ ಯಾವುದರ ಬಗ್ಗೆಯೂ ದೂರುವುದನ್ನು ನಾನು ಕೇಳಿಲ್ಲ. ಅವರು ಯಾರ ಬಗ್ಗೆಯೂ ದೂರುವುದಿಲ್ಲ ಅಥವಾ ಯಾರಿಂದಲೂ ಯಾವುದೇ ನಿರೀಕ್ಷೆಗಳನ್ನು ಇಟ್ಟುಕೊಳ್ಳುವುದಿಲ್ಲ.

ಇಂದಿಗೂ ತಾಯಿಯ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ. ಆಕೆ ಚಿನ್ನದ ಆಭರಣಗಳನ್ನು ಧರಿಸಿರುವುದನ್ನು ನಾನು ನೋಡಿಲ್ಲ ಮತ್ತು ಅವರಿಗೆ ಅದರಲ್ಲಿ ಆಸಕ್ತಿಯೂ ಇಲ್ಲ. ಮೊದಲಿನಂತೆಯೇ, ಅವರು ತನ್ನ ಸಣ್ಣ ಕೋಣೆಯಲ್ಲಿ ಅತ್ಯಂತ ಸರಳವಾದ ಜೀವನವನ್ನು ಮುಂದುವರಿಸಿದ್ದಾರೆ.

ತಾಯಿಗೆ ದೇವರಲ್ಲಿ ಅಪಾರವಾದ ನಂಬಿಕೆ ಇದೆ, ಆದರೆ ಅದೇ ಸಮಯದಲ್ಲಿ, ಅವರು ಮೂಢನಂಬಿಕೆಗಳಿಂದ ದೂರವಿದ್ದಾರೆ ಮತ್ತು ಅದೇ ಗುಣಗಳನ್ನು ನಮ್ಮಲ್ಲಿ ತುಂಬಿದ್ದಾರೆ. ಅವರು ಸಾಂಪ್ರದಾಯಿಕವಾಗಿ ಕಬೀರಪಂಥಿಯಾಗಿದ್ದಾರೆ ಮತ್ತು ಅವರ ದೈನಂದಿನ ಪ್ರಾರ್ಥನೆಗಳಲ್ಲಿ ಆ ಪದ್ಧತಿಗಳನ್ನು ಅನುಸರಿಸುತ್ತಿದ್ದಾರೆ. ಅವರು ತಮ್ಮ ಮಣಿಮಾಲೆಯೊಂದಿಗೆ ಜಪ ಮಾಡುತ್ತಾ ಸಾಕಷ್ಟು ಸಮಯವನ್ನು ಕಳೆಯುತ್ತಾರೆ. ದಿನನಿತ್ಯದ ಪೂಜೆ ಮತ್ತು ಜಪದಲ್ಲಿ ಮಗ್ನರಾಗುವ ಅವರು ಆಗಾಗ್ಗೆ ನಿದ್ರೆಯನ್ನು ಸಹ ತ್ಯಜಿಸುತ್ತಾರೆ. ಕೆಲವೊಮ್ಮೆ, ನನ್ನ ಕುಟುಂಬ ಸದಸ್ಯರು ಆಕೆಯು ನಿದ್ರೆ ಮಾಡಲಿ ಎಂದು ಪ್ರಾರ್ಥನೆಯ ಮಣಿಮಾಲೆಯನ್ನು ಮರೆಮಾಚಿ ಇಡುತ್ತಾರೆ.

ವಯಸ್ಸಾಗಿದ್ದರೂ, ತಾಯಿಗೆ ಉತ್ತಮ ಜ್ಞಾಪಕ ಶಕ್ತಿ ಇದೆ. ಅವರು ದಶಕಗಳ ಹಿಂದಿನ ಘಟನೆಗಳನ್ನು ಸ್ಪಷ್ಟವಾಗಿ ನೆನಪಿಸಿಕೊಳ್ಳುತ್ತಾರೆ. ಕೆಲವು ಸಂಬಂಧಿಕರು ಅವರನ್ನು ಭೇಟಿ ಮಾಡಿದಾಗ, ಅವರು ತಕ್ಷಣವೇ ಅವರ ಅಜ್ಜಿಯರ ಹೆಸರನ್ನು ನೆನಪಿಸಿಕೊಳ್ಳುತ್ತಾರೆ ಮತ್ತು ಅದಕ್ಕೆ ಅನುಗುಣವಾಗಿ ಅವರನ್ನು ಗುರುತಿಸುತ್ತಾರೆ.

ಅವರು ಪ್ರಪಂಚದ ಬೆಳವಣಿಗೆಗಳ ಬಗ್ಗೆ ತಿಳಿದಿರುತ್ತಾರೆ. ಇತ್ತೀಚಿಗೆ ನಾನು ಅವರನ್ನು ದಿನ ಎಷ್ಟು ಹೊತ್ತು ಟಿವಿ ನೋಡುತ್ತೀಯಾ ಎಂದು ಕೇಳಿದೆ. ಟಿವಿಯಲ್ಲಿ ಹೆಚ್ಚಿನವರು ಪರಸ್ಪರ ಜಗಳವಾಡುತ್ತಿರುತ್ತಾರೆ, ಶಾಂತವಾಗಿ ಸುದ್ದಿಗಳನ್ನು ಓದುವ ಮತ್ತು ಎಲ್ಲವನ್ನೂ ವಿವರಿಸುವವರನ್ನು ಮಾತ್ರ ನೋಡುತ್ತೇನೆ ಎಂದು ಅವರು ಉತ್ತರಿಸಿದರು. ತಾಯಿಯು ತುಂಬಾ ಜಾಡನ್ನು ಹಿಡಿಯುತ್ತಾರೆ ಎಂದು ನನಗೆ ಸಖೇದಾಶ್ಚರ್ಯವಾಯಿತು.

ಅಮ್ಮನ ತೀಕ್ಷ್ಣವಾದ ನೆನಪಿನ ಶಕ್ತಿಗೆ ಸಂಬಂಧಿಸಿದ ಇನ್ನೊಂದು ಘಟನೆಯನ್ನು ನಾನು ಹೇಳುತ್ತೇನೆ. 2017ರಲ್ಲಿ

ನಾನು ಆಕೆಯೊಂದಿಗೆ ದೂರವಾಣಿಯಲ್ಲಿ ಮಾತನಾಡಿದಾಗಲೆಲ್ಲಾ, ಆಕೆ ಹೇಳುತ್ತಾರೆ "ಯಾರ ವಿಚಾರದಲ್ಲೂ ಯಾವುದೇ ತಪ್ಪು ಅಥವಾ ಕೆಟ್ಟದ್ದನ್ನು ಮಾಡಬೇಡ ಮತ್ತು ಬಡವರಿಗಾಗಿ ಕೆಲಸ ಮಾಡುತ್ತಲೇ ಇರು."

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಕಾಶಿಯಲ್ಲಿ ಪ್ರಚಾರ ಮಾಡಿದ ನಂತರ ನಾನು ಅಹಮದಾಬಾದ್ಗೆ ಹೋಗಿದ್ದೆ. ನಾನು ಅವರಿಗೆ ಸ್ವಲ್ಪ ಪ್ರಸಾದವನ್ನು ತೆಗೆದುಕೊಂಡು ಹೋಗಿದ್ದೆ. ನಾನು ಅಮ್ಮನನ್ನು ಭೇಟಿಯಾದಾಗ, ಅವರು ಕಾಶಿ ವಿಶ್ವನಾಥ ಮಹಾದೇವನಿಗೆ ಪೂಜೆ ಸಲ್ಲಿಸಿದೆಯಾ ಎಂದು ಕೇಳಿದರು. ತಾಯಿ ಇನ್ನೂ ಕಾಶಿ ವಿಶ್ವನಾಥ ಮಹಾದೇವ ಎಂದು ಪೂರ್ಣ ಹೆಸರನ್ನು ಬಳಸುತ್ತಾರೆ. ನಂತರ ಮಾತುಕತೆಯ ಸಮಯದಲ್ಲಿ, ಯಾರದೋ ಮನೆಯ ಆವರಣದಲ್ಲಿ ದೇವಸ್ಥಾನವಿದೆ ಎಂಬಂತೆ ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ಹೋಗುವ ಮಾರ್ಗಗಳು ಇನ್ನೂ ಹಾಗೆಯೇ ಇವೆಯೇ ಎಂದು ಅವರು ನನ್ನನ್ನು ಕೇಳಿದರು. ನನಗೆ ಆಶ್ಚರ್ಯವಾಯಿತು ಮತ್ತು ನೀನು ದೇವಸ್ಥಾನಕ್ಕೆ ಯಾವಾಗ ಭೇಟಿ ನೀಡಿದ್ದು ಎಂದು ಕೇಳಿದೆ. ಬಹಳ ವರ್ಷಗಳ ಹಿಂದೆ ಕಾಶಿಗೆ ಹೋಗಿದ್ದೆ, ಆದರೆ ಎಲ್ಲವೂ ನೆನಪಿದೆ ಎಂದು ಅವರು ಉತ್ತರಿಸಿದರು.

ತಾಯಿ ಅತ್ಯಂತ ಸೂಕ್ಷ್ಮ ಮತ್ತು ಕಾಳಜಿಯುಳ್ಳವರು ಮಾತ್ರವಲ್ಲದೆ ಸಾಕಷ್ಟು ಪ್ರತಿಭಾವಂತರು. ಚಿಕ್ಕ ಮಕ್ಕಳಿಗೆ ಚಿಕಿತ್ಸೆ ನೀಡಲು ಅಸಂಖ್ಯಾತ ಮನೆಮದ್ದುಗಳು ಅವರಿಗೆ ಗೊತ್ತು. ನಮ್ಮ ವಡ್ನಾಗರದ ಮನೆಯಲ್ಲಿ, ಪ್ರತಿದಿನ ಬೆಳಿಗ್ಗೆ, ಪೋಷಕರು ತಮ್ಮ ಮಕ್ಕಳ ಪರೀಕ್ಷೆ ಮತ್ತು ಚಿಕಿತ್ಸೆಗಾಗಿ ಸರತಿ ಸಾಲಿನಲ್ಲಿ ನಿಲ್ಲುತ್ತಿದ್ದರು.

ಚಿಕಿತ್ಸೆಗಾಗಿ ಆಕೆಗೆ ಆಗಾಗ್ಗೆ ನುಣ್ಣನೆಯ ಪುಡಿಯ ಅಗತ್ಯವಿರುತ್ತಿತ್ತು. ಈ ಪುಡಿಯನ್ನು ಸಂಗ್ರಹಿಸುವುದು ಮಕ್ಕಳೆಲ್ಲರ ಸಾಮೂಹಿಕ ಜವಾಬ್ದಾರಿಯಾಗಿತ್ತು. ತಾಯಿ ನಮಗೆ ಒಲೆಯಿಂದ ಬೂದಿ, ಒಂದು ಬಟ್ಟಲು ಮತ್ತು ಒಳ್ಳೆಯ ಬಟ್ಟೆಯನ್ನು ಕೊಡುತ್ತಿದ್ದರು. ಬಟ್ಟಲಿಗೆ ಬಟ್ಟೆ ಕಟ್ಟಿ ಅದರ ಮೇಲೆ ಒಂದಿಷ್ಟು ಬೂದಿ ಹಾಕುತ್ತಿದ್ದೆವು. ನಂತರ ನಾವು ನಿಧಾನವಾಗಿ ಬೂದಿಯನ್ನು ಬಟ್ಟೆಯ ಮೇಲೆ ಉಜ್ಜುತ್ತಿದ್ದೆವು, ಇದರಿಂದ ನುಣ್ಣನೆಯ ಕಣಗಳು ಮಾತ್ರ ಬಟ್ಟಲಿನಲ್ಲಿ ಸಂಗ್ರಹವಾಗುತ್ತಿದ್ದವು. "ನಿಮ್ಮ ಕೆಲಸವನ್ನು ಚೆನ್ನಾಗಿ ಮಾಡಿ. ಬೂದಿಯ ದೊಡ್ಡ ಕಣಗಳಿಂದ ಮಕ್ಕಳಿಗೆ ತೊಂದರೆಯಾಗಬಾರದು" ಎಂದು ತಾಯಿ ನಮಗೆ ಹೇಳುತ್ತಿದ್ದರು.

ತಾಯಿಯ ಸಹಜ ವಾತ್ಸಲ್ಯ ಮತ್ತು ಸಮಯಪ್ರಜ್ಞೆಯನ್ನು ಪ್ರತಿಬಿಂಬಿಸುವ ಇನ್ನೊಂದು ನಿದರ್ಶನವನ್ನು ನಾನು ನೆನಪಿಸಿಕೊಳ್ಳಬಲ್ಲೆ. ಒಮ್ಮೆ ನಮ್ಮ ಮನೆಯವರು ನರ್ಮದಾ ಘಾಟ್ಗೆ ನನ್ನ ತಂದೆ ಮಾಡಲು ಬಯಸಿದ ಪೂಜೆಗಾಗಿ ಹೋಗಿದ್ದೆವು. ಸುಡುಬಿಸಿಲನ್ನು ತಪ್ಪಿಸಲು, ನಾವು ಮೂರು ಗಂಟೆಗಳ ಪ್ರಯಾಣಕ್ಕಾಗಿ ಮುಂಜಾನೆಯೇ ಹೊರಟೆವು. ಬಸ್ಸಿನಿಂದ ಇಳಿದ ನಂತರ ಇನ್ನೂ ಸ್ವಲ್ಪ ದೂರ ಕಾಲ್ನಡಿಗೆಯಲ್ಲಿ ಹೋಗಬೇಕಿತ್ತು. ವಿಪರೀತ ಸೆಕೆಯಾಗಿದ್ದರಿಂದ ನದಿಯ ದಡದಲ್ಲಿ ನೀರಿನಲ್ಲಿ ನಡೆಯತೊಡಗಿದೆವು. ನೀರಿನಲ್ಲಿ ನಡೆಯುವುದು ಸುಲಭವಲ್ಲ, ಬಹಳ ಬೇಗ ನಾವು ದಣಿದೆವು ಮತ್ತು ಹಸಿವಾಗತೊಡಗಿತು. ತಾಯಿ ತಕ್ಷಣ ನಮ್ಮ ಅಸ್ವಸ್ಥತೆಯನ್ನು ಗಮನಿಸಿದರು ಮತ್ತು ನನ್ನ ತಂದೆಯನ್ನು ನಿಲ್ಲಿಸಿ ಸ್ವಲ್ಪ ವಿಶ್ರಾಂತಿ ಪಡೆಯಲು ಹೇಳಿದರು. ಹತ್ತಿರ ಎಲ್ಲಿಂದಾದರೂ ಬೆಲ್ಲ ಖರೀದಿಸಿ ತರುವಂತೆ ಹೇಳಿದರು. ತಂದೆಯವರು ಓಡಿ ಹೋಗಿ

ಬೆಲ್ಲ ತಂದರು. ಬೆಲ್ಲ ಮತ್ತು ನೀರು ನಮಗೆ ತ್ವರಿತ ಶಕ್ತಿಯನ್ನು ನೀಡಿತು ಮತ್ತು ನಾವು ಮತ್ತೆ ನಡೆಯಲು ಪ್ರಾರಂಭಿಸಿದೆವು. ಆ ನಿತ್ರಾಣಗೊಳಿಸುವ ಸೆಕೆಯಲ್ಲಿ ಪೂಜೆಗೆ ಹೋಗುವಾಗ, ತಾಯಿಯ ಜಾಗರೂಕತೆ ಮತ್ತು ನನ್ನ ತಂದೆ ವೇಗವಾಗಿ ಬೆಲ್ಲವನ್ನು ತಂದಿದ್ದು, ನನಗೆ ಆ ಕ್ಷಣಗಳು ಇನ್ನೂ ಸ್ಪಷ್ಟವಾಗಿ ನೆನಪಿವೆ.

ಬಾಲ್ಯದಿಂದಲೂ, ತಾಯಿ ಇತರರ ಆಯ್ಕೆಗಳನ್ನು ಗೌರವಿಸುವುದು ಮಾತ್ರವಲ್ಲದೆ ತನ್ನ ಆದ್ಯತೆಗಳನ್ನು ಇತರರ ಮೇಲೆ ಹೇರುವುದರಿಂದ ದೂರವಿರುವುದನ್ನು ನಾನು ಗಮನಿಸಿದ್ದೇನೆ. ತಾಯಿಯು ವಿಶೇಷವಾಗಿ ನನ್ನ ಸ್ವಂತ ವಿಷಯದಲ್ಲಿ, ನನ್ನ ನಿರ್ಧಾರಗಳನ್ನು ಗೌರವಿಸಿದರು. ಯಾವುದೇ ಅಡೆತಡೆಗಳನ್ನು ಸೃಷ್ಟಿಸಲಿಲ್ಲ ಮತ್ತು ನನ್ನನ್ನು ಪ್ರೋತ್ಸಾಹಿಸಿದರು. ಬಾಲ್ಯದಿಂದಲೂ ನನ್ನೊಳಗೆ ವಿಭಿನ್ನ ಮನಸ್ಥಿತಿ ಬೆಳೆಯುತ್ತಿದೆ ಎಂದು ಅವರು ಭಾವಿಸಿದ್ದಳು. ನನ್ನ ಸಹೋದರ ಸಹೋದರಿಯರಿಗೆ ಹೋಲಿಸಿದರೆ ನಾನು ಸ್ವಲ್ಪ ಭಿನ್ನವಾಗಿರುತ್ತಿದ್ದೆ.

ನನ್ನ ವಿಭಿನ್ನ ಅಭ್ಯಾಸಗಳು ಮತ್ತು ಅಸಾಮಾನ್ಯ ಪ್ರಯೋಗಗಳಿಗೆ ಬೇಕಾದ ವಿಶೇಷ ಅಗತ್ಯಗಳನ್ನು ಸರಿಹೊಂದಿಸಲು ತಾಯಿಯು ಆಗಾಗ್ಗೆ ವಿಶೇಷ ಪ್ರಯತ್ನಗಳನ್ನು ಮಾಡಬೇಕಾಗಿತ್ತು. ಆದಾಗ್ಯೂ, ಅವರು ಅದನ್ನು ಎಂದಿಗೂ ಹೊರೆ ಎಂದು ಪರಿಗಣಿಸಲಿಲ್ಲ ಮತ್ತು ಯಾವುದೇ ಕಿರಿಕಿರಿಯನ್ನು ತೋರಲಿಲ್ಲ. ಉದಾಹರಣೆಗೆ, ನಾನು ಸಾಮಾನ್ಯವಾಗಿ ಕೆಲವು ತಿಂಗಳುಗಳವರೆಗೆ ಉಪ್ಪನ್ನು ತ್ಯಜಿಸುತ್ತಿದ್ದೆ ಅಥವಾ ಕೆಲವು ವಾರಗಳವರೆಗೆ ಯಾವುದೇ ಧಾನ್ಯಗಳನ್ನು ಸೇವಿಸುವುದನ್ನು ನಿಲ್ಲಿಸಿ, ಕೇವಲ ಹಾಲು ಕುಡಿಯುತ್ತಿದ್ದೆ. ಕೆಲವೊಮ್ಮೆ, ನಾನು ಆರು ತಿಂಗಳವರೆಗೆ ಸಿಹಿತಿಂಡಿಗಳನ್ನು ತಿನ್ನುತ್ತಿರಲಿಲ್ಲ. ಚಳಿಗಾಲದಲ್ಲಿ ಬಯಲಿನಲ್ಲಿ ಮಲಗುತ್ತಿದ್ದೆ ಮತ್ತು ಮಡಕೆಯ ತಣ್ಣೀರಿನಿಂದ ಸ್ನಾನ ಮಾಡುತ್ತಿದ್ದೆ. ನಾನು ನನ್ನನ್ನು ಪರೀಕ್ಷಿಸಿಕೊಳ್ಳುತ್ತಿದ್ದೇನೆ ಎಂದು ತಾಯಿಗೆ ತಿಳಿದಿತ್ತು ಮತ್ತು ಯಾವುದಕ್ಕೂ ಆಕ್ಷೇಪಿಸಲಿಲ್ಲ. ಅವರು "ಪರವಾಗಿಲ್ಲ, ನಿನ್ನ ಇಷ್ಟದಂತೆ ಮಾಡು" ಎಂದು ಹೇಳುತ್ತಿದ್ದರು.

ನಾನು ವಿಭಿನ್ನ ದಾರಿಯಲ್ಲಿ ಹೋಗುತ್ತಿದ್ದೇನೆ ಎಂದು ಅಮ್ಮ ಗ್ರಹಿಸಿದ್ದರು. ಒಮ್ಮೆ ನಮ್ಮ ಮನೆಯ ಸಮೀಪದಲ್ಲಿರುವ ಗಿರಿ ಮಹಾದೇವ ದೇವಸ್ಥಾನಕ್ಕೆ ಒಬ್ಬ ಮಹಾತ್ಮರು ಬಂದಿದ್ದರು. ನಾನು ಬಹಳ ಭಕ್ತಿಯಿಂದ ಅವರ ಸೇವೆ ಮಾಡಲು ಪ್ರಾರಂಭಿಸಿದೆ. ಆ ಸಮಯದಲ್ಲಿ, ತಾಯಿಯು ತನ್ನ ಸಹೋದರಿಯ ವಿವಾಹದ ಬಗ್ಗೆ ತುಂಬಾ ಉತ್ಸುಕರಾಗಿದ್ದರು, ವಿಶೇಷವಾಗಿ ಅದು ಆಕೆಗೆ ತನ್ನ ಸಹೋದರನ ಮನೆಗೆ ಹೋಗುವ ಅವಕಾಶವಾಗಿತ್ತು. ಮನೆಯವರೆಲ್ಲ ಸೇರಿ ಮದುವೆ ತಯಾರಿಯಲ್ಲಿ ತೊಡಗಿದ್ದಾಗ ನನಗೆ ಬರಲು ಇಷ್ಟವಿಲ್ಲ ಎಂದು ಆಕೆಗೆ ಹೇಳಿದೆ. ತಾಯಿಯು ಕಾರಣವನ್ನು ಕೇಳಿದರು, ನಾನು ಮಹಾತ್ಮರಿಗೆ ಮಾಡುತ್ತಿರುವ ನನ್ನ ಸೇವೆಯ ಬಗ್ಗೆ ವಿವರಿಸಿದೆ.

ಸ್ವಾಭಾವಿಕವಾಗಿ, ನಾನು ಅವಳ ಸಹೋದರಿಯ ಮದುವೆಗೆ ಬರುತ್ತಿಲ್ಲ ಎಂದು ತಾಯಿ ನಿರಾಶರಾದರು. ಆದರೆ ಅವರು ನನ್ನ ನಿರ್ಧಾರವನ್ನು ಗೌರವಿಸಿದರು. "ಪರವಾಗಿಲ್ಲ, ನಿನ್ನ ಇಚ್ಛೆಯಂತೆ ಮಾಡು" ಎಂದು ಅವರು ಹೇಳಿದರು. ಆದರೆ, ಮನೆಯಲ್ಲಿ ನಾಣು ಒಬ್ಬಂಟಿಯಾಗಿ ಹೇಗಿರುತ್ತಾನೆ ಎಂದು ಅಮ್ಮ

> **"ನಾನು ಜನರ ಸೇವೆಯನ್ನು ಮುಂದುವರಿಸಲು ಬಯಸುವುದಾದರೆ ಆರೋಗ್ಯಕರ ಜೀವನಶೈಲಿಯಲ್ಲಿ ಸಾಗುವುದು ಮತ್ತು ವೈಯಕ್ತಿಕ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳುವುದು ಅಗತ್ಯ ಎಂಬುದನ್ನು ಆಕೆ ನನಗೆ ನೆನಪಿಸುತ್ತಾರೆ."**

ಚಿಂತಿಸುತ್ತಿದ್ದಳು. ಅವರು ಹೊರಡುವ ಮೊದಲು ನನಗೆ ಕೆಲವು ದಿನಗಳಿಗಾಗುವಷ್ಟು ಆಹಾರ ಮತ್ತು ತಿಂಡಿಗಳನ್ನು ಮಾಡಿಟ್ಟು ಹೋದರು!

ನಾನು ಮನೆ ಬಿಟ್ಟು ಹೊರಡಲು ನಿರ್ಧರಿಸಿದಾಗ, ನಾನು ಅವರಿಗೆ ಹೇಳುವ ಮೊದಲೇ ನನ್ನ ನಿರ್ಧಾರವನ್ನು ತಾಯಿ ಗ್ರಹಿಸಿದ್ದರು. ನಾನು ಹೊರಗೆ ಹೋಗಿ ಜಗತ್ತನ್ನು ಅರ್ಥಮಾಡಿಕೊಳ್ಳಲು ಬಯಸುತ್ತೇನೆ ಎಂದು ನಾನು ಆಗಾಗ್ಗೆ ನನ್ನ ಹೆತ್ತವರಿಗೆ ಹೇಳುತ್ತಿದ್ದೆ. ನಾನು ಅವರಿಗೆ ಸ್ವಾಮಿ ವಿವೇಕಾನಂದರ ಬಗ್ಗೆ ಹೇಳುತ್ತಿದ್ದೆ ಮತ್ತು ನಾನು ರಾಮಕೃಷ್ಣ ಮಿಷನ್ ಮಠಕ್ಕೆ ಭೇಟಿ ನೀಡಬೇಕು ಎಂದು ಹೇಳುತ್ತಿದ್ದೆ. ಇದು ಹಲವು ದಿನಗಳ ಕಾಲ ನಡೆದಿತ್ತು.

ಅಂತಿಮವಾಗಿ, ನಾನು ಮನೆ ಬಿಟ್ಟು ಹೊರಡುವ ನನ್ನ ಆಸೆಯನ್ನು ಬಿಚ್ಚಿಟ್ಟೆ ಮತ್ತು ಅವರ ಆಶೀರ್ವಾದವನ್ನು ಕೇಳಿದೆ. ನನ್ನ ತಂದೆ ತುಂಬಾ ನಿರಾಶೆಗೊಂಡರು ಮತ್ತು ಕಿರಿಕಿರಿಯಿಂದ "ನಿನ್ನಿಷ್ಟ" ಎಂದರು. ಅವರ ಆಶೀರ್ವಾದವಿಲ್ಲದೆ ನಾನು ಮನೆ ಬಿಟ್ಟು ಹೋಗುವುದಿಲ್ಲ ಎಂದು ಹೇಳಿದೆ. ಆದರೆ, ಅಮ್ಮ ನನ್ನ ಆಸೆಗಳನ್ನು ಅರ್ಥಮಾಡಿಕೊಂಡು, "ನಿನ್ನ ಮನಸ್ಸು ಹೇಳಿದಂತೆ ಮಾಡು"ಎಂದು ಆಶೀರ್ವದಿಸಿದರು, ನನ್ನ ತಂದೆಯನ್ನು ಸಮಾಧಾನಪಡಿಸಲು, ಅವರು ನನ್ನ ಜಾತಕವನ್ನು ಜ್ಯೋತಿಷಿಗೆ ತೋರಿಸಲು ಕೇಳಿದರು. ನನ್ನ ತಂದೆ ಜ್ಯೋತಿಷ್ಯ ತಿಳಿದ ಸಂಬಂಧಿಕರ ಬಳಿ ಹೋದರು. ನನ್ನ ಜಾತಕವನ್ನು ಅಧ್ಯಯನ ಮಾಡಿದ ನಂತರ, "ಅವನ ಹಾದಿ ವಿಭಿನ್ನವಾಗಿದೆ. ದೇವರು ಅವನಿಗಾಗಿ ಆರಿಸಿರುವ ಮಾರ್ಗದಲ್ಲಿ ಮಾತ್ರ ಅವನು ಹೋಗುತ್ತಾನೆ." ಎಂದು ಅವರು ಹೇಳಿದರು.

ಕೆಲವು ಗಂಟೆಗಳ ನಂತರ, ನಾನು ಮನೆಯಿಂದ ಹೊರಟೆ. ಅಷ್ಟೊತ್ತಿಗಾಗಲೇ ನನ್ನ ತಂದೆ ಕೂಡ ನನ್ನ ನಿರ್ಧಾರವನ್ನು ಒಪ್ಪಿ ಆಶೀರ್ವಾದ ಮಾಡಿದ್ದರು. ಹೊರಡುವ ಮೊದಲು, ಅಮ್ಮ ನನಗೆ ಮೊಸರು ಮತ್ತು ಬೆಲ್ಲವನ್ನು ಉಣಿಸಿದರು, ಒಂದು ಮಂಗಳಕರ ಹೊಸ ಆರಂಭಕ್ಕಾಗಿ. ಇನ್ನು ಮುಂದೆ ನನ್ನ ಜೀವನವು ತುಂಬಾ ವಿಭಿನ್ನವಾಗಿರುತ್ತದೆ ಎಂದು ಅವರು ತಿಳಿದಿದ್ದರು. ತಾಯಂದಿರು ತಮ್ಮ ಭಾವನೆಗಳನ್ನು ನಿಯಂತ್ರಿಸುವಲ್ಲಿ ಅತ್ಯಂತ ಪ್ರವೀಣರಾಗಿರುತ್ತಾರೆ. ಆದರೆ ಅವರ ಮಗು ಮನೆ ಬಿಟ್ಟು ಹೊರಟಾಗ ಅವರಿಗೆ ಕಷ್ಟವಾಗುತ್ತದೆ. ತಾಯಿ ಕಣ್ಣೀರು ಹಾಕಿದರು. ಆದರೆ ನನ್ನ ಭವಿಷ್ಯಕ್ಕಾಗಿ ಅವರ ಅಪಾರ ಆಶೀರ್ವಾದವಿತ್ತು.

ಸಾಧುಗಳ ಬಳಿ ತನಗಾಗಿ ಏನನ್ನೂ ಕೇಳದೆ, ಹೆಚ್ಚಾಗಿ ಮಕ್ಕಳಾದ ನಮ್ಮನ್ನು ಆಶೀರ್ವದಿಸುವಂತೆ ಅವರು ವಿನಂತಿಸುತ್ತಿದ್ದರು. "ನನ್ನ ಮಕ್ಕಳು ಇತರರ ಸಂತೋಷದಲ್ಲಿ ಸಂತಸಕಾಣಲು ಮತ್ತು ಅವರ ದುಃಖಗಳಲ್ಲಿ ಸಹಾನುಭೂತಿ ಹೊಂದುವಂತೆ ಆಶೀರ್ವದಿಸಿ. ಅವರಿಗೆ ಭಕ್ತಿ (ದೈವನಿಷ್ಠೆ) ಮತ್ತು ಸೇವಾಭಾವ (ಇತರರ ಸೇವೆ) ಮಾಡುವಂತಾಗಲಿ ಎಂದು ವಿನಂತಿಸುತ್ತಿದ್ದರು."

ಒಮ್ಮೆ ನಾನು ಮನೆಯಿಂದ ಹೊರಬಂದಾಗ, ನಾನು ಎಲ್ಲಿದ್ದರೂ ಮತ್ತು ಹೇಗಿದ್ದರೂ ತಾಯಿಯ ಆಶೀರ್ವಾದ ನನ್ನೊಂದಿಗಿತ್ತು. ತಾಯಿ ಯಾವಾಗಲೂ ನನ್ನೊಂದಿಗೆ ಗುಜರಾತಿ ಭಾಷೆಯಲ್ಲಿ ಮಾತನಾಡುತ್ತಾರೆ. ಗುಜರಾತಿಯಲ್ಲಿ, ಕಿರಿಯ ಅಥವಾ ಸಮಾನ ವಯಸ್ಕರಿಗೆ 'ನೀವು' ಎಂದು ಹೇಳಲು 'ತು' ಬಳಸಲಾಗುತ್ತದೆ. ನಾವು ದೊಡ್ಡವರು ಅಥವಾ ಹಿರಿಯರಿಗೆ 'ನೀವು' ಎಂದು ಹೇಳಬೇಕಾದರೆ, ನಾವು 'ತಮೆ' ಎಂದು ಹೇಳುತ್ತೇವೆ. ಬಾಲ್ಯದಲ್ಲಿ, ತಾಯಿ ನನ್ನನ್ನು ಯಾವಾಗಲೂ 'ತು' ಎಂದು ಕರೆಯುತ್ತಿದ್ದರು. ಆದರೆ, ಒಮ್ಮೆ ನಾನು ಮನೆ ಬಿಟ್ಟು ಹೊಸ ಹಾದಿ ಹಿಡಿದಾಗ ಅವರು 'ತು'ಬಳಸುವುದನ್ನು ನಿಲ್ಲಿಸಿದರು. ಅಂದಿನಿಂದ, ಅವರು ಯಾವಾಗಲೂ ನನ್ನನ್ನು 'ತಮೆ' ಅಥವಾ 'ಆಪ್' ಎಂದು ಸಂಬೋಧಿಸುತ್ತಾರೆ.

ತಾಯಿ ಯಾವಾಗಲೂ ನನಗೆ ಬಲವಾದ ಸಂಕಲ್ಪವನ್ನು ಹೊಂದಲು ಮತ್ತು ಬಡವರ ಕಲ್ಯಾಣದತ್ತ ಗಮನಹರಿಸುವಂತೆ ಪ್ರೇರೇಪಿಸುತ್ತಿದ್ದಾರೆ. ಗುಜರಾತಿನ ಮುಖ್ಯಮಂತ್ರಿ ನಾನೇ ಎಂದು ನಿರ್ಧರಿಸಿದಾಗ ನಾನು ರಾಜ್ಯದಲ್ಲಿ ಇರಲಿಲ್ಲ ಎಂದು ನನಗೆ ನೆನಪಿದೆ. ನಾನು ಗುಜರಾತಿಗೆ ಹೋದ ಕೂಡಲೇ, ನಾನು ನೇರವಾಗಿ ತಾಯಿಯನ್ನು ಭೇಟಿ ಮಾಡಲು ಹೋದೆ. ಅವರು ಅತ್ಯಂತ ಭಾವಪರವಶಳಾಗಿದ್ದರು ಮತ್ತು ನಾನು ಮತ್ತೆ ಅವಳೊಂದಿಗೆ ಇರುತ್ತೇನೆಯೇ ಎಂದು ವಿಚಾರಿಸಿದರು. ಆದರೆ ಅವರಿಗೆ ನನ್ನ ಉತ್ತರ ಗೊತ್ತಿತ್ತು! "ಸರ್ಕಾರದಲ್ಲಿ ನಿಮ್ಮ ಕೆಲಸ ಏನೆಂದು ನನಗೆ ಅರ್ಥವಾಗುವುದಿಲ್ಲ, ಆದರೆ ನೀವು ಎಂದಿಗೂ ಲಂಚ ತೆಗೆದುಕೊಳ್ಳಬಾರದು ಎಂಬುದು ನನ್ನ ಬಯಕೆ." ಎಂದು ತಾಯಿ ಹೇಳಿದ್ದರು.

ದೆಹಲಿಗೆ ತೆರಳಿದ ನಂತರ, ಅವರೊಂದಿಗಿನ ನನ್ನ ಭೇಟಿಗಳು ಮೊದಲಿಗಿಂತ ಕಡಿಮೆಯಾಗಿವೆ. ಕೆಲವೊಮ್ಮೆ ನಾನು ಗಾಂಧಿನಗರಕ್ಕೆ ಭೇಟಿ ನೀಡಿದಾಗ, ನಾನು ಸ್ವಲ್ಪ ಕಾಲ ತಾಯಿಯನ್ನು ಭೇಟಿ ಮಾಡುತ್ತೇನೆ. ನಾನು ಮೊದಲಿನಂತೆ ಅವರನ್ನು ಭೇಟಿಯಾಗಲು ಆಗುವುದಿಲ್ಲ. ಆದಾಗ್ಯೂ, ನನ್ನ ಅನುಪಸ್ಥಿತಿಯ ಬಗ್ಗೆ ನಾನು ತಾಯಿಯಿಂದ ಯಾವುದೇ ಅಸಮಾಧಾನವನ್ನು ಕೇಳಿಲ್ಲ. ಅವರ ಪ್ರೀತಿ ಮತ್ತು ವಾತ್ಸಲ್ಯ ಹಾಗೆಯೇ ಇದೆ; ಅವರ ಆಶೀರ್ವಾದ ಹಾಗೆಯೇ ಇರುತ್ತದೆ. "ನೀವು ದೆಹಲಿಯಲ್ಲಿ ಸಂತೋಷವಾಗಿದ್ದೀರಾ? ನಿಮಗೆ ಇಷ್ಟವಾ?" ಎಂದು ತಾಯಿ ಆಗಾಗ ನನ್ನನ್ನು ಕೇಳುತ್ತಾರೆ.

ನಾನು ಅವರ ಬಗ್ಗೆ ಚಿಂತಿಸಬಾರದು ಮತ್ತು ದೊಡ್ಡ ಜವಾಬ್ದಾರಿಗಳ ಮೇಲಿನ ಗಮನವನ್ನು ಕಳೆದುಕೊಳ್ಳಬಾರದು ಎಂದು ಅವರು ನನಗೆ ಕೇಳುತ್ತಾರೆ. ನಾನು ಅವರೊಂದಿಗೆ ಫೋನ್ನಲ್ಲಿ ಮಾತನಾಡಿದಾಗ, "ಯಾರಿಗೂ ಯಾವುದೇ ತಪ್ಪು ಅಥವಾ ಕೆಡಕು ಮಾಡಬೇಡಿ ಮತ್ತು ಬಡವರಿಗಾಗಿ ಕೆಲಸ ಮಾಡಿ." ಎಂದು ಹೇಳುತ್ತಾರೆ.

ನಾನು ನನ್ನ ಹೆತ್ತವರ ಜೀವನವನ್ನು ಹಿಂತಿರುಗಿ ನೋಡಿದರೆ, ಅವರ ಪ್ರಾಮಾಣಿಕತೆ ಮತ್ತು ಸ್ವಾಭಿಮಾನ ಅವರ ದೊಡ್ಡ ಗುಣಗಳಾಗಿವೆ. ಬಡತನ ಮತ್ತು ಅದರ ಸವಾಲುಗಳ ಹೊರತಾಗಿಯೂ, ನನ್ನ ಪೋಷಕರು ಎಂದಿಗೂ ಪ್ರಾಮಾಣಿಕತೆಯ ಹಾದಿಯನ್ನು ಬಿಡಲಿಲ್ಲ ಅಥವಾ ತಮ್ಮ ಸ್ವಾಭಿಮಾನದಲ್ಲಿ ರಾಜಿ ಮಾಡಿಕೊಂಡಿಲ್ಲ. ಯಾವುದೇ ಸವಾಲನ್ನು ಜಯಿಸಲು ಅವರ ಬಳಿ ಇರುವ ಏಕೈಕ ಮಂತ್ರವೆಂದರೆ- ಕಠಿಣ ಪರಿಶ್ರಮ, ನಿರಂತರ ಪರಿಶ್ರಮ!

ನನ್ನ ತಂದೆ ತಮ್ಮ ಜೀವನದಲ್ಲಿ ಯಾರಿಗೂ ಹೊರೆಯಾಗಲಿಲ್ಲ. ತಾಯಿ ಕೂಡ ಹಾಗೆಯೇ ಇರಲು ಪ್ರಯತ್ನಿಸುತ್ತಾರೆ - ಅವರು ಸಾಧ್ಯವಾದಷ್ಟು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಾರೆ.

ಈಗ, ನಾನು ತಾಯಿಯನ್ನು ಭೇಟಿಯಾದಾಗ, ಅವರು "ನನಗೆ ಯಾರ ಸೇವೆಯೂ ಬೇಡ, ನನ್ನ ಎಲ್ಲಾ ಅಂಗಗಳು ಕೆಲಸ ಮಾಡುತ್ತಿರುವಾಗಲೇ ಹೋಗಿಬಿಡಬೇಕು." ಎಂದು ಹೇಳುತ್ತಾರೆ.

ನನ್ನ ತಾಯಿಯ ಜೀವನ ಕಥೆಯಲ್ಲಿ, ನಾನು ಭಾರತದ ಮಾತೃಶಕ್ತಿಯ ತಪಸ್ಸು, ತ್ಯಾಗ ಮತ್ತು ಕೊಡುಗೆಯನ್ನು ನೋಡುತ್ತೇನೆ. ನಾನು ತಾಯಿಯನ್ನು ಮತ್ತು ಅವರಂತಹ ಕೋಟ್ಯಂತರ ಮಹಿಳೆಯರನ್ನು ನೋಡಿದಾಗ, ಭಾರತೀಯ ಮಹಿಳೆಯರಿಗೆ ಸಾಧಿಸಲಾಗದ್ದು ಯಾವುದೂ ಇಲ್ಲ ಎಂದು ನಾನು ಕಂಡುಕೊಂಡಿದ್ದೇನೆ.

ಕಷ್ಟದ ಪ್ರತಿಯೊಂದು ಕಥೆಗಳಾಚೆಯೂ ತಾಯಿಯ ಅದ್ಭುತ ಕಥೆಯೊಂದು ಇರುತ್ತದೆ.

ಪ್ರತಿ ಹೋರಾಟಕ್ಕಿಂತ ಹೆಚ್ಚಿನದು, ತಾಯಿಯ ಬಲವಾದ ಸಂಕಲ್ಪ.

ಅಮ್ಮಾ, ನಿಮಗೆ ಜನ್ಮದಿನದ ಶುಭಾಶಯಗಳು.

ಜನ್ಮ ಶತಮಾನೋತ್ಸವ ವರ್ಷಕ್ಕೆ ಕಾಲಿಡುತ್ತಿರುವ ನಿಮಗೆ ಶುಭಾಶಯಗಳು.

ನಿಮ್ಮ ಜೀವನದ ಬಗ್ಗೆ ಸಾರ್ವಜನಿಕವಾಗಿ ಬರೆಯುವ ಧೈರ್ಯವನ್ನು ನಾನು ಇದುವರೆಗೆ ತೋರಿಸಿರಲಿಲ್ಲ.

ನಿಮ್ಮ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಮತ್ತು ನಮ್ಮೆಲ್ಲರಿಗೂ ನಿಮ್ಮ ಆಶೀರ್ವಾದಕ್ಕಾಗಿ ನಾನು ದೇವರನ್ನು ಪ್ರಾರ್ಥಿಸುತ್ತೇನೆ.

ನಿಮ್ಮ ಪಾದಕಮಲಗಳಿಗೆ ನನ್ನ ನಮಸ್ಕಾರಗಳು. ■

PMO India @PMOIndia ·
दुनिया में हमारे IT professionals की स्किल और इनोवेशन को लेकर Trust नई ऊंचाई पर है।

यही Trust, यही Reputation, इस दशक में भारत के Biotech sector, भारत के bio प्रोफेशनल्स के लिए होते हम देख रहे हैं: PM @narendramodi



Rajnath Singh @rajnathsingh ·
The 'Agnipath' scheme approved by the CCS chaired by Prime Minister Shri @narendramodi is a truly transformative reform which will enhance the combat potential of the Armed Forces, with younger profile and technologically adept soldiers. #BharatKeAgniveer

Amit Shah @AmitShah ·
आज भी 70% भारत गांवों में बसता है, सुविधाओं के अभाव के कारण यह देश के विकास में अपना योगदान देने से वंचित रह जाता है।

अगर इसी 70% टैलेंट को हमने देश के अर्थतंत्र को गति देने के काम से जोड़ दिया तो $5 ट्रिलियन की अर्थव्यवस्था का मोदी जी का सपना 5 सालों में पूरा होते हुए देखेंगे।

Nitin Gadkari @nitin_gadkari ·
The Union Cabinet chaired by Prime Minister Shri @narendramodi Ji has approved the development of the first phase of the new Greenfield Airport at Dholera, Gujarat at an estimated cost of ₹1305 crore. Plan for the year 2025-26 for operation of this airport has been created.

Piyush Goyal @PiyushGoyal
India stands with its fishermen!

At the WTO MC12, urged that the outcomes of the fisheries subsidies negotiations provide level-playing field, equity and thrust to the artisanal and small-scale fishers, who are the backbone of global fisheries.

Dharmendra Pradhan @dpr...
PM @narendramodi ji's government has taken numerous steps to harness the Yuva Shakti.

NEP 2020, @AIMtoInnovate, #StartUpIndia & other path-breaking initiatives are helping the youth realise their potential. We have resolved to empower 100% youth. #8SaalYuvaShaktiKeNaam

Development and heritage must go ahead together: PM

Sarang Dastane & Bhavika Jain | TNN

Pune/Mumbai: Prime Minister Narendra Modi on Tuesday said that it was the responsibility of everyone to keep India's ancient identity and traditions alive as it will help strengthen national unity.

"When modern technology and infrastructure are becoming synonymous with a country's development, we are making sure that both development and heritage move forward together," he said while inaugurating the renovated shila (rock) temple at the Sant Tukaram Maharaj Mandir in Dehu, around 40km from Pune, on Tuesday.

Prime Minister Narendra Modi visits the Jagatguru Shrisant Tukaram Maharaj temple at Dehu in Pune on Tuesday

Deputy chief minister Ajit Pawar, leader of opposition Devendra Fadnavis and state BJP unit chief Chandrakant Patil were present for the event which was attended by a large number of warkaris (devotees) and the temple trustees. Modi said that saints have always come ahead to guide society.

PM security tells Aaditya to not travel in CM car: PM Modi's security on Tuesday asked Maharashtra minister Aaditya Thackeray, who was travelling with chief minister Uddhav Thackeray, to get into another car, saying his name was mentioned against the other vehicle on their list.

"The CM was visibly upset and told them he is a cabinet minister too," said a source. He was then allowed to travel in the CM's car. Uddhav and Aaditya welcomed Modi at INS Shikra after which they were to travel as part of Modi's convoy to the Raj Bhavan. TNN

PM: Media's role is to bring to the fore govt, society's shortcomings

HT Correspondent
letters@hindustantimes.com

MUMBAI: The role of media is to bring to fore shortcomings in society and government and also highlight positive news, Prime Minister Narendra Modi said on Tuesday and praised the efforts of journalists during the Covid-19 pandemic.

"The positive contribution of India's media helped the country a lot in dealing with the biggest crisis in 100 years," Modi said at an event to commemorate 200 years of Mumbai Samachar, a Gujarati daily published from Maharashtra's capital city.

Narendra Modi SATISH BATE/HT

media in the country's independence, Modi said conducting healthy discussions is part of Indian tradition.

"The role of media is to educate people. If there are some shortcomings in society and government, then the role of media

PM said. "As much as the media has the right to criticise, it has the same responsibility to bring positive news to the fore."

Maharashtra chief minister Uddhav Thackeray was also present during the bicentennial anniversary of the Gujarati daily. While Modi called Mumbai and Maharashtra "maternal home" of Gujarati language, Thackeray hoped that "ties between Gujarati and Marathis continue to grow stronger in future as well." "Both Gujarati and Marathi have mixed in Maharashtra like sugar in milk. I hope that ties between Gujarati and Marathi continue to grow stronger in future as

10 lakh persons to get govt. jobs in 18 months, announces Modi

Recruitment likely to focus on vacancies in Railways, armed forces and GST dept.

SPECIAL CORRESPONDENT
NEW DELHI

Prime Minister Narendra Modi on Tuesday announced that his government would be recruiting 10 lakh personnel within the next 18 months, "in a mission mode", a major drive after recruitment to government jobs was derailed following the COVID-19 pandemic.

In a tweet from his official handle @PMOIndia, early on Tuesday morning, Mr. Modi said: "PM @narendramodi reviewed the status of Human Resources in all departments and ministries and instructed that recruitment of 10 lakh people be done by the government in mission mode in the next 1.5 years."

The announcement came on a day when Defence Minister Rajnath Singh and the three Service Chiefs announced the 'Agnipath' scheme of recruiting youth between the ages of 17.5 and 21 for a four-year stint in the armed forces with a provision of voluntary retention after this period, based on merit.

Unemployment has emerged as one of the major challenges before the Modi government after two years of the pandemic and its attendant economic woes.

An additional problem with regard to recruitment to government jobs has been the frequent leak of examination papers both for departments such as the Railways and for teacher recruitment as well. During the recently concluded Uttar Pradesh election in fact, police lathi-charged protesting students in Prayagraj and in Patna, Bihar, who had been preparing to appear for Railway Recruitment Board exams but were told that because the question paper leaked, the exam had to be cancelled.

While not sharing figures of which department would be recruiting how many, a senior government official shared that much of the recruitment would be in the Railways, armed forces (Agnipath) and regular recruitment which had been frozen through the pandemic), the Central Paramilitary Forces, Goods and Services Tax (GST) departments, including customs and excise and administrative staff for government-owned banks and insurance companies.

"The recruitment for GST departments, which are revenue generating departments is important, and for posts which were earlier known as State tax inspectors, recruitment will cover customs and excise as GST pertains to them too. In government-owned insurance firms, while field staff have been recruited regularly, administrative recruitment hasn't taken place in any significant way for the last 15 years," the official said.

It is hoped that the setting of a deadline will help recruitments happen fast.

UNEMPLOYMENT DECREASED: LABOUR SURVEY ▶ PAGE 11

Empty posts | As of March 2020, 8.8 lakh jobs were vacant in the Union government. In 2019, the number of vacant posts was around 9.2 lakh (23% of the sanctioned posts) and in 2018 there were 6.8 lakh such vacancies (17% of sanctioned posts). A look at the group-wise share of vacant posts to the total posts across Union Ministries and departments.

Group	No. of staff in service (IN LAKH)	No. of vacant posts (IN LAKH)	Vacancy as a share of sanctioned posts
A	1.14	0.21	15.5%
B (G)	0.80	0.17	16.4%
B (NG)	1.79	0.81	31%
C	28.12	7.67	21.4%
Total	31.91	8.86	21.7%

■ Unemployment has emerged as one of the major challenges before the Union government due to two years of the pandemic and its economic consequences.

Union government employees coming out of North Block after their day's work, in New Delhi.

PM lauds unsung heroes of Freedom Struggle

He opens commemorative gallery

SPECIAL CORRESPONDENT

'Govt schemes benefit all without discrimination'

Prime Minister Narendra Modi on Tuesday said that the benefits of the government schemes are available to all without discrimination and efforts are on to provide basic requirements to all the poor.

PM Modi was addressing the gathering at Dehu in Pune where he inaugurated Jagatguru Shrisant Tukaram Maharaj Temple. Prime Minister said, "Today country is being run on the mantra sabka saath, sabka vikas, sabka vishwas and sabka prayas. Everyone is getting benefits from government schemes without any discrimination."

"The schemes like power supply, water, housing, and health are being taken to every poor," he said.

Prime Minister Narendra Modi

Have held open talks on difficult social topics: PM

EXPRESS NEWS SERVICE
MUMBAI, PUNE, JUNE 14

AMID GROWING unrest across the country, Prime Minister Narendra Modi on Tuesday said that while open and healthy discussions on most difficult social topics has been a practice in India, it needs to be strengthened.

Speaking at the Dwishatabdi Mahotsav (200th anniversary) of Mumbai Samachar, a Gujarati daily, at Bandra-Kurla Complex in Mumbai, the PM, while lauding the role played by the media during the Covid-19 pandemic, said that while the media has the right to criticise and point out shortcomings of the government, it has an equal responsibility to report positive news.

"For thousands of years, we have conducted healthy debate, healthy criticism and right reasoning as a part of the social system. We have open and healthy discussions on very difficult social topics. This has been the practice in India, which we have to strengthen. This country is a country of rich tradition that is carried forward through the medium of debates and discussions," he added.

On a day-long trip to Maharashtra, the PM also inaugurated the Jal Bhushan Building and Gallery of Revolutionaries at Raj Bhavan in Mumbai.

Maintaining that indifference is shown towards the unsung heroes of the country, he added that this has continued for a very long time. He recited how freedom fighter Shyamji Krishna Varma's ashes had to wait for a long time to reach India, till he brought them back.

The function was attended by Governor Bhagat Singh Koshyari and Chief Minister Uddhav Thackeray among others.

Amid ongoing bitter relation between the Shiv Sena and the BJP in Maharashtra, this is the first time in over four months

Prime Minister Narendra Modi at Jagatguru Shrisant Tukaram Maharaj temple in Pune on Tuesday. Rajesh Stephen

with Modi. The CM had skipped some of the PM's previous visits to the city and the state.

Addressing the inauguration function, the PM said that Maharashtra has inspired the country in many fields and there is a very rich legacy of social reformers from Sant Tukaram Maharaj to Babasaheb Ambedkar.

The PM recalled the contribution of Lokmanya Bal Gangadhar Tilak, the Chapekar brothers, Vasudev Balwant Phadke and madam Bhikaji Cama. "The role of Veer Savarkar in India's freedom movement was immense. One must go to Andaman and Nicobar Islands to see the struggle and atrocities inflicted in prison. Students should be taken to such places to draw inspiration from our freedom fighters," the PM said.

Earlier in the day, at the inaugurating the shila (rock) temple at the existing Sant Tukaram Maharaj Temple at Dehu near Pune, the PM said that "wari" – the annual pilgrimage undertaken by 'warkaris' or devotees – has inspired the country's forward march. He said his government was ensuring that India's "vikas" (development) and "virasat" (heritage) move

RNI No. :
DELKAN/2020/78828
July: 1-15, 2022

ನ್ಯೂ ಇಂಡಿಯಾ
ಸಮಾಚಾರ
ಪಾಕ್ಷಿಕ

RNI Registered No DELKAN/2020/78828, Delhi Postal License No DL(S)-1/3543/2020-22, WPP NO U (S)-91/2020-22, posting at BPC, Meghdoot Bhawan, New Delhi - 110 001 on 26-30 advance Fortnightly (Publishing Date June 17, 2022, Pages - 60)

ಶ್ರೀ ಜಗನ್ನಾಥ ರಥಯಾತ್ರೆ

(2022ರ ಜುಲೈ 1 ರಿಂದ 9ರವರೆಗೆ)

ಹಿಂದೂ ಧರ್ಮದಲ್ಲಿ ಜಗನ್ನಾಥ ರಥಯಾತ್ರೆಗೆ ಅಪಾರವಾದ ಪವಿತ್ರ ಸ್ಥಾನ, ಮಹತ್ವವಿದೆ. ಪುರಿ (ಒಡಿಶಾ)ಯಲ್ಲಿ ಈ ಯಾತ್ರೆಯನ್ನು ಪ್ರತಿ ವರ್ಷ ಆಯೋಜಿಸಲಾಗುತ್ತದೆ. ಹಿಂದೂ ಪಂಚಾಂಗದ ಪ್ರಕಾರ, ಪುರಿ ಯಾತ್ರೆಯನ್ನು ಪ್ರತಿ ವರ್ಷ ಆಷಾಢ ಮಾಸದ ಶುಕ್ಲ ಪಕ್ಷದ ಎರಡನೇ ದಿನದಂದು (ಈ ಬಾರಿ ಜುಲೈ 1) ನಡೆಸಲಾಗುತ್ತದೆ. ಇದರಲ್ಲಿ, ಭಗವಾನ್ ಜಗನ್ನಾಥ, ಸಹೋದರ ಬಲಭದ್ರ ಮತ್ತು ಸಹೋದರಿ ಸುಭದ್ರೆಯ ವಿಗ್ರಹಗಳನ್ನು ಮೂರು ವಿಭಿನ್ನ ರಥಗಳಲ್ಲಿಟ್ಟು ನಗರ ಪ್ರದಕ್ಷಿಣೆಗೆ ಕರೆದೊಯ್ಯಲಾಗುತ್ತದೆ. ಜಗನ್ನಾಥಪುರಿಯಷ್ಟೇ ಅಲ್ಲದೆ, ಭಗವಾನ್ ಜಗನ್ನಾಥಪುರಿ ರಥಯಾತ್ರೆಯನ್ನು ಗುಜರಾತ್, ಅಸ್ಸಾಂ, ಜಮ್ಮು, ದೆಹಲಿ, ಆಂಧ್ರಪ್ರದೇಶ, ಅಮೃತಸರ, ಬೋಪಾಲ್, ಬನಾರಸ್ ಮತ್ತು ಲಕ್ನೋ ಹಾಗು ಬಾಂಗ್ಲಾದೇಶ, ಸ್ಯಾನ್ ಫ್ರಾನ್ಸಿಸ್ಕೋ ಮತ್ತು ಲಂಡನ್‌ನಲ್ಲಿ ಸಹ ನಡೆಸಲಾಗುತ್ತದೆ.

"ಭಗವಾನ್ ಜಗನ್ನಾಥ ರಥಯಾತ್ರೆಯ ಶುಭ ಸಂದರ್ಭದಲ್ಲಿ ನಿಮ್ಮೆಲ್ಲರಿಗೂ ನನ್ನ ಹಾರ್ದಿಕ ಶುಭಾಶಯಗಳು. ಪೂಜ್ಯ ಭಕ್ತಿ ಮತ್ತು ಭಾವದಿಂದ ಕೂಡಿದ ಈ ಯಾತ್ರೆಯು ದೇಶವಾಸಿಗಳ ಜೀವನದಲ್ಲಿ ಸಂತೋಷ, ಸಮೃದ್ಧಿ, ಸೌಭಾಗ್ಯ ಮತ್ತು ಆರೋಗ್ಯವನ್ನು ತರಲಿ ಎಂದು ನಾನು ಬಯಸುತ್ತೇನೆ. ಜೈ ಜಗನ್ನಾಥ್!"

ನರೇಂದ್ರ ಮೋದಿ, ಪ್ರಧಾನಮಂತ್ರಿ

ಸಂಪಾದಕರು
ಜೈದೀಪ್ ಭಟ್ನಾಗರ್
ಪ್ರಧಾನ ಮಹಾನಿರ್ದೇಶಕರು,
ಪಿಐಬಿ ನವದೆಹಲಿ

ಮುದ್ರಕರು ಮತ್ತು ಪ್ರಕಾಶಕರು
ಸತ್ಯೇಂದ್ರ ಪ್ರಕಾಶ್
ಪ್ರಧಾನ ಮಹಾನಿರ್ದೇಶಕರು,
ಸೆಂಟ್ರಲ್ ಬ್ಯೂರೋ ಆಫ್ ಕಮ್ಯೂನಿಕೇಷನ್ ಪರವಾಗಿ

ಪ್ರಕಾಶಕರು
ಸೆಂಟ್ರಲ್ ಬ್ಯೂರೋ ಆಫ್ ಕಮ್ಯೂನಿಕೇಷನ್
ಕೊಠಡಿ ಸಂ. 278, 2ನೇ ಮಹಡಿ, ಸೂಚನಾ ಭವನ,
ನವದೆಹಲಿ - 110003

ಮುದ್ರಣ:
ಇನ್‌ಫಿನಿಟಿ ಅಡ್ವರ್ಟೈಸಿಂಗ್ ಸರ್ವೀಸಸ್ ಪ್ರೈ. ಲಿಮಿಟೆಡ್
ಎಫ್‌ಬಿಡಿ-ಒನ್ ಕಾರ್ಪೋರೇಟ್ ಪಾರ್ಕ್, 10ನೇ ಮಹಡಿ
ನವದೆಹಲಿ-ಫರೀದಾಬಾದ್ ಬಾರ್ಡರ್, ಎನ್‌ಹೆಚ್-1, ಫರೀದಾಬಾದ್-121003

Kannada Vol. 3
Issue 01